# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಆಗಸ್ಟ್ 20, 2020

ಸಂಪುಟ : 47 ಸಂಚಿಕೆ : 102 ದೂರವಾಣಿ : 254736 ವಾಟ್ಸ್ಆ್ಯಪ್ : 91642 99999 ಪುಟ : 8 ರೂ : 3.00 www.janathavani.com Email: janathavani@mac.com




## ಬೆಳೆ ಸಮೀಕ್ಷೆ ಆ್ಯಪ್ ಕುರಿತು ತರಬೇತಿ



ಜಗಳೂರು, ಆ.19- ತಾಲ್ಲೂಕಿನ ಚಿಕ್ಕಬನ್ನಿಹಟ್ಟಿ ಮತ್ತು ಹೊಸಕೆರೆ ಗ್ರಾಮದಲ್ಲಿ ರೈತರಿಗೆ ಬೆಳೆ ಸಮೀಕ್ಷೆಯ ಮಹತ್ವ ಮತ್ತು ಬೆಳೆ ಸಮೀಕ್ಷೆ ಆ್ಯಪ್ ಬಳಕೆ ಕುರಿತು ತರಬೇತಿಯನ್ನು ರೈತರಿಗೆ ನೀಡಲಾಯಿತು. ಕೃಷಿ ಇಲಾಖೆ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥ ಸಂಸ್ಥೆ ವತಿಯಿಂದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ರೈತರು ಬೆಳೆ ಸಮೀಕ್ಷೆ ಮೊಬೈಲ್ ಆಪ್ ಬಳಸಿ, ತಮ್ಮ ಜಮೀನಿನಲ್ಲಿ ಬೆಳೆದ ಬೆಳೆಗಳ ವಿವರವನ್ನು ತಾವೇ ಛಾಯಾಚಿತ್ರ ಸಹಿತ ದಾಖಲಿಸುವ ಮಾಹಿತಿಯನ್ನು ಸರಳವಾಗಿ ವಿವರಣೆ ನೀಡಲಾಯಿತು.


ಜಮೀನಿನ ಪಹಣಿಯಲ್ಲಿ ಬೆಳೆದ ಬೆಳೆ ಅಥವಾ ವಿಸ್ತೀರ್ಣ ಸೇರಿಸಿ,.ರೈತರ ಬೆಳೆ ಸಮೀಕ್ಷೆ ಮಾಡುವ ಬಗ್ಗೆ ಅಧಿಕಾರಿಗಳು ಸಮಗ್ರಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಉಪ ಕೃಷಿ ನಿರ್ದೇಶಕ ಕೆ.ಎಸ್.ಶಿವಕುಮಾರ್, ಸಹಾಯಕ ಕೃಷಿನಿರ್ದೇಶಕ ಶ್ರಿನಿವಾಸುಲು. ಬಿ.ವಿ. ಆತ್ಮ ರೇಣುಕುಮಾರ್, ರೇಖಾ, ಧರ್ಮಸ್ಥಳ ಸಂಸ್ಥೆಯ ಪ್ರತಿನಿಧಿಗಳು ಸಹಾಯಕ ಕೃಷಿ ಅಧಿಕಾರಿಗಳು ಭಾಗವಹಿಸಿದರು.

## ಹೊನ್ನಾಳಿ ಉಪವಿಭಾಗದ ವ್ಯಾಪ್ತಿಯಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೊನ್ನಾಳಿ ಉಪವಿಭಾಗದ ವ್ಯಾಪ್ತಿಯ ಬೇಲಿಮಲ್ಲೂರು, ಹಿರೆಗೋಣಿಗೆರೆ, ಮಾಸಡಿ, ಅರಕೆರೆ ಗ್ರಾಮ ಪಂಚಾಯತಿಗಳ ವ್ಯಾಪ್ತಿ ಮತ್ತು ಗೊಲ್ಲರಹಳ್ಳಿ ಹಾಗೂ ಹೊನ್ನಾಳಿ ಟಿ.ಬಿ. ವೃತ್ತ ವ್ಯಾಪ್ತಿಯಲ್ಲಿ ಬೆಸ್ಕಾಂ ವತಿಯಿಂದ ಕಾಮಗಾರಿ ಹಮ್ಮಿಕೊಂಡಿರುವ ಪ್ರಯುಕ್ತ ಇಂದು ಬೆಳಿಗ್ಗೆ 10ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲವೆಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 19.08.2020ರಂದು ನಿಧನರಾದ ನಮ್ಮ ದೇವಸ್ಥಾನ ಸಮಿತಿಯ ಹಿರಿಯ ಉಪಾಧ್ಯಕ್ಷರಾದ

**ಶ್ರೀ ಪರಶುರಾಮಪ್ಪ (ಪರಸಪ್ಪ ಮೇಸ್ತ್ರಿ)**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಆಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಎಲ್ಲಾ ಪದಾಧಿಕಾರಿಗಳು

**ಶ್ರೀ ಚೌಡೇಶ್ವರಿ ದೇವಸ್ಥಾನ ಸಮಿತಿ**

1ನೇ ಮೇನ್, ವಿನೋಬನಗರ, ದಾವಣಗೆರೆ.

## ಅನಂತ್ ವೀರಪ್ಪ ಕುರ್ಡೇಕರ್ ನಿಧನ



ದಾವಣಗೆರೆ ಚೌಕಿಪೇಟೆ ವಾಸಿ, ಶ್ರೀ ಕೊಟ್ಟೂರೇಶ್ವರ ಜ್ಯೂಯಲರಿ ಮಾರ್ಟ್ ಮಾಲೀಕರಾದ **ಶ್ರೀ ಅನಂತ್ ವೀರಪ್ಪ ಕುರ್ಡೇಕರ್** (72) ಅವರು ದಿನಾಂಕ 19.08.2020ರ ಬುಧವಾರ ರಾತ್ರಿ 9.30 ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 20.08.2020ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತ ಕುಟುಂಬ ವರ್ಗ

ಮೊ. : 9611245808, 9620636867

॥ ಶ್ರೀ ಆಂಜನೇಯ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು ಕತ್ತಲಗೆರೆ ಗ್ರಾಮದ ವಾಸಿ

**ಶ್ರೀ ಕೆ.ಬಿ. ಅನಿಲ್ ಕುಮಾರ್ ಮತ್ತು ಸಹೋದರರು**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 12.08.2020ನೇ ಬುಧವಾರ ಬೆಳಗಿನ ಜಾವ 2.00 ಗಂಟೆಗೆ ನಮ್ಮ ತಂದೆಯವರಾದ **ಶರಣ ಶ್ರೀ ಎಸ್. ಬಸಪ್ಪ**

**(ಮಾಜಿ ನಿರ್ದೇಶಕರು, ದಾವಣಗೆರೆ ಸಕ್ಕರೆ ಕಂಪನಿ)**

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**"ಕೈಲಾಸ ಶಿವಗಣಾರಾಧನೆ"ಯನ್ನು**

**ದಿನಾಂಕ : 20.08.2020ನೇ ಗುರುವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗೃಹ, ಕತ್ತಲಗೆರೆ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇಲ್ಲಿ ನೆರವೇರಿಸಲು** ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಪ್ರಾರ್ಥಿಸುತ್ತೇವೆ.

ಇಂತಿ ದುಃಖತಪ್ತರು : **ಕತ್ತಲಗೆರೆ ಬಸಪ್ಪ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಸೊಕ್ಕೇರ ವಂಶಸ್ಥರು, ಕುಂಬಳೂರು, ಕುಂದೂರು ಸಹೋದರರು, ಕತ್ತಲಗೆರೆ ಹಾಗೂ ಕತ್ತಲಗೆರೆ ಗ್ರಾಮಸ್ಥರು ಹಾಗೂ ಬಂಧುಮಿತ್ರರು.**

**ಫೋ. : 94823 69146, 63607 47674**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


# ಜಿಲ್ಲೆಗೆ ಸಚಿವ ಸ್ಥಾನ ನೀಡಲೇಬೇಕು



ಹೊನ್ನಾಳಿಯಲ್ಲಿ ಕೃಷಿ ಸಚಿವ ಬಿ.ಸಿ. ಪಾಟೀಲ್

ಹೊನ್ನಾಳಿ, ಆ.19- ದಾವಣಗೆರೆ ಜಿಲ್ಲೆಗೆ ಸಚಿವ ಸ್ಥಾನ ನೀಡಲೇಬೇಕು ಎಂಬುದು ತಮ್ಮ ಒತ್ತಾಯವಾಗಿದೆ ಎಂದು ಸಚಿವ ಬಿ.ಸಿ. ಪಾಟೀಲ್ ಹೇಳಿದರು.

ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಅವರ ಇಲ್ಲಿನ ನಿವಾಸದಲ್ಲಿ ನಿನ್ನೆ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಜಿಲ್ಲೆಯ ಅಭಿವೃದ್ಧಿಯ ಹಿತ ದೃಷ್ಟಿಯಿಂದ ಸ್ಥಳಿಯ ಶಾಸಕರೊಬ್ಬರಿಗೆ ಸಚಿವ ಸ್ಥಾನ ನೀಡಿ, ಜಿಲ್ಲೆಯ ಉಸ್ತುವಾರಿ ವಹಿಸಬೇಕು ಎಂಬುದು ತಮ್ಮ ಅಭಿಪ್ರಾಯವಾಗಿದೆ ಎಂದು ತಿಳಿಸಿದರು.

ನೆರೆಯಿಂದ ತತ್ತರಿಸಿರುವ ಬೆಳಗಾವಿಯಲ್ಲಿ ಪರಿಹಾರ ಕಾರ್ಯಗಳ ಉಸ್ತುವಾರಿ ನೋಡುವುದನ್ನು ಬಿಟ್ಟು ಡಿಸಿಎಂ ಹುದ್ದೆ ಕೇಳಲು ಸಚಿವ ರಮೇಶ್ ಜಾರಕಿಹೊಳಿ ದೆಹಲಿಗೆ ತೆರಳಿದ್ದಾರೆ ಇದು ಸರಿಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಬಿ.ಸಿ. ಪಾಟೀಲ್, ರಮೇಶ್ ಜಾರಕಿಹೊಳಿ ಅನ್ಯ ಕಾರ್ಯನಿಮಿತ್ತ ದೆಹಲಿಗೆ ಹೋಗಿದ್ದಾರೆ. ರಾಜ್ಯದ ನೀರಾವರಿ ಯೋಜನೆಗಳ ಕುರಿತು ಚರ್ಚೆ ನಡೆಸಲು ಹೋಗಿರಬಹುದು ಎಂದರು.

ಕೃಷಿ ಇಲಾಖೆಯ ಯೋಜನೆಗಳ ಬಗ್ಗೆ ಚರ್ಚಿಸಲು ನಾನೂ ದೆಹಲಿಗೆ ಹೋಗಬೇಕು ಅಂದುಕೊಂಡಿದ್ದೇನೆ. ದೆಹಲಿಗೆ ಹೋದ ತಕ್ಷಣ ಡಿಸಿಎಂ ಹುದ್ದೆ ಕೇಳುವುದಕ್ಕೇ ಹೋಗಿದ್ದಾರೆ ಎಂದು ಅರ್ಥೈಸುವುದು ತಪ್ಪು ಎಂದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕೂಡ ದೆಹಲಿಗೆ ಹೋಗುತ್ತಾರೆ. ಅಂದಾಕ್ಷಣ ಅವರು ಪ್ರಧಾನ ಮಂತ್ರಿ ಆಗಲಿಕ್ಕೆ ದೆಹಲಿಗೆ ಹೋಗಿ ದ್ದಾರೆ ಎಂದು ಹೇಳಲು ಆಗುತ್ತದೆಯೇ ಎಂದು ಮರು ಪ್ರಶ್ನೆ ಹಾಕಿದರು.

ಪ್ರವಾಹದಿಂದ ರಾಜ್ಯದಲ್ಲಿನ ಬೆಳೆ ಹಾನಿಗೆ ಸಂಬಂಧಿಸಿದಂತೆ 400 ಕೋಟಿ ರೂ.ಗಳಷ್ಟು ಪರಿಹಾರ ನೀಡಬೇಕು ಎಂದು ಕೇಂದ್ರಕ್ಕೆ ಮನವಿ ಸಲ್ಲಿಸಲಾಗಿದೆ. ಈ ಕುರಿತು ಶೀಘ್ರವೇ ಇನ್ನೊಮ್ಮೆ ಒತ್ತಡ ಹೇರಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ, ಜಿ.ಪಂ. ಸದಸ್ಯರಾದ ಎಂ.ಆರ್. ಮಹೇಶ್, ಉಮಾ ರಮೇಶ್, ಸಿ. ಸುರೇಂದ್ರನಾಯ್ಕ, ತಾ.ಪಂ. ಪ್ರಭಾರ ಅಧ್ಯಕ್ಷ ಕೆ. ಎಲ್. ರಂಗನಾಥ್, ನ್ಯಾಮತಿ ತಾ.ಪಂ. ಅಧ್ಯಕ್ಷ ಎಸ್.ಪಿ. ರವಿಕುಮಾರ್, ಎಪಿಎಂಸಿ ಅಧ್ಯಕ್ಷ ಜಿ.ಎಸ್. ಸುರೇಶ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ಜೆ.ಕೆ. ಸುರೇಶ್, ಪ.ಪಂ ಸದಸ್ಯರು, ಮುಖಂಡರಾದ ಶಾಂತರಾಜ್ ಪಾಟೀಲ್, ಎಂ.ಪಿ. ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

# ಪ್ರತಿಭಾನ್ವಿತರಿಗೆ ರಾಮಕೃಷ್ಣಾಶ್ರಮದಲ್ಲಿ ಪುಸ್ತಕ ವಿತರಣೆ



ಹರಿಹರ

ಹರಿಹರ, ಆ.19- ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ರಾಮಕೃಷ್ಣ ಆಶ್ರಮದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಗಿರಿಯಮ್ಮ ಪದವಿ ಪೂರ್ವ ಕಾಲೇಜಿನ 20 ವಿದ್ಯಾರ್ಥಿಗಳಿಗೆ ಆಶ್ರಮದ ಪುಸ್ತಕಗಳನ್ನು ಹಾಗೂ ನೋಟ್ ಪುಸ್ತಕ, ಪೆನ್‌ಗಳನ್ನು ನೀಡಿ ಗೌರವಿಸಲಾಯಿತು.

ಇಬ್ಬರು ವಿದ್ಯಾರ್ಥಿನಿಯರಿಗೆ ವಿಶೇಷ ಬಹುಮಾನಗಳನ್ನು ನೀಡಲಾಯಿತು. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ (ಕನ್ನಡ ಮಾಧ್ಯಮದಲ್ಲಿ) ಪ್ರಥಮ ಸ್ಥಾನ ಪಡೆದ ಅಭಿಷೇಕ್ ಹಾಗೂ ಅವರ ತಂದೆ ಮಂಜುನಾಥ್, ತಾಯಿ ನೇತ್ರಾವತಿ ಅವರನ್ನು ಗೌರವಿಸಲಾಯಿತು. ಮುಂದಿನ ವಿದ್ಯಾಭ್ಯಾಸಕ್ಕೆ ಧನ ಸಹಾಯ ಮಾಡುವ ಭರವಸೆಯನ್ನು ನೀಡಲಾಯಿತು.

ಕಳೆದ 3 ವರ್ಷಗಳಿಂದ ಆಶ್ರಮದಲ್ಲಿಯೇ ಸ್ವಯಂ ಸೇವಕನಾಗಿದ್ದುಕೊಂಡು ಸೇವೆ ಮಾಡುತ್ತಾ ಎಸ್ಸೆಸ್ಸೆಲ್ಸಿಯಲ್ಲಿ ಒಟ್ಟು 563 ಅಂಕಗಳನ್ನು ಪಡೆದಿರುವ ಗಗನ ಎಂ. ಕಾಕೋಳ ಅವರನ್ನು ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸ್ವಾಮಿ ಶಾರದೇಶಾನಂದ ಸ್ವಾಮಿಗಳು ಉಪಸ್ಥಿತರಿದ್ದರು.

## ರೈತರೇ ಆ್ಯಪ್ ಮೂಲಕ ಬೆಳೆ ನೋಂದಣಿ ಮಾಡಬಹುದು



ಸಹಾಯಕ ಕೃಷಿ ನಿರ್ದೇಶಕರು

ಹರಿಹರ, ಆ.19- ಕೃಷಿ ಇಲಾಖೆ ಇತ್ತೀಚಿಗೆ ಹೊರಡಿಸಿದ ರೈತರ ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್ ಮುಖಾಂತರ ರೈತರು ತಾವು ಬೆಳೆದ ಬೆಳೆಯ ಮಾಹಿತಿಯನ್ನು ಛಾಯಾಚಿತ್ರ ಸಹಿತ ಸಮೀಕ್ಷೆ ಆ್ಯಪ್‌ನಲ್ಲಿ ನೋಂದಣಿ ಮಾಡಬಹುದಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಕೃಷಿ ಮತ್ತು ಕಂದಾಯ ಇಲಾಖೆಯಿಂದ ಸೂಚಿತಗೊಂಡಿರುವ ಖಾಸಗಿ ನಿವಾಸಿಗಳು ಮತ್ತು ಇಲಾಖಾ ಸಿಬ್ಬಂದಿಗಳು ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್ ಬಳಕೆ ಕುರಿತು ರೈತರಿಗೆ ತಾಂತ್ರಿಕ ಮಾಹಿತಿ ನೀಡುತ್ತಿದ್ದು, ಯಾವುದೇ ಗೊಂದಲವಿದ್ದಲ್ಲಿ ಖಾಸಗಿ ನಿವಾಸಿ ಮತ್ತು ಕೃಷಿ ಇಲಾಖೆಯನ್ನು ಸಂಪರ್ಕಿಸಬಹುದಾಗಿದೆ ಎಂದಿದ್ದಾರೆ.

ಗಂಗನರಸಿ, ಹೊಟ್ಟಿಗನಹಳ್ಳಿ ಗ್ರಾಮಗಳಲ್ಲಿ ರೈತರು ಸ್ವತಃ ಮೊಬೈಲ್ ಆ್ಯಪ್ ಮುಖಾಂತರ ತಮ್ಮ ಜಮೀನಿನಲ್ಲಿ ಬೆಳೆದ ಬೆಳೆಗಳ ಮಾಹಿತಿಯನ್ನು ನೋಂದಣಿ ಮಾಡಿಕೊಳ್ಳುತ್ತಿದ್ದಾರೆ. ಇದೇ ರೀತಿಯಾಗಿ ತಾಲ್ಲೂಕಿನ ಎಲ್ಲಾ ಗ್ರಾಮದ ರೈತರು ತಾವೇ ಬೆಳೆ ಸಮೀಕ್ಷೆ ಮಾಡಿಕೊಂಡು ನಿಖರವಾದ ಮಾಹಿತಿಯನ್ನು ನೀಡುವುದರಿಂದ ಸರ್ಕಾರದ ಹಲವು ಸೌಲಭ್ಯಗಳನ್ನು ಪಡೆದುಕೊಳ್ಳಲು ಸಹಕಾರಿಯಾಗುತ್ತದೆ.

ಬೆಳೆ ಸಮೀಕ್ಷೆ ಮಾಹಿತಿ ಆಧರಿಸಿ ಬೆಳೆ ಕಟಾವು ಪ್ರಯೋಗ, ನೈಸರ್ಗಿಕ ಪ್ರಕೃತಿ ವಿಕೋಪ ಬೆಳೆ ಹಾನಿ ಪರಿಹಾರ, ಬೆಳೆ ವಿಮೆ, ಕನಿಷ್ಟ ಬೆಂಬಲ ಬೆಲೆ ಸೌಲಭ್ಯ, ಕೃಷಿ ಮತ್ತು ಕೃಷಿ ಸಂಬಂಧಿತ ಇಲಾಖಾ ಯೋಜನೆಗಳ ಫಲಾನುಭವಿಯಾಗಲು ಅರ್ಹತೆ ಮತ್ತು ಪಹಣಿಯಲ್ಲಿ ಬೆಳೆ ವಿವರ ದಾಖಲೆ ಇತ್ಯಾದಿಗಳಿಗೆ ಬೆಳೆ ಸಮೀಕ್ಷೆ ಖಡ್ಡಾಯವಾಗಿರುತ್ತದೆ. ಇದೇ ದಿನಾಂಕ 24 ರೊಳಗೆ ರೈತರೇ ಸ್ವತಃ ಬೆಳೆ ಸಮೀಕ್ಷೆ ಕೈಗೊಳ್ಳಬಹುದು.

ತದ ನಂತರ ಖಾಸಗಿ ನಿವಾಸಿಗಳಿಂದ ಬೆಳೆ ಸಮೀಕ್ಷೆ ಕಾರ್ಯ ನಡೆಸಲಾಗುವುದು. ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಮೂಲಕ ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳುವಂತೆ ತಿಳಿಸಿದ್ದಾರೆ.

## ಇಂದು ಜಿಲ್ಲಾ ಕಾಂಗ್ರೆಸ್‌ನಿಂದ ಅರಸು, ರಾಜೀವ್ ಗಾಂಧಿ ಹುಟ್ಟುಹಬ್ಬ

ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಮಾಜಿ ಪ್ರಧಾನಮಂತ್ರಿ ರಾಜೀವ್ ಗಾಂಧಿ ಹಾಗೂ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರುಗಳ ಹುಟ್ಟುಹಬ್ಬದ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 11 ಕ್ಕೆ ಕಾಂಗ್ರೆಸ್ ಪಕ್ಷದ ಕಚೇರಿ ಎಸ್ಸೆಸ್ ಭವನದಲ್ಲಿ ಆಯೋಜಿಸಲಾಗಿದೆ.

ನಂತರ ಬೆಳಿಗ್ಗೆ 11.30 ಕ್ಕೆ ಜಯದೇವ ವೃತ್ತದಲ್ಲಿ ಬಿಜೆಪಿ ಸರ್ಕಾರದ ವೈಫಲ್ಯ ಖಂಡಿಸಿ 'ಜನಧ್ವನಿ' ಬೃಹತ್ ಪ್ರತಿಭಟನೆ ಮತ್ತು ಧರಣಿ ಸತ್ಯಾಗ್ರಹವನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ ನೇತೃತ್ವದಲ್ಲಿ ನಡೆಸಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

## ಕೋವಿಡ್ : ಮುಚ್ಚಿದ ಕೆನರಾ ಬ್ಯಾಂಕ್



ಹೊನ್ನಾಳಿ, ಆ.19- ಪಟ್ಟಣದ ಕೆನರಾ ಬ್ಯಾಂಕ್ ಶಾಖೆಯು ಕೋವಿಡ್ ಹಿನ್ನೆಲೆಯಲ್ಲಿ ಬ್ಯಾಂಕನ್ನು ತಾತ್ಕಾಲಿಕವಾಗಿ ಮಂಗಳವಾರದಿಂದ ಮುಚ್ಚಲಾಗಿದ್ದು, ಗ್ರಾಹಕರು ಸಿಂಡಿಕೇಟ್‌ನಲ್ಲಿ ವ್ಯವಹರಿಸುವಂತೆ ನಾಮಫಲಕವನ್ನು ಶಾಖೆಯ ಮುಂಭಾಗದಲ್ಲಿ ಹಾಕಲಾಗಿದೆ. ಗ್ರಾಹಕರು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ವ್ಯವಹಾರ ನಡೆಸಲು ಮುಂದಾಗಿರುವರು. ಕೆನರಾ ಬ್ಯಾಂಕ್‌ನವರು ಸಾಮೂಹಿಕವಾಗಿ ಕೋವಿಡ್ ತಪಾಸಣೆಗೆ ಮುಂದಾಗಿದ್ದಾರೆಂದು ತಿಳಿದುಬಂದಿದೆ.

## ರಾಜೀವ್ ಜನ್ಮದಿನ : ನಗರದಲ್ಲಿ ಇಂದು ಸಸಿ ಹಂಚುವ ಕಾರ್ಯಕ್ರಮ

ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹುಟ್ಟುಹಬ್ಬದ ಅಂಗವಾಗಿ ಭಾರತೀಯ ಯುವ ಕಾಂಗ್ರೆಸ್ ಸಮಿತಿಯಿಂದ 'ಗಿಡ ಬೆಳಸಿ ನಾಡು ಉಳಿಸಿ' ಎಂಬ ಸಂದೇಶದೊಂದಿಗೆ ಸಸಿಗಳನ್ನು ಹಂಚುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಸಹ ಈ ಅಭಿಯಾನ ಹಮ್ಮಿಕೊಂಡಿದ್ದು, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಖಾಲಿದ್ ಅಹಮದ್ ನೇತೃತ್ವದಲ್ಲಿ ಇಂದು ಮಧ್ಯಾಹ್ನ 2.30 ಕ್ಕೆ ಆರ್.ಟಿ.ಓ ರಸ್ತೆ ಹತ್ತಿರ ಸಸಿ ಹಂಚುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಐವೈಸಿ ರಾಷ್ಟ್ರೀಯ ಮಾಧ್ಯಮ ಪ್ಯಾನಲಿಸ್ಟ್ ಎಚ್.ಜೆ. ಮೈನುದ್ದೀನ್ ತಿಳಿಸಿದ್ದಾರೆ.

## ಸುಕ್ಷೇತ್ರ ಉಕ್ಕಡಗಾತ್ರಿ : ಜ್ವರ ತಪಾಸಣೆ ನಂತರ ಪ್ರವೇಶ



ಮಲೇಬೆನ್ನೂರು, ಆ. 19- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಅಮಾವಾಸ್ಯೆ ಪ್ರಯುಕ್ತ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಗದ್ದುಗೆ ದರ್ಶನಕ್ಕೆ ಆಗಮಿಸಿದ ಭಕ್ತರನ್ನು ಸ್ಯಾನಿಟೈಸ್ ಮಾಡಿ, ನಂತರ ಥರ್ಮೋಮೀಟರ್ ಮೂಲಕ ಜ್ವರ ತಪಾಸಣೆಗೆ ಒಳಪಡಿಸಿ, ಸಾಮಾಜಿಕ ಅಂತರ ಕಾಯ್ದು ಕೊಂಡು ಸರತಿ ಸಾಲಿನಲ್ಲಿ ದೇವಸ್ಥಾನದ ಒಳಗಡೆ ಬಿಡಲಾಯಿತು. ಅಲ್ಲದೇ ಮಾಸ್ಕ್ ನ್ನು ಕಡ್ಡಾಯಗೊಳಿಸಲಾಗಿತ್ತು,

## ತಮ್ಮ ಮನೆಯ ಗಣಪತಿಯನ್ನು ತಾವೇ ಸಿದ್ಧಪಡಿಸುತ್ತಿರುವ ಮಕ್ಕಳು



ಹೊನ್ನಾಳಿ, ಆ.19- ಪಟ್ಟಣದ ದೊಡ್ಡಪೇಟೆಯ ಅನುಷಾ ಪಾಟೀಲ್ ಹಾಗೂ ಚಿನ್ಮಯ್ ಪಾಟೀಲ್ ಎಂಬ ಇಬ್ಬರು ಮಕ್ಕಳು ತಮ್ಮ ತಮ್ಮ ಮನೆಗೆ ಪೂಜೆಗೆಂದು ತರುವ ಗಣಪತಿಯನ್ನು ತಾವೇ ಸಿದ್ದಪಡಿಸುತ್ತಿರುವುದು.

ರಜಾ ದಿನದ ಸದುಪಯೋಗಕ್ಕೆ ಮುಂದಾಗಿರುವ ಈ ಮಕ್ಕಳು ವಿದ್ಯೆ ಕೊಡುವ ಗಣಪತಿ ಮೂರ್ತಿಯನ್ನು ತಾವೇ ಸಿದ್ದಪಡಿಸುವ ಮೂಲಕ ವಿದ್ಯೆಯಿಂದ ತಮ್ಮನ್ನು ವಂಚಿತರಾಗದಂತೆ ಕಾಪಾಡು ಗಣಪ ಎಂಬುದಾಗಿ ಈ ಪ್ರಯತ್ನ ನಡೆಸಲು ಮುಂದಾಗಿರುವುದಾಗಿ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದು ಸಿದ್ದಗೊಳ್ಳುತ್ತಿರುವ ಗಣಪತಿಯನ್ನು ಪುಟಾಣಿಗಳು ವೀಕ್ಷಿಸುತ್ತಿರುವರು.

## ಹರಳಹಳ್ಳಿಯಲ್ಲಿ 23 ಜನರಿಗೆ ಟೆಸ್ಟ್, ಬಿಳಸನೂರಿನಲ್ಲಿ ಮೂವರಿಗೆ ಸೋಂಕು

ಮಲೇಬೆನ್ನೂರು, ಆ.19- ಹರಳಹಳ್ಳಿ ಗ್ರಾಮದಲ್ಲಿ ಬುಧವಾರ 23 ಜನರಿಗೆ ಕೊರೊನಾ ರ್ಯಾಪಿಡ್ ಟೆಸ್ಟ್ ಮಾಡಲಾಗಿದೆ ಎಂದು ಉಪತಹಶೀಲ್ದಾರ್ ಆರ್.ರವಿ ತಿಳಿಸಿದ್ದಾರೆ.

ಬಿಳಸನೂರು ಗ್ರಾಮದಲ್ಲಿ 75 ವರ್ಷದ ವೃದ್ಧನಿಗೆ ಮತ್ತು 70 ವರ್ಷದ ವೃದ್ದೆಗೆ ಹಾಗೂ 45 ವರ್ಷದ ಮಹಿಳೆಗೆ ಸೋಂಕು ತಗುಲಿದೆ.

ಗುರುವಾರ ಬಹಳಷ್ಟು ಕೊರೊನಾ ಪರೀಕ್ಷಾ ವರದಿಗಳು ಬರುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.

ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ, ಟಿಹೆಚ್‌ಓ ಡಾ. ಚಂದ್ರ ಮೋಹನ್, ವೈದ್ಯಾಧಿಕಾರಿ ಡಾ.ಲಕ್ಷ್ಮಿ ದೇವಿ ಅವರು ಭೇಟಿ ನೀಡಿ, ಹೋಂ ಕ್ವಾರಂಟೈನ್‌ನಲ್ಲಿರುವ ಕೊರೊನಾ ಸೋಂಕಿತರ ಆರೋಗ್ಯ ವಿಚಾರಿಸಿದರು.

## ಮಾಯಕೊಂಡ ಐಟಿಐ ನಲ್ಲಿ ಆನ್‌ಲೈನ್ ಪ್ರವೇಶ ಆರಂಭ

ದಾವಣಗೆರೆ, ಆ.19 - ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯು (ಐಟಿಐ) ಆನ್‌ಲೈನ್ ಪ್ರವೇಶ ಕುರಿತು, ಮಾಯಕೊಂಡ ಗ್ರಾಮದಲ್ಲಿ ಪ್ರಾರಂಭವಾಗಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಲಭ್ಯವಿರುವ ಎರಡು ವೃತ್ತಿಗಳಾದ ವಿದ್ಯುತ್ ಕರ್ಮಿ ಹಾಗೂ ಜೋಡಣೆ ತರಬೇತಿಯನ್ನು ನೀಡಲಾಗುತ್ತಿದೆ.

ಪ್ರವೇಶ ಬಯಸುವ ಆಸಕ್ತ ಅಭ್ಯರ್ಥಿಗಳು ಇಂದಿನಿಂದ ಇದೇ ದಿನಾಂಕ 31 ರವರೆಗೆ ಆನ್‌ಲೈನ್ ಮೂಲಕ www.emptrg.kar.nic.in ಈ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ಸಮಯದಲ್ಲಿ ಪ್ರಾಚಾರ್ಯರನ್ನು ಅಥವಾ ಇಲಾಖೆಯ ಜಾಲತಾಣವನ್ನು ಸಂಪರ್ಕಿಸಿ ವಿವರಗಳನ್ನು ಪಡೆಯಬಹುದಾಗಿದೆ ಎಂದು ಮಾಯಕೊಂಡ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತಾ.ಪಂ. ಉಪಾಧ್ಯಕ್ಷರಾಗಿ ಮೀನಾ



ದಾವಣಗೆರೆ, ಆ.19- ದಾವಣಗೆರೆ ತಾಲ್ಲೂಕು ಪಂಚಾಯ್ತಿ ಉಪಾಧ್ಯಕ್ಷರಾಗಿ ತುರ್ಚಘಟ್ಟ ತಾ.ಪಂ ಕ್ಷೇತ್ರದ ಎಂ. ಮೀನಾ ಶ್ರೀನಿವಾಸ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ.

## ಮೊಹಮ್ಮದ್ ಖಾಲೀದ್ ನೇಮಕ



ದಾವಣಗೆರೆ, ಆ.19- ಆಲ್ ಇಂಡಿಯಾ ರಾಹುಲ್ ಗಾಂಧಿ ಬ್ರಿಗೇಡ್ ಕಾಂಗ್ರೆಸ್‌ನ ಜಿಲ್ಲಾ ಅಧ್ಯಕ್ಷರಾಗಿ ಮೊಹಮ್ಮದ್ ಖಾಲೀದ್ ಪೈಲ್ವಾನ್ ಅವರನ್ನು ನೇಮಕ ಮಾಡಿ ರಾಜ್ಯ ಅಧ್ಯಕ್ಷ ಜೀಲಾನ್ ಬಾಷಾ ಆದೇಶ ಹೊರಡಿಸಿದ್ದಾರೆ.

# ಶ್ರಮವಹಿಸಿ ವಿದ್ಯಾಭ್ಯಾಸ ಮಾಡಿದಾಗ ಯಶಸ್ಸು ಸಾಧ್ಯ : ಶಾಸಕ ರಾಮಪ್ಪ



ಸ್ವಗ್ರಾಮ ಗುತ್ತೂರಿನಲ್ಲಿ ಅಭಿಷೇಕ್‌ಗೆ ಸನ್ಮಾನ

ಹರಿಹರ, ಆ.19- ಶ್ರಮವಹಿಸಿ ವಿದ್ಯಾಭ್ಯಾಸವನ್ನು ಮಾಡಿದಾಗ ಯಶಸ್ಸು ಹುಡುಕಿಕೊಂಡು ಬರುತ್ತದೆ ಎಂದು ಶಾಸಕ ಎಸ್. ರಾಮಪ್ಪ ಹೇಳಿದರು.

ಗುತ್ತೂರು ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆ ಆವರಣದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಕನ್ನಡ ಮಾಧ್ಯಮದಲ್ಲಿ ಬರೆದು ರಾಜ್ಯಕ್ಕೇ ಪ್ರಥಮ ಸ್ಥಾನದಲ್ಲಿ ತೇರ್ಗಡೆಯಾದ ಎಂ.ಕೆ.ಇ.ಟಿ ಪ್ರೌಢಶಾಲಾ ವಿದ್ಯಾರ್ಥಿ ಎಂ. ಅಭಿಷೇಕ್ ಗೆ ಗುತ್ತೂರಿನ ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಗ್ರಾಮಸ್ಥರ ವತಿಯಿಂದ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಅಭಿಷೇಕ್‌ನನ್ನು ಶಾಸಕರು ಸನ್ಮಾನಿಸಿ ಗೌರವಿಸಿದರು.

ಸಾಧನೆ ಮಾಡುವುದು ಸುಲಭದ ಕಾರ್ಯವಲ್ಲ. ಮನುಷ್ಯನ ಏಕಾಗ್ರತೆ ಮತ್ತು ಸತತವಾದ ಪರಿಶ್ರಮದಿಂದ ಮಾತ್ರ ಸಮಾಜ, ಗ್ರಾಮದವರು, ಹಾಗೂ ಕುಟುಂಬದವರು ಮೆಚ್ಚುವಂತೆ ಸಾಧನೆ ಮಾಡಬಹುದು ಎಂದು ಶಾಸಕರು ಹೇಳಿದರು.

ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಪರಮೇಶ್ವರಪ್ಪ ಮಾತ ನಾಡಿ, ತಾಳ್ಮೆಯಿಂದ ಕೆತ್ತಿಸಿಕೊಂಡ ಕಲ್ಲು ಮೂರ್ತಿಯಾಗಿ ಎಲ್ಲರ ಪೂಜೆಗೆ ಸಲ್ಲುತ್ತದೆ. ಸಾಧನೆ ಮಾಡಬೇಕಾದರೆ ತಾಳ್ಮೆಯಿಂದ ವರ್ತಿಸು ವುದು ಅಷ್ಟೇ ಮುಖ್ಯ ಎಂದು ಅಭಿಪ್ರಾಯಪಟ್ಟರು.

ಇಂದಿನ ಕಾಲ ಘಟ್ಟದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷೆಯಲ್ಲಿ ಓದುವ ವ್ಯಾಮೋಹ ಇರುತ್ತದೆ. ಆದರೆ, ಈ ವಿದ್ಯಾರ್ಥಿ ಕನ್ನಡದಲ್ಲಿ ವ್ಯಾಸಂಗ ಮಾಡಿ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿ ಕನ್ನಡ ಭಾಷೆಯಲ್ಲಿ ಓದುವಂತ ವಿದ್ಯಾರ್ಥಿಗಳಿಗೆ ಮಾದರಿ ವಿದ್ಯಾರ್ಥಿಯಾಗಿ ಹೊರಹೊಮ್ಮಿರುವುದು ಸಂತಸದ ಸಂಗತಿ ಎಂದರು.

ಬಿಇಓ ಯು. ಬಸವರಾಜಪ್ಪ ಮಾತನಾಡಿ, ಹಣದಿಂದ ಸಾಧನೆ ಮಾಡುವುದು ಸಾಧನೆ ಅಲ್ಲ. ಜ್ಞಾನದ ಶಕ್ತಿಯಿಂದ ಸಾಧನೆ ಮಾಡುವುದು ದೊಡ್ಡ ಸಾಧನೆ. ಪರಿಶ್ರಮ, ಶ್ರದ್ಧೆ, ತಾಳ್ಮೆ, ಚಾತುರ್ಯ, ಸೌಜನ್ಯ ಇವುಗಳು ಇದ್ದರೆ ಸಮಾಜ ಗೌರವಿಸುವಂತ ಸಾಧನೆ ಮಾಡಬಹುದು ಎಂದು ಪ್ರತಿಪಾದಿಸಿದರು.

ಮಾರ್ಗದರ್ಶನ ನೀಡಿದ ಶಿಕ್ಷಕಿ ಗೀತಾ, ತಾಯಿ ನೇತ್ರಾವತಿ ತಂದೆ ಮಂಜುನಾಥ್ ಅವರ ಶ್ರಮಕ್ಕೆ ಶ್ಲಾಘಿಸಿದರು. ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಅಭಿಷೇಕ್ ಹಾಗೂ ಶಾಲೆಯ ವಿದ್ಯಾರ್ಥಿನಿ ಪ್ರಿಯದರ್ಶಿನಿ ಶೇ 94 ರಷ್ಟು ಅಂಕಗಳನ್ನು ಪಡೆದಿರುವುದಕ್ಕೆ ಸನ್ಮಾನ ಮಾಡಿ ಗೌರವಿಸಲಾಯಿತು.

ವಿಜಯಮಹಾಂತೇಶ್, ಬಸವಲಿಂಗಪ್ಪ ಗೌಡ್ರು, ಎಸ್.ಡಿ.ಎಂ.ಸಿ. ಅಧ್ಯಕ್ಷ ಉಮೇಶ್, ಕರಿಬಸಪ್ಪ, ಕೊಟ್ರೇಶ್ ಕುಲಕರ್ಣಿ, ಶಿವಮೂರ್ತಿ ತೆಲಗಿ, ಮುಖ್ಯ ಶಿಕ್ಷಕ ಶಿವಮೂರ್ತಿ, ಶಿಕ್ಷಕಿ ಶ್ರೀದೇವಿ, ಶಿಕ್ಷಕ ಪ್ರತೀಶ್ ಇನ್ನಿತರರಿದ್ದರು.

# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಆಗಸ್ಟ್ 20, 2020




**ಮುದ್ದು ಗಣಪನಿಗೆ ಅಂತಿಮ ಟಚಪ್**

ಕಲಾವಿದನ ಕಲಾ ಕುಂಚದಿಂದ ಮಾರಾಟಕ್ಕೆ ಸಿದ್ಧವಾಗಿರುವ ಗಣಪತಿ ಮೂರ್ತಿಗಳಿಗೆ ಅಂತಿಮ ಟಚಪ್.

# ಸರ್ಕಾರಿ ಹುದ್ದೆಗಳಿಗೆ ಒಂದೇ ಪರೀಕ್ಷೆ

## ಒಂದು ಬಾರಿ ಪರೀಕ್ಷೆ ಬರೆದರೆ 3 ವರ್ಷಗಳವರೆಗೆ ಮಾನ್ಯತೆ

ನವದೆಹಲಿ ಆ. 19 – ಸರ್ಕಾರಿ ಹುದ್ದೆಗಳಿಗೆ ಸಾಮಾನ್ಯ ಅರ್ಹತಾ ಪರೀಕ್ಷೆ (ಸಿಇಟಿ) ನಡೆಸಲು ರಾಷ್ಟ್ರೀಯ ನೇಮಕಾತಿ ಸಂಸ್ಥೆ (ಎನ್.ಆರ್.ಎ.) ಸ್ಥಾಪಿಸಲು ಕೇಂದ್ರ ಸಂಪುಟ ಬುಧವಾರ ಒಪ್ಪಿಗೆ ನೀಡಿದ್ದು, ನೇಮಕಾತಿಯಲ್ಲಿ ಮಹತ್ವದ ಸುಧಾರಣೆಗೆ ದಾರಿ ಮಾಡಿಕೊಡಲಾಗಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸಭೆಯ ನಂತರ ಈ ವಿಷಯ ತಿಳಿಸಿರುವ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಪ್ರಕಾಶ್ ಜಾವಡೇಕರ್, ಈ ಐತಿಹಾಸಿಕ ನಿರ್ಧಾರದಿಂದ ಉದ್ಯೋಗಾಕಾಂಕ್ಷಿಗಳು ಒಂದೇ ಸಾಮಾನ್ಯ ಪರೀಕ್ಷೆ ಬರೆಯ ಬೇಕಿದೆ. ಇದರಿಂದಾಗಿ ಹಲವು ಪರೀಕ್ಷೆಗಳನ್ನು ಬರೆಯುವುದು ತಪ್ಪುವುದರಿಂದ ಸಮಯ ಹಾಗೂ ವೆಚ್ಚ ಉಳಿತಾಯವಾಗುತ್ತದೆ ಎಂದಿದ್ದಾರೆ.

ಸರ್ಕಾರದ ಈ ನಿರ್ಧಾರದಿಂದಾಗಿ ಯುವಕರ ಹಲವಾರು ವರ್ಷಗಳ ಬೇಡಿಕೆ ಈಡೇರಿದೆ ಎಂದು ಸಚಿವರು ಹೇಳಿದ್ದಾರೆ.

ಸರ್ಕಾರದ ನಿರ್ಧಾರದಿಂದ ನೇಮಕಾತಿಯಲ್ಲಿ ಸರಳತೆ ಹಾಗೂ ಪಾರದರ್ಶಕತೆ ಬಂದಿದೆ ಎಂದು ಹೇಳಿರುವ ಕೇಂದ್ರ ಗೃಹ ಸಚಿವ ಅಮಿತ್ ಷಾ, ಮೋದಿ ಸರ್ಕಾರ ನೇಮಕಾತಿ ಪ್ರಕ್ರಿಯೆಯ ರೂಪಾಂತರಣ ಮಾಡಿದೆ ಎಂದಿದ್ದಾರೆ.

ಪ್ರತಿ ಜಿಲ್ಲೆಯಲ್ಲೂ ಪ್ರವೇಶ ಪರೀಕ್ಷೆ

**ನೇಮಕಾತಿಯಲ್ಲಿ ಮಹತ್ವದ ಸುಧಾರಣೆಗೆ ಕೇಂದ್ರ ಸಂಪುಟದ ಸಮ್ಮತಿ**

ನಡೆಸಲಾಗುವುದು, ಹಲವು ಭಾಷೆಗಳಲ್ಲಿ ಪರೀಕ್ಷೆ ನಡೆಯಲಿದೆ ಮತ್ತು ಪರೀಕ್ಷೆಯ ಫಲಿತಾಂಶ ಮೂರು ವರ್ಷಗಳವರೆಗೆ ಸಿಂಧುವಾಗಿರಲಿದೆ ಎಂದವರು ಹೇಳಿದ್ದಾರೆ.

ಸರ್ಕಾರದ ನಿರ್ಧಾರ ಕ್ರಾಂತಿಕಾರಿಯಾಗಿದೆ ಹಾಗೂ ದೇಶದ ಇತಿಹಾಸದಲ್ಲಿ ಮಹತ್ವದ ಸುಧಾರಣೆಯಾಗಿದೆ ಎಂದು ಇನ್ಪೋರ್ವ ಸಚಿವ ಜಿತೇಂದ್ರ ಸಿಂಗ್ ತಿಳಿಸಿದ್ದಾರೆ. ಸರ್ಕಾರದ ನಿರ್ಧಾರದಿಂದಾಗಿ ಸರ್ಕಾರಿ ಹುದ್ದೆಗೆ ಆಯ್ಕೆ, ನೇಮಕಾತಿ ಹಾಗೂ ಜೀವನ (4ನೇ ಪುಟಕ್ಕೆ)

### ಕೇಂದ್ರ ನೌಕರಿಗೆ ವರ್ಷದಲ್ಲೆರಡು ಪರೀಕ್ಷೆ

ನವದಹೆಲಿ, ಆ. 19 – ರಾಷ್ಟ್ರೀಯ ನೇಮಕಾತಿ ಸಂಸ್ಥೆ (ಎನ್.ಆರ್.ಎ.) ವರ್ಷದಲ್ಲಿ ಎರಡು ಬಾರಿ ಪರೀಕ್ಷೆಗಳನ್ನು ನಡೆಸಲಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ತಿಳಿಸಿದ್ದಾರೆ. ಕೇಂದ್ರ ಸರ್ಕಾರದ ಬಹುತೇಕ ಹುದ್ದೆಗಳನ್ನು ಒಂದೇ ಪರೀಕ್ಷೆಯ ಮೂಲಕ ಭರ್ತಿ ಮಾಡಿಕೊಳ್ಳಲು ಎನ್.ಆರ್.ಎ. ರೂಪಿಸಲಾಗುತ್ತಿದೆ.

**ಕನ್ನಡದಲ್ಲೂ ಅರ್ಹತಾ ಪರೀಕ್ಷೆಗೆ ಅವಕಾಶ**

ಸರ್ಕಾರಿ ಹುದ್ದೆಗಳ ನೇಮಕಕ್ಕೆ ಬಹು ಪರೀಕ್ಷೆ ನಡೆಸುವುದು ಅಭ್ಯರ್ಥಿಗಳಿಗೆ ಹೊರೆಯಾಗುತ್ತದೆ ಎಂದಿರುವ ಸಚಿವ ಸಿಂಗ್, ಪ್ರಸ್ತಾಪಿತ ಎನ್.ಆರ್.ಎ. ಮೂಲಕ ಸಾಮಾನ್ಯ ಅರ್ಹತಾ ಪರೀಕ್ಷೆಯಲ್ಲಿ ಒಮ್ಮೆ ಭಾಗಿಯಾದವರು ಎಷ್ಟೇ ಸಂಖ್ಯೆಯ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದು ಎಂದಿದ್ದಾರೆ.

ವರ್ಷದಲ್ಲಿ ಎರಡು ಬಾರಿ (6ನೇ ಪುಟಕ್ಕೆ)

# ಜಿಲ್ಲೆಯಾದ್ಯಂತ ಗಣೇಶ-ಮೊಹರಂ ಹಬ್ಬಗಳು ಮುಂಜಾಗ್ರತೆ ಸಹಿತ ಭಕ್ತಿ ಪೂರಕವಾಗಿರಲಿ

## ನಾಗರಿಕರ ಸೌಹಾರ್ದ ಸಭೆಯಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸಲಹೆ



ದಾವಣಗೆರೆ ಆ.19- ಜಿಲ್ಲೆಯಾದ್ಯಂತ ಗಣೇಶ ಹಾಗೂ ಮೊಹರಂ ಹಬ್ಬಗಳನ್ನು ಮುಂಜಾಗ್ರತಾ ಕ್ರಮಗಳ ಸಹಿತ ಆಡಂಬರವಿಲ್ಲದೇ ಭಕ್ತಿ ಪೂರಕವಾಗಿ ಆಚರಿಸುವಂತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸಾರ್ವಜನಿಕರಿಗೆ ಸಲಹೆ ನೀಡಿದರು.

ಅವರು, ಇಂದು ಸಂಜೆ ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗಣೇಶ ಮತ್ತು ಮೊಹರಂ ಹಬ್ಬಗಳ ಆಚರಣೆ ಪ್ರಯುಕ್ತ ನಡೆದ ನಾಗರಿಕರ ಸೌಹಾರ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾನೂನುಗಳ ಉಲ್ಲಂಘಿಸದೇ ಶಾಂತಿ ಮತ್ತು ಸೌಹಾರ್ದತೆ ಕಾಪಾಡಿಕೊಂಡು ಈ ಎರಡು ಹಬ್ಬಗಳ ಆಚರಿಸುವಂತೆ ಮನವಿ ಮಾಡಿದರು.

ನಗರ ಪಾಲಿಕೆ ಮೇಯರ್ ಅಜಯ್ ಕುಮಾರ ಮಾತನಾಡಿ, ಕೊರೊನಾ ಸಂದರ್ಭದಲ್ಲಿ ಹಬ್ಬಗಳ ಆಚರಣೆಯಲ್ಲಿ ಯಾವುದೇ ವಿಜೃಂಭಣೆ ಬೇಡ. ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಂಡು ಬಹಳ ಸರಳವಾಗಿ ಆಚರಣೆ ಮಾಡಬೇಕು. ಹಬ್ಬದ ಆಚರಣೆ ಸಂದರ್ಭದಲ್ಲಿ ನೀರು, ಸ್ವಚ್ಛತೆ, ಬೆಳಕು ಬಹಳ ಮುಖ್ಯವಾಗಿದೆ. ಇದಕ್ಕೆ ಪಾಲಿಕೆ ವತಿಯಿಂದ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಹೇಳಿದರು.

ಎಂಜಲು ಮಾತ್ರವಲ್ಲದೆ ಗಾಳಿಯಿಂದಲೂ ಕೊರೊನಾ ಬರುತ್ತದೆ ಎಂದು ತಿಳಿದುಬಂದಿದೆ. ಪ್ರತಿಯೊಬ್ಬರು ಮಾಸ್ಕ್ ಅನ್ನು ಕಡ್ಡಾಯವಾಗಿ ಬಳಸಬೇಕು. ಸರ್ಕಾರದ ಆದೇಶ ಪಾಲಿಸುವ ಮೂಲಕ (7ನೇ ಪುಟಕ್ಕೆ)

### ಮುಂಜಾಗ್ರತೆ ವಹಿಸದಿದ್ದರೆ ಕೊರೊನಾ ನಿಯಂತ್ರಣ ಅಸಾಧ್ಯ

ಜಿಲ್ಲೆಯಲ್ಲಿ ಕೊರೊನಾ ಬಗ್ಗೆ ಜನರು ಜಾಗೃತರಾಗುತ್ತಿಲ್ಲ ಹಾಗೂ ಮುಂಜಾಗ್ರತೆ ವಹಿಸುತ್ತಿಲ್ಲ. ಕಡ್ಡಾಯವಾಗಿ ಮಾಸ್ಕ್ ಧರಿಸುತ್ತಿಲ್ಲ, ಸಾಮಾಜಿಕ ಅಂತರವಿಲ್ಲ. ಹೀಗಿದಾರೆ ಕೊರೊನಾ ನಿಯಂತ್ರಣ ಅಸಾಧ್ಯ. ಇದರ ನಿಯಂತ್ರಣಕ್ಕೆ ಜನರ ಸಹಕಾರ ಮುಖ್ಯ. ಸೋಂಕಿನ ಲಕ್ಷಣ ಕಂಡುಬಂದಲ್ಲಿ ಯಾವುದೇ ಕೀಳು ಭಾವನೆಗೆ ಒಳಗಾಗದೆ ಪರೀಕ್ಷೆ ಮಾಡಿಸಿಕೊಳ್ಳಬೇಕು. ಅಲ್ಲದೇ ಪರೀಕ್ಷೆಗೆ ಪ್ರತಿಯೊಬ್ಬರು ಸಹಕರಿಸಬೇಕೆಂದ ಅವರು, ದಿನಕ್ಕೆ 2 ರಿಂದ 3 ಸಾವಿರ ಜನರ ಪರೀಕ್ಷೆ ಮಾಡಿಸಲಾಗುತ್ತಿದೆ. ಇದರಿಂದಾಗಿ ಸಾಕಷ್ಟು ಕೊರೊನಾ ಪ್ರಕರಣಗಳು ಪತ್ತೆಯಾಗುತ್ತಿವೆ.

**- ಮಹಾಂತೇಶ್ ಬೀಳಗಿ, ಜಿಲ್ಲಾಧಿಕಾರಿ.**

### ಸಾಮಾಜಿಕ ಮಾಧ್ಯಮಗಳ ಬಗ್ಗೆ ಜಾಗೃತರಾಗಿ

ಸಾಮಾಜಿಕ ಮಾಧ್ಯಮಗಳ ಬಗ್ಗೆ ಪ್ರತಿಯೊಬ್ಬರು ಜಾಗೃತಿ ವಹಿಸಬೇಕು. ಇದಕ್ಕೆ ಹೊಸ ಕಾನೂನು ಮಾಡಬೇಕೆಂದು ಸರ್ಕಾರದ ಮಟ್ಟದಲ್ಲಿ ಈಗಾಗಲೇ ಚರ್ಚೆ ನಡೆದಿದೆ. ಅನಾವಶ್ಯಕವಾಗಿ ಜನರ ನೆಮ್ಮದಿ, ಸಾಮಾಜಿಕ ಸ್ವಾಸ್ಥ್ಯ ಕೆಡಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಮೊಬೈಲ್ ದುರ್ಬಳಕೆ ಕಡಿಮೆ ಆಗಬೇಕು. ಈ ಹಿನ್ನೆಲೆಯಲ್ಲಿ ಸರ್ಕಾರದ ಸೂಚನೆ ಚಾಚು ತಪ್ಪದೆ ಪಾಲಿಸಬೇಕಿದೆ.

**- ಹನುಮಂತರಾಯ, ಎಸ್ಪಿ**

## ಶಿಕ್ಷಣಕ್ಕೆ ಪಂಚಾಯ್ತಿ, ಸ್ವಯಂ ಸೇವಕರ ನೆರವು

ನವದೆಹಲಿ, ಆ. 19 -ಕೊರೊನಾ ಅವಧಿಯಲ್ಲಿ ಡಿಜಿಟಲ್ ಸಂಪನ್ಮೂಲ ವಂಚಿತ ವಿದ್ಯಾರ್ಥಿಗಳಿಗೆ ನೆರವಾಗಲು ಕೇಂದ್ರ ಶಿಕ್ಷಣ ಇಲಾಖೆ ಮುಂದಾಗಿದ್ದು, ಇದಕ್ಕಾಗಿ ಪಂಚಾಯ್ತಿಗಳ ನೆರವು ಪಡೆಯಲಿದೆ ಹಾಗೂ ಸ್ವಯಂ ಸೇವಕರ ತಂಡ ರಚಿಸಲಿದೆ.

ಈ ಉದ್ದೇಶಕ್ಕಾಗಿ ಎನ್.ಸಿ.ಇ.ಆರ್.ಟಿ. ರೂಪಿಸುವ ಮಾರ್ಗಸೂಚಿಯನ್ನು ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೊಖ್ರಿಯಾಲ್ ಬಿಡುಗಡೆ ಮಾಡಿದ್ದಾರೆ.

ಮಾರ್ಗಸೂಚಿಯ ಅನ್ವಯ ಮಕ್ಕಳಿಗೆ ಅಗತ್ಯ ಪಠ್ಯ ಸಾಮಗ್ರಿಗಳನ್ನು ಮನೆ ಬಾಗಿಲಿಗೆ ಒದಗಿಸಲಾಗುವುದು. ಸ್ವಯಂ ಸೇವಕರು ಇಲ್ಲವೇ ಶಿಕ್ಷಕರು ಸಮುದಾಯ ಕೇಂದ್ರಗಳ ಮೂಲಕ ಸಾಮಾಜಿಕ ಅಂತರದಲ್ಲಿ ಪಾಠಕ್ಕೆ ವ್ಯವಸ್ಥೆ ಮಾಡಲಿದ್ದಾರೆ ಎಂದು ಸಚಿವರು ಹೇಳಿದ್ದಾರೆ.

ಸಮುದಾಯ ಕೇಂದ್ರಗಳಲ್ಲಿ ಸಹಾಯವಾಣಿಗೆ ವ್ಯವಸ್ಥೆ ಮಾಡಲಾಗುವುದು ಎಂದೂ ಪೊಖ್ರಿಯಾಲ್ ಹೇಳಿದ್ದಾರೆ.

## ಆನ್‌ಲೈನ್ ಮೂಲಕ ಕೊರೊನಾ ಟೆಸ್ಟ್ ವರದಿ

ಬೆಂಗಳೂರು, ಆ. 19 - ಕೊರೊನಾ ಪರೀಕ್ಷೆಯ ವರದಿ ಪಡೆಯುವುದನ್ನು ಸರಳಗೊಳಿಸಿರುವ ರಾಜ್ಯ ಸರ್ಕಾರ, ವೆಬ್ ತಾಣದ ಮೂಲಕವೇ ವಿವರ ಪಡೆಯಲು ಅವಕಾಶ ಕಲ್ಪಿಸಿದೆ.

ಕೊರೊನಾ ಪರೀಕ್ಷೆ ಮಾಡಿಸಿಕೊಂಡವರು ತಮ್ಮ ಎಸ್‌ಆರ್ ಎಫ್ ಗುರುತು ಬಳಸಿ www.covidwar.karnataka.gov.in/service1 ನಲ್ಲಿ ವಿವರ ಪಡೆಯಬಹುದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಸುಧಾಕರ್ ತಿಳಿಸಿದ್ದಾರೆ.

ರಾಜ್ಯದಲ್ಲಿ ಕೊರೊನಾ ಸೋಂಕಿತರನ್ನು ಬೇಗನೆ ಪತ್ತೆ ಮಾಡಲು, ನಿಗದಿಪಡಿಸಿದ ಗುರಿಯಂತೆ ಪರೀಕ್ಷೆ ನಡೆಸಬೇಕು ಎಂದು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳ ಮುಖ್ಯಸ್ಥರು ಹಾಗೂ ಪ್ರಯೋಗಾಲಯಗಳ ಮುಖ್ಯಸ್ಥರೊಂದಿಗೆ ವೀಡಿಯೋ ಸಭೆ ನಡೆಸಿದ ಸಚಿವರು, (6ನೇ ಪುಟಕ್ಕೆ)

# 6 ಸಾವಿರದ ಗಡಿ ದಾಟಿದ ಕೊರೊನಾ

## ಜಿಲ್ಲೆಯಲ್ಲಿ ಒಂದೇ ದಿನ 7 ಸಾವು, 228 ಸೋಂಕು, 66 ಗುಣಮುಖ

ದಾವಣಗೆರೆ, ಆ. 19 – ಜಿಲ್ಲೆಯಲ್ಲಿ ಬುಧವಾರ 228 ಕೊರೊನಾ ಪ್ರಕರಣಗಳು ದಾಖಲಾಗಿದ್ದು, ಇದುವರೆಗಿನ ಒಟ್ಟು ಸೋಂಕಿತರ ಸಂಖ್ಯೆ 6 ಸಾವಿರದ ಗಡಿ ದಾಟಿದೆ.

ಇದೇ ದಿನದಂದು 7 ಜನರು ಕೊರೊನಾದಿಂದ ಮೃತಪಟ್ಟಿದ್ದರೆ, 66 ಜನ ಬಿಡುಗಡೆಯಾಗಿದ್ದಾರೆ. ಜಿಲ್ಲೆಯಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 2,014 ಆಗಿದೆ.

ಜಿಲ್ಲೆಯಲ್ಲಿ ಇದುವರೆಗೂ 6,011 ಸೋಂಕಿತರು ಕಂಡು ಬಂದಿದ್ದಾರೆ. ಇವರಲ್ಲಿ 3,861



ಜನರು ಗುಣಮುಖರಾಗಿದ್ದಾರೆ. 136 ಜನರು ಸಾವನ್ನಪ್ಪಿದ್ದಾರೆ.

ಬುಧವಾರದಂದು ದಾವಣಗೆರೆ ತಾಲ್ಲೂಕಿನಲ್ಲಿ 115 ಸೋಂಕಿತರು ಪತ್ತೆಯಾಗಿದ್ದಾರೆ. ಹರಿಹರದಲ್ಲಿ 12, ಜಗಳೂರಿನಲ್ಲಿ 9, ಚನ್ನಗಿರಿಯಲ್ಲಿ 49, ಹೊನ್ನಾಳಿಯಲ್ಲಿ (4ನೇ ಪುಟಕ್ಕೆ)

### ಹರಿಹರ ತಾಲ್ಲೂಕಿನಲ್ಲಿ 31 ಸೋಂಕು ದೃಢ

ಹರಿಹರ,ಆ. 19 - ನಗರದಲ್ಲಿ ಮೊಚಿ ಕಾಲೋನಿ, ಪೊಲೀಸ್ ಕ್ವಾಟರ್ಸ್, ಗುತ್ತೂರು, ವಿದ್ಯಾನಗರ ಸಿ ಬ್ಲಾಕ್ ಬಡಾವಣೆ ಸೇರಿ 12 ವ್ಯಕ್ತಿಗಳಿಗೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕಮಲಪುರ 4, ಶಂಶಿಪುರ 1, ಗಂಗನರಹರಸಿ 2, ಬೇವಿನಹಳ್ಳಿ 1, ನಿಟ್ಟೂರು 7, ಬಿಳಸನೂರು 3, ವಾಸನ 1 ಸೇರಿದಂತೆ ತಾಲ್ಲೂಕಿನಲ್ಲಿ ಒಟ್ಟು 31 ವ್ಯಕ್ತಿಗಳಿಗೆ ಕೊರೊನಾ ಸೋಂಕು ದೃಢಪಟ್ಟಿದೆ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ತಿಳಿಸಿದರು. ನಗರದಲ್ಲಿ (4ನೇ ಪುಟಕ್ಕೆ)

# ವಿಶೇಷ ರೈಲುಗಳು ಶೇ.30ರಷ್ಟು ಮಾತ್ರ ಭರ್ತಿ

ದಾವಣಗೆರೆ, ಆ. 19 - ಕೊರೊನಾ ಕಾರಣದಿಂದಾಗಿ ರೈಲ್ವೆ ಪ್ರಯಾಣದ ಬೇಡಿಕೆ ತೀವ್ರವಾಗಿ ತಗ್ಗಿದ್ದು, ಪ್ರಸಕ್ತ 230 ವಿಶೇಷ ರೈಲುಗಳನ್ನು ಮಾತ್ರ ಓಡಿಸಲಾಗುತ್ತಿದೆ. ಇವುಗಳಲ್ಲೂ ಸಹ ಶೇ.30ಕ್ಕೂ ಕಡಿಮೆ ಜನ ಪ್ರಯಾಣಿಸುತ್ತಿದ್ದಾರೆ ಎಂದು ನೈರುತ್ಯ ರೈಲ್ವೆ ವಲಯದ ಮೈಸೂರು ವಿಭಾಗದ ಡಿ.ಆರ್.ಎಂ. ಅಪರ್ಣ ಗಾರ್ಗ್ ತಿಳಿಸಿದ್ದಾರೆ.

ಆನ್‌ಲೈನ್ ಮೂಲಕ ನಡೆಸಲಾದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಕೊರೊನಾ ಕಾರಣದಿಂದಾಗಿ ರೈಲ್ವೆ ಕಠಿಣ ಪರಿಸ್ಥಿತಿ ಎದುರಿಸುತ್ತಿದೆ. ಇದೇ ಮೊದಲ ಬಾರಿಗೆ ಪ್ರಯಾಣಿಕರ ಸೇವೆ ನಿಲ್ಲಿಸಲಾಗಿದೆ ಎಂದು ಹೇಳಿದ್ದಾರೆ.

ಇಷ್ಟಾದರೂ ಸಹ, ಶ್ರಮಿಕ ರೈಲುಗಳ ಮೂಲಕ ಕೊರೊನಾ ಅವಧಿಯಲ್ಲಿ ಜನರಿಗೆ ನೆರವು ನೀಡಲಾಗಿದೆ. ಪ್ರಸಕ್ತ 230 ರೈಲುಗಳನ್ನು ಓಡಿಸಲಾಗುತ್ತಿದ್ದು, ಜನರಿಂದ ಬೇಡಿಕೆ ಬಂದರೆ ಇನ್ನಷ್ಟು ರೈಲುಗಳಿಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ.



**ಕೊರೊನಾ ಕಾರಣದಿಂದ ಕೇವಲ 230 ರೈಲುಗಳನ್ನು ಓಡಿಸಿದರೂ ಬಾರದ ಬೇಡಿಕೆ**

ಈಗ 230 ವಿಶೇಷ ರೈಲುಗಳನ್ನು ಮಾತ್ರ ನಿರ್ವಹಿಸುತ್ತಿದ್ದು, ಸಾಮಾನ್ಯ ರೈಲುಗಳ ಸೇವೆ ನಿಲ್ಲಿಸಲಾಗಿದೆ. ಮುಂಬರುವ ದಿನಗಳಲ್ಲಿ ರೈಲುಗಳ ಸೇವೆ ಪುನರಾರಂಭವಾದಾಗ ಸಮಗ್ರ ರೈಲ್ವೆ ವೇಳಾ ಪಟ್ಟಿಯನ್ನು ಬದಲಿಸಲಾಗುವುದು. ಜನರ ಬೇಡಿಕೆ ಹಾಗೂ ಅನುಕೂಲಕ್ಕೆ ತಕ್ಕ ರೀತಿ ಬದಲಾವಣೆ ಮಾಡಲಾಗುವುದು ಎಂದವರು ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ.

ಹುಬ್ಬಳ್ಳಿ - ಚಿಕ್ಕಜಾಜೂರು ಮಾರ್ಗದಲ್ಲಿ 190 ಕಿ.ಮೀ. ಉದ್ದದಲ್ಲಿ ಡಬ್ಲಿಂಗ್ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ. ಈಗಾಗಲೇ 50 ಕಿ.ಮೀ. ಮಾರ್ಗ ಪೂರ್ಣಗೊಂಡಿದ್ದು, 40 ಕಿ.ಮೀ. ಮುಗಿಯುವ ಹಂತದಲ್ಲಿದೆ. ಮುಂದಿನ 2021ರ ಸೆಪ್ಟೆಂಬರ್‌ನಿಂದ ನವೆಂಬರ್ ಒಳಗೆ ಡಬ್ಲಿಂಗ್ ಕಾಮಗಾರಿ ಸಂಪೂರ್ಣ ಮುಗಿಸಲಾಗುವುದು ಎಂದವರು ಇದೇ ಸಂದರ್ಭದಲ್ಲಿ ಹೇಳಿದ್ದಾರೆ.

ತುಮಕೂರು - ಅರಸೀಕೆರೆ ಮಾರ್ಗದಲ್ಲಿನ 11 ಕಿ.ಮೀ. ಕಾಮಗಾರಿ ಪೂರ್ಣವಾಗಬೇಕಿದೆ. ಕೊರೊನಾ ಕಾರಣದಿಂದಾಗಿ ಕಾಮಗಾರಿ ಕೈಗೊಳ್ಳಲು ಅಡ್ಡಿಯಾಗಿದೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

ರೈಲ್ವೆಯಲ್ಲಿ ಇತ್ತೀಚೆಗೆ (6ನೇ ಪುಟಕ್ಕೆ)

# ಸರ್ಕಾರಿ, ಖಾಸಗಿ ಬ್ಯಾಂಕುಗಳಿಗಿಂತ 'ಸಹಕಾರಿ'ಗಳೇ ಸುರಕ್ಷಿತ

## ಬ್ಯಾಂಕಿಂಗ್ ವಲಯದ ಶೇ.98ರಷ್ಟು ವಂಚನೆ ನಡೆದಿರುವುದು ಸರ್ಕಾರಿ, ಖಾಸಗಿ ಬ್ಯಾಂಕುಗಳಲ್ಲಿ

ಮುಂಬೈ, ಆ. 19 – ಸರ್ಕಾರಿ ಹಾಗೂ ಖಾಸಗಿ ಬ್ಯಾಂಕುಗಳಿಗಿಂತ ಸಹಕಾರಿ ಬ್ಯಾಂಕುಗಳೇ ಹೆಚ್ಚು ಸುರಕ್ಷಿತ ಎಂದು ಅಭಿಪ್ರಾಯ ಪಟ್ಟಿರುವ ಎನ್.ಸಿ.ಪಿ. ನಾಯಕ ಶರದ್ ಪವಾರ್, ಸಹಕಾರಿ ಬ್ಯಾಂಕುಗಳ ಅಸ್ತಿತ್ವ ಹಾಗೂ ಅವುಗಳ ಸಹಕಾರಿ ಸ್ವರೂಪವನ್ನು ರಕ್ಷಿಸಬೇಕೆಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಇತರೆ ಬ್ಯಾಂಕುಗಳಿಗಿಂತ ಸಹಕಾರಿ ಬ್ಯಾಂಕುಗಳು ಕಳಪೆಯಾಗಿವೆ ಇಲ್ಲವೇ ಅವುಗಳಲ್ಲಿನ ವಂಚನೆ ತಡೆಯಲು ಖಾಸಗಿ ಬ್ಯಾಂಕ್ ಮಾಡಬೇಕೆಂಬ ವಾದವನ್ನೂ ಪವಾರ್ ತಳ್ಳಿ ಹಾಕಿದ್ದಾರೆ.

ಟ್ವಿಟ್ಟರ್ ಖಾತೆಯಲ್ಲಿ ಪ್ರಧಾನಿಗೆ ಬರೆದಿರುವ ಪತ್ರವನ್ನು ಪ್ರಕಟಿಸಿರುವ ಪವಾರ್, ಮಧ್ಯಮ ವರ್ಗದ ಹಿತ ರಕ್ಷಿಸಲು ಸಹಕಾರಿ ಬ್ಯಾಂಕುಗಳನ್ನು ರಿಸರ್ವ್ ಬ್ಯಾಂಕ್ ನಿಗಾಗೆ ಒಳಪಡಿಸುವುದಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಆ ಉದ್ದೇಶವನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಸಹಕಾರಿ ಬ್ಯಾಂಕುಗಳ ಅಸ್ತಿತ್ವ ಹಾಗೂ ಅವುಗಳ ಸಹಕಾರಿ ಸ್ವರೂಪವನ್ನು ರಕ್ಷಿಸಬೇಕಿದೆ ಎಂದಿದ್ದಾರೆ.

ಬ್ಯಾಂಕುಗಳಲ್ಲಿ ಹಣಕಾಸು ಶಿಸ್ತು ಇರಬೇಕು. ಆದರೆ, ಸಹಕಾರಿಗಳನ್ನು ಖಾಸಗಿ ವಲಯವಾಗಿ ಮಾಡುವುದರಿಂದ ಈ ಉದ್ದೇಶ ಈಡೇರುವುದಿಲ್ಲ ಎಂದು ಪವಾರ್ ಅಭಿಪ್ರಾಯ ಪಟ್ಟಿದ್ದಾರೆ.



**'ಸಹಕಾರಿ' ಸ್ವರೂಪ ರಕ್ಷಿಸಲು ಪ್ರಧಾನಿಗೆ ಪವಾರ್ ಪತ್ರ**

ರಿಸರ್ವ್ ಬ್ಯಾಂಕ್ ಪ್ರಕಾರ 2019-20ರಲ್ಲಿ ಸರ್ಕಾರಿ ಹಾಗೂ ಖಾಸಗಿ ಬ್ಯಾಂಕ್ ವಲಯದಲ್ಲಿ ಕ್ರಮವಾಗಿ 3,766 ಹಾಗೂ 2,010 ವಂಚನೆಗಳು ನಡೆದಿದ್ದವು. ಆದರೆ, ಸಹಕಾರಿ ಬ್ಯಾಂಕುಗಳಲ್ಲಿ ಕೇವಲ 181 ವಂಚನೆ ನಡೆದಿವೆ ಎಂದು ಪವಾರ್ ಹೇಳಿದ್ದಾರೆ.

ಸರ್ಕಾರಿ ಬ್ಯಾಂಕುಗಳಲ್ಲಿ 64,509.90 ಕೋಟಿ ರೂ. ವಂಚನೆ ನಡೆದಿದೆ. ಇದು ಒಟ್ಟು ವಂಚನೆಯ ಶೇ.90.20 ರಷ್ಟಾಗಿದೆ. ಖಾಸಗಿ ವಲಯದ ಬ್ಯಾಂಕುಗಳಲ್ಲಿ 5,515.10 ಕೋಟಿ ರೂ.ಗಳ ವಂಚನೆ ನಡೆದಿದೆ. ಇದರ ಒಟ್ಟು ಪ್ರಮಾಣ ಶೇ.7.69ರಷ್ಟಾಗಿದೆ ಎಂದವರು ಹೇಳಿದ್ದಾರೆ.


2019-20ರಲ್ಲಿ ಪಿಎಂಸಿ ಬ್ಯಾಂಕಿನಲ್ಲಿ 4,355 ಕೋಟಿ ರೂ. ಹಗರಣ ನಡೆದಿದೆ ಎಂದು ಆರೋಪಿಸಲಾಗಿದೆ. ಆದರೆ, ಅದೇ ವರ್ಷದ ಪ್ರಥಮಾರ್ಧದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ನಡೆದ ವಂಚನೆಯ ಪ್ರಮಾಣ ಸುಮಾರು 95,700 ಕೋಟಿ ರೂ. ಆಗಿದೆ ಎಂದು ಪವಾರ್ ತಿಳಿಸಿದ್ದಾರೆ.

ಹೀಗಾಗಿ ಸಹಕಾರಿ ಬ್ಯಾಂಕುಗಳಲ್ಲಿ ಮಾತ್ರ ಹಣದ ದುರ್ಬಳಕೆ ಇಲ್ಲವೇ ಹಣಕಾಸು ಅವ್ಯವಹಾರ ನಡೆಯುತ್ತದೆ ಎಂದು ಭಾವಿಸುವುದು ಸರಿಯಲ್ಲ ಎಂದವರು ಹೇಳಿದ್ದಾರೆ.

ಸಹಕಾರಿ ಬ್ಯಾಂಕುಗಳಲ್ಲಿ ವೃತ್ತಿಪರತೆಯ ಕೊರತೆ ಇದೆ ಎಂದು ರಿಸರ್ವ್ ಬ್ಯಾಂಕ್ ಹೇಳುತ್ತಿದೆ. ಆದರೆ, ಅದರದೇ ಅಂಕಿ ಅಂಶಗಳ ಪ್ರಕಾರ ವಾಣಿಜ್ಯ ಬ್ಯಾಂಕುಗಳಲ್ಲಿ ಒಟ್ಟು ಎನ್.ಪಿ.ಎ. ಹಾಗೂ ನಿವ್ವಳ ಎನ್.ಪಿ.ಎ. ಪ್ರಮಾಣ ಕ್ರಮವಾಗಿ ಶೇ.9.68 ಹಾಗೂ ಶೇ.5.31 ಆಗಿದೆ. ಇದೇ ವೇಳೆ ನಗರ ಸಹಕಾರಿ ಬ್ಯಾಂಕುಗಳಲ್ಲಿ ಈ ಪ್ರಮಾಣ ಕ್ರಮವಾಗಿ ಶೇ.7.51 ಹಾಗೂ ಶೇ.2.53 ಆಗಿದೆ ಎಂದು ಪವಾರ್ ತಿಳಿಸಿದ್ದಾರೆ.

ಒಟ್ಟು ನಗರ ಸಹಕಾರಿ ಬ್ಯಾಂಕುಗಳಲ್ಲಿ ಕೇವಲ 70 ಮಾತ್ರ ಡಿ ದರ್ಜೆಯಲ್ಲಿವೆ. ಹೀಗಿರುವಾಗ ಸಹಕಾರಿ ಬ್ಯಾಂಕುಗಳಲ್ಲಿ ವೃತ್ತಿಪರತೆ ಇಲ್ಲ ಎಂಬುದು ಅಸಂಗತವಾಗಿದೆ ಎಂದೂ ಪವಾರ್ ತಿಳಿಸಿದ್ದಾರೆ. (4ನೇ ಪುಟಕ್ಕೆ)

## ಚನ್ನಗಿರಿ ಹಾಲಸ್ವಾಮಿ ಮಠದ ಶ್ರೀ ಜಯದೇವ ಸ್ವಾಮೀಜಿ ಲಿಂಗೈಕ್ಯ



ಚಿತ್ರದುರ್ಗ, ಆ.19- ಇಲ್ಲಿನ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಶಾಖಾ ಮಠವಾದ ಚನ್ನಗಿರಿ ಶ್ರೀ ಹಾಲಸ್ವಾಮಿ ವಿರಕ್ತಮಠದ ಶ್ರೀ ಜಯದೇವ ಸ್ವಾಮೀಜಿ ಇಂದು ಲಿಂಗೈಕ್ಯರಾಗಿದ್ದಾರೆ.

ಶ್ರೀಗಳಿಗೆ ಸುಮಾರು 77 ವರ್ಷ ವಯಸ್ಸಾಗಿತ್ತು. ನ್ಯುಮೋನಿಯಾ, ಕಫ, ಉಸಿರಾಟದ ಸಮಸ್ಯೆಗಳಿಂದ ಬಳಲುತ್ತಿದ್ದ ಶ್ರೀಗಳನ್ನು ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ವಿಧಿವಶರಾಗಿದ್ದಾರೆ. (6ನೇ ಪುಟಕ್ಕೆ)

## 'ಪಿಎಂ ಸ್ವನಿಧಿ ಯೋಜನೆ' ಆಪ್ ಬಿಡುಗಡೆ

ನವದೆಹಲಿ, ಆ. 19 – ಪಿಎಂ ಸ್ವನಿಧಿ ಯೋಜನೆಯಡಿ ಬೀದಿ ವ್ಯಾಪಾರಿಗಳಿಗೆ ಸಾಲ ನೀಡುವ ಯೋಜನೆಗೆ ನೆರವಾಗುವ ಮೊಬೈಲ್ ಆಪ್ ಅನ್ನು ಕೇಂದ್ರ ಸಚಿವ ಹರ್‌ದೀಪ್ ಸಿಂಗ್ ಪುರಿ ಅವರು ಉದ್ಘಾಟಿಸಿದ್ದಾರೆ. ರಾಜ್ಯ ನಗರಾಭಿವೃದ್ಧಿ ಸಚಿವರ ಜೊತೆ ಸಂವಾದ ನಡೆಸಿದ ಸಂದರ್ಭದಲ್ಲಿ ಈ ಆಪ್ ಅನ್ನು ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವ ಪುರಿ ಬಿಡುಗಡೆ ಮಾಡಿದ್ದಾರೆ. ಪಿಎಂ ಸ್ವನಿಧಿ ಯೋಜನೆಯಡಿ ಬೀದಿ ವ್ಯಾಪಾರಿಗಳಿಗೆ 10 ಸಾವಿರ ರೂ.ಗಳವರೆಗೆ ಸಾಲ ನೀಡಲಾಗುತ್ತದೆ. ಈ ಆಪ್ ಬಳಸಿಕೊಂಡು ನಗರ ಸ್ಥಳೀಯ ಸಂಸ್ಥೆಗಳು ಸುಲಭವಾಗಿ ಬೀದಿ ವ್ಯಾಪಾರಿಗಳ ಅರ್ಜಿಗಳ ಬಗ್ಗೆ ಕ್ರಮ ತೆಗೆದುಕೊಳ್ಳಬಹುದಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

# ಹಿರಿಯ ಕ್ರೀಡಾಪಟುಗೆ ದುಃಸ್ವಪ್ನ ತಂದ ಕೊರೊನಾ ಚಿಕಿತ್ಸೆ



ನವದೆಹಲಿ, ಆ. 19 – ಏಷಿಯಾ ಗೇಮ್ಸ್‌ನಲ್ಲಿ ಪದಕ ಪಡೆದಿದ್ದ ಓಟಗಾರ ಸುಚಾ ಸಿಂಗ್ ಕೊರೊನಾ ಚಿಕಿತ್ಸೆ ಪಡೆಯಲು ಪ್ರಯತ್ನಿಸಿದ್ದು ಕರಾಳ ಸ್ವಪ್ನವಾಗಿ ಪರಿಣಮಿಸಿದೆ.

ದೇಶಕ್ಕೆ ಹೆಸರು ತಂದುಕೊಟ್ಟ ಕ್ರೀಡಾ ಪಟುಗಳು ವೃದ್ಧಾಪ್ಯದಲ್ಲಿ ಚಿಕಿತ್ಸೆಗಿರಲಿ ಪರೀಕ್ಷೆಗೂ ಸಹ ಅಂಗಲಾಚುತ್ತಾ ಅಲೆಯುವಂತೆ ಮಾಡುವುದು ಅಗೌರವ ತಂದಂತೆ ಎಂದವರು ಹೇಳಿದ್ದಾರೆ.

1970ರ ಏಷಿಯಾ ಗೇಮ್ಸ್‌ನ 400 ಮೀಟರ್ ವೈಯಕ್ತಿಕ ವಿಭಾಗದಲ್ಲಿ ಸಿಂಗ್ ಕಂಚಿನ ಪದಕ ಪಡೆದಿದ್ದರು. 1970 ಹಾಗೂ 1974ರ ಏಷಿಯನ್ ಗೇಮ್ಸ್‌ನ 4x400 ರಿಲೇನಲ್ಲಿ ಬೆಳ್ಳಿ ಪಡೆದ ತಂಡದಲ್ಲಿ ಭಾಗವಾಗಿದ್ದರು.

ಆಗಸ್ಟ್ 4ರಂದು ಅವರಿಗೆ ಕೊರೊನಾ ಇರುವುದು ಕಂಡು ಬಂದಿತ್ತು. ಆಗಸ್ಟ್ 17 ರಂದು ನಡೆಸಲಾದ ಪರೀಕ್ಷೆಯಲ್ಲಿ ನೆಗೆಟಿವ್ ಬಂದ ನಂತರ ಬಿಡುಗಡೆ ಮಾಡಲಾಗಿದೆ.

ಜಲಂಧರ್‌ನ ಪಿ.ಐ.ಎಂ.ಎಸ್. ಆಸ್ಪತ್ರೆಗೆ ಅವರು ದಾಖಲಾಗಿದ್ದರು. ಚಿಕಿತ್ಸೆಗಾಗಿ ಸಂಬಂಧಿಕರ ನೆರವಿನಿಂದ 2.5 ಲಕ್ಷ ರೂ. ಖರ್ಚು ಮಾಡಿರುವುದಾಗಿ ಅವರು ಹೇಳಿದ್ದಾರೆ.

ಜುಲೈ 25-26ರಂದು ಅವರಲ್ಲಿ ಜ್ವರ ಹಾಗೂ ಕೆಮ್ಮು ಕಾಣಿಸಿಕೊಂಡಿತ್ತು. ವೈದ್ಯರಿಂದ ಚಿಕಿತ್ಸೆ ಪಡೆದಿದ್ದೆ. ಕೆಲ ದಿನ ಕಳೆದರೂ ಆರೋಗ್ಯ ಸುಧಾರಿಸಲಿಲ್ಲ. ಆಗ ಪರೀಕ್ಷೆಗೆ ಒಳಗಾಗಲು ತೆರಳಿದೆ ಎಂದು ಸಿಂಗ್ ಹೇಳಿದ್ದಾರೆ.

ಕೇವಲ ಟೆಸ್ಟ್ ಮಾಡಿಸಲು ಎರಡು ದಿನ ಕಾಯಬೇಕಾಯಿತು. ಚಿಕಿತ್ಸೆಗಾಗಿ ಜಲಂಧರ್ ಆಸ್ಪತ್ರೆಗೆ 5 ಸಾವಿರ ರೂ. ಪಾವತಿಸಿದ್ದೆ. ಅವರು ನನ್ನನ್ನು ಪಟೇಲ್ ಆಸ್ಪತ್ರೆಗೆ ಕಳಿಸಿದರು. ಎರಡು ಗಂಟೆಯ ಪರೀಕ್ಷೆಗಾಗಿ ಅಲ್ಲಿ ಎರಡು ದಿನ ಕಳೆದು 30 ಸಾವಿರ ರೂ. ಖರ್ಚು ಮಾಡಬೇಕಾಯಿತು.

ನಂತರ ಪಿ.ಐ.ಎಂ.ಎಸ್. ಆಸ್ಪತ್ರೆಗೆ ದಾಖಲಾಗಿದ್ದೆ. ಮಧ್ಯಾಹ್ನ 12 ಗಂಟೆಯ ಒಳಗೆ 1 ಲಕ್ಷ ರೂ. ಠೇವಣಿ ಮಾಡುವಂತೆ ತಿಳಿಸಲಾಗಿತ್ತು. ಅದರಂತೆ ನಾನು ಹಣ ಪಾವತಿಸಿದೆ. ಆಸ್ಪತ್ರೆ ವೆಚ್ಚ ಭರಿಸಲು ಸಂಬಂಧಿಗಳಿಂದ ಹಣ ಪಡೆಯಬೇಕಾಯಿತು ಎಂದವರು ಹೇಳಿದರು.

ವಾರದ ನಂತರ ಇನ್ನೊಂದು ಲಕ್ಷ ರೂ. ಪಾವತಿಸುವಂತೆ ತಿಳಿಸಲಾಯಿತು. ಆಗಲೂ ಸಂಬಂಧಿಕರ ನೆರವಿನ ನಂತರವೇ ಶುಲ್ಕ ಭರಿಸಲು ಸಾಧ್ಯವಾಯಿತು. ಅಂತಿಮವಾಗಿ ಆಸ್ಪತ್ರೆಯಲ್ಲಿ 2.5 ಲಕ್ಷ ರೂ. ನೀಡಬೇಕಾಯಿತು. ಇದು ಮಾಜಿ ಕ್ರೀಡಾಪಟುವಿಗೆ ತೋರಿದ ಅಗೌರವ ಎಂದವರು ತಿಳಿಸಿದ್ದಾರೆ.

## ಸರ್ಕಾರಿ ಹುದ್ದೆಗಳಿಗೆ ಒಂದೇ ಪರೀಕ್ಷೆ

**(3ನೇ ಪುಟದಿಂದ)** ಸರಳವಾಗಲಿದೆ. ಸರ್ಕಾರದ ನಿರ್ಧಾರ ವಿಶೇಷವಾಗಿ ದಮನಿತರಿಗೆ ಹೆಚ್ಚು ನೆರವಾಗಲಿದೆ ಎಂದು ಸಿಂಗ್ ತಿಳಿಸಿದ್ದಾರೆ. ಹಲವಾರು ಹುದ್ದೆಗಳಿಗೆ ಬೇರೆ ಬೇರೆ ಪರೀಕ್ಷೆಗಳನ್ನು ಬರೆಯಲು ದೂರದವರೆಗೆ ಪ್ರಯಾಣ ಮಾಡಬೇಕಿದ್ದ ಬಡವರು ಹಾಗೂ ಮಹಿಳೆಯರಿಗೆ ಈ ಕ್ರಮ ವಿಶೇಷವಾಗಿ ನೆರವಾಗಲಿದೆ ಎಂದವರು ಹೇಳಿದ್ದಾರೆ.

ಎನ್.ಆರ್.ಎ. ಮೂಲಕ ಬಿ ಹಾಗೂ ಸಿ ಗುಂಪಿನ ಹುದ್ದೆಗಳಿಗೆ (ತಾಂತ್ರಿಕೇತರ) ಸಾಮಾನ್ಯ ಅರ್ಹತಾ ಪರೀಕ್ಷೆ (ಸಿ.ಇ.ಟಿ.) ನಡೆಸಲಾಗುವುದು. ಉದ್ದೇಶಿತ ಎನ್.ಆರ್.ಎ.ದಲ್ಲಿ ರೈಲ್ವೆ, ಹಣಕಾಸು, ಸ್ಟಾಫ್ ಸೆಲೆಕ್ಷನ್ ಕಮೀಷನ್, ರೈಲ್ವೆ ನೇಮಕಾತಿ ಮಂಡಳಿ ಹಾಗೂ ಬ್ಯಾಂಕಿಂಗ್ ಸಿಬ್ಬಂದಿ ಆಯ್ಕೆ ಸಂಸ್ಥೆಗಳ ಪ್ರತಿನಿಧಿಗಳು ಇರಲಿದ್ದಾರೆ.

ಎನ್.ಆರ್.ಎ. ಪರಿಣಿತ ಸಂಸ್ಥೆಯಾಗಲಿದೆ. ಇದರ ಮೂಲಕ ಕೇಂದ್ರ ಸರ್ಕಾರದ ನೇಮಕಾತಿಯಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಅತ್ಯುತ್ತಮ ಅಭ್ಯಾಸಗಳನ್ನು ಅಳವಡಿಸಿಕೊಳ್ಳಲಾಗುವುದು ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸಾಮಾನ್ಯ ಪರೀಕ್ಷೆಯ ಅಂಕಗಳ ಆಧಾರದ ಮೇಲೆ ಮೂರು ಪ್ರಮುಖ ನೇಮಕಾತಿ ಸಂಸ್ಥೆಗಳಲ್ಲಿ ನೇಮಕಾತಿ ಮಾಡಲಾಗುವುದು. ಆದರೆ, ನಂತರದಲ್ಲಿ ಇತರೆ ಸಂಸ್ಥೆಗಳೂ ಸಹ ಈ ಫಲಿತಾಂಶವನ್ನು ಬಳಸಿಕೊಳ್ಳಲಿವೆ.

ದೀರ್ಘಾವಧಿಯಲ್ಲಿ ಸಿ.ಇ.ಟಿ. ಫಲಿತಾಂಶವನ್ನು ಕೇಂದ್ರ ಸರ್ಕಾರದ ಇತರ ತನಿಖಾ ಸಂಸ್ಥೆಗಳು, ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು, ಸಾರ್ವಜನಿಕ ವಲಯದ ಉದ್ಯಮಗಳು ಹಾಗೂ ಖಾಸಗಿ ವಲಯಗಳೂ ಬಳಸಿಕೊಳ್ಳಬಹುದಾಗಿದೆ ಎಂದು ಸಚಿವ ಸಿಂಗ್ ತಿಳಿಸಿದ್ದಾರೆ.

ಎನ್.ಆರ್.ಎ. ಸ್ಥಾಪಿಸಲು ಕೇಂದ್ರ ಸರ್ಕಾರ 1,517.57 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಇದರ ಕೇಂದ್ರ ಕಚೇರಿ ದೆಹಲಿಯಲ್ಲಿರಲಿದೆ. ಕಾರ್ಯದರ್ಶಿ ಹಂತದ ಅಧಿಕಾರಿ ಈ ಸಂಸ್ಥೆಗೆ ಅಧ್ಯಕ್ಷರಾಗಲಿದ್ದಾರೆ.

ಎನ್.ಆರ್.ಎ. ಸ್ಥಾಪನೆಯ ಜೊತೆಗೆ 117 ಆಶಯ ಜಿಲ್ಲೆಗಳಲ್ಲಿ ಪರೀಕ್ಷಾ ಮೂಲಭೂತ ಸೌಲಭ್ಯ ಕಲ್ಪಿಸಲು ಹಾಗೂ ಮೂರು ವರ್ಷಗಳವರೆಗೆ ಪರೀಕ್ಷೆಗಳನ್ನು ನಡೆಸಲು ಈ ಅನುದಾನ ಬಳಸಲಾಗುವುದು.

ಈಗಿರುವ ಪದ್ಧತಿಯಲ್ಲಿ ಹಲವಾರು ಸಂಸ್ಥೆಗಳು ಒಂದೇ ಅರ್ಹತೆಯ ಒಂದೇ ರೀತಿಯ ಹುದ್ದಿಗಳಿಗೆ ಬೇರೆ ಬೇರೆ ಪರೀಕ್ಷೆಗಳನ್ನು ನಡೆಸುತ್ತಿವೆ. ಪ್ರತಿ ಪರೀಕ್ಷೆಗೂ ಅಭ್ಯರ್ಥಿಗಳು ಪ್ರತ್ಯೇಕ ಶುಲ್ಕ ಪಾವತಿಸಬೇಕು ಹಾಗೂ ಪರೀಕ್ಷೆಯಲ್ಲಿ ಪಾಲ್ಗೊಳ್ಳಲು ದೂರದವರೆಗೆ ಪ್ರಯಾಣ ಮಾಡಬೇಕಿದೆ.

ಏಕರೂಪದ ಪರೀಕ್ಷೆ ನಡೆಸಲು ದೇಶದಲ್ಲಿ ಸಾವಿರದವರೆಗೆ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ಸಚಿವ ಸಿಂಗ್ ಹೇಳಿದ್ದಾರೆ.

ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಒಂದು ಪರೀಕ್ಷಾ ಕೇಂದ್ರ ಇರಲಿದೆ. ಅಭ್ಯರ್ಥಿಗಳು ಸಾಮಾನ್ಯ ಪರೀಕ್ಷೆಗೆ ತಮ್ಮ ಜಿಲ್ಲೆ ಬಿಟ್ಟು ಬೇರೆಡೆ ಹೋಗುವ ಅಗತ್ಯ ಬರುವುದಿಲ್ಲ ಎಂದವರು ವಿವರಿಸಿದ್ದಾರೆ.

ಪ್ರತಿ ವರ್ಷ 3 ಕೋಟಿಯವರೆಗೆ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗುವ ನಿರೀಕ್ಷೆ ಇದೆ. ಒಂದು ಪರೀಕ್ಷೆಗೆ ಹಾಜರಾದವರು ಮೂರೂ ನೇಮಕಾತಿ ಸಂಸ್ಥೆಗಳಿಂದ ನೇಮಕವಾಗುವ ಅರ್ಹತೆ ಪಡೆದುಕೊಳ್ಳುತ್ತಾರೆ ಎಂದು ಸಿಂಗ್ ಹೇಳಿದ್ದಾರೆ.

## ಹರಿಹರ : 31 ಸೋಂಕು ದೃಢ

**(3ನೇ ಪುಟದಿಂದ)** ಇದುವರೆಗೆ 558 ಗ್ರಾಮೀಣ ಪ್ರದೇಶಗಳಲ್ಲಿ 359 ಸೇರಿ ಒಟ್ಟು 917 ವ್ಯಕ್ತಿಗಳು ಇದ್ದು ಹೋಂ ಐಸೋಲೇಷನ್ ನಲ್ಲಿ 256, ದಾವಣಗೆರೆ ಸಿ.ಜೆ. ಆಸ್ಪತ್ರೆಯಲ್ಲಿ 142, ಕೋವಿಡ್ ಕೇರ್ ಸೆಂಟರ್ ನಲ್ಲಿ 176, ಹರಿಹರ ಸಾರ್ವಜನಿಕ ಆಸ್ಪತ್ರೆಯಲ್ಲಿ 271 ವ್ಯಕ್ತಿಗಳು ಚಿಕಿತ್ಸೆ ಪಡೆಯುತ್ತಿದ್ದು ಉಳಿದ 331 ವ್ಯಕ್ತಿಗಳು ಚಿಕಿತ್ಸೆ ಪಡೆದುಕೊಂಡು ಗುಣಮುಖರಾಗಿದ್ದಾರೆ. ನಗರದ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸೇರಿದಂತೆ 298 ಕಂಟೋನ್ಮೆಂಟ್ ಝೋನ್ ಗಳು ಇದ್ದು ಅದರಲ್ಲಿ 111 ಅವಧಿ ಮುಗಿದಿದ್ದು 167 ಕಂಟೈನ್‌ಮೆಂಟ್ ಝೋನ್‌ಗಳಲ್ಲಿ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪೌರಾಯುಕ್ತೆ ಎಸ್ ಲಕ್ಷ್ಮೀ ಜಿಲ್ಲಾ ಮಲೇರಿಯಾ ಅಧಿಕಾರಿ ನಟರಾಜ್, ಆರೋಗ್ಯ ಇಲಾಖೆಯ ಡಾ. ಚಂದ್ರಮೋಹನ್, ವಿಮಲ ನಾಯ್ಕ್ ಇತರರು ಹಾಜರಿದ್ದರು.

## ಮೆಕ್ಕೆಜೋಳ ಹೊಲಕ್ಕೆ ಕರಡಿ ಹಿಂದು ದಾಳಿ




ಹರಪನಹಳ್ಳಿ, ಆ.19- ಕರಡಿ ಹಿಂಡು ಮೆಕ್ಕೆಜೋಳದ ಹೊಲಕ್ಕೆ ನುಗ್ಗಿ ಬೆಳೆ ನಾಶ ಮಾಡಿರುವ ಘಟನೆ ತಾಲ್ಲೂಕಿನ ಹಾರಕನಾಳು ದೊಡ್ಡತಾಂಡ ಗ್ರಾಮದಲ್ಲಿ ಜರುಗಿದೆ. ಹಾನಿಗೊಳಗಾದ ಹಾರಕನಾಳು ದೊಡ್ಡತಾಂಡದ ರೈತ ಮೇಘಾನಾಯ್ಕ ಮತ್ತು ವೆಂಕಟೇಶನಾಯ್ಕ ಎಂಬುವವರಿಗೆ ಸೇರಿದ ಸುಮಾರು ಹತ್ತು ಎಕರೆ ಜಮೀನಿನಲ್ಲಿ ಬೆಳೆದಿದ್ದ ಮೆಕ್ಕೆಜೋಳದ ಹೊಲವನ್ನು ಕರಡಿ ಹಿಂಡು ನಾಶ ಮಾಡಿವೆ. ಹುಲುಸಾಗಿ ಬೆಳೆದು ನಿಂತ ಜೋಳಕ್ಕೆ ಕರಡಿಗಳದಾಳಿ ಮಾಡಿ ಲಕ್ಷಾಂತರ ಬೆಳೆಯನ್ನು ನಷ್ಟ ಉಂಟುಮಾಡಿದೆ.

ಹೊಲಕ್ಕೆ ಅರಣ್ಯ ಇಲಾಖೆಯ ಮಂಜುನಾಥ ಬಿಡನಾಳ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಆಹಾರ ಹರಸಿ ವನ್ಯ ಜೀವಿಗಳು ಕಾಡಿನಿಂದ ಹೊಲಗದ್ದೆಗಳಿಗೆ ನುಗ್ಗಿ ಹಾನಿ ಮಾಡುತ್ತಿವೆ. ಹಾನಿಗೊಳಗಾದ ರೈತನಿಗೆ ಪರಿಹಾರ ಕೊಡಿಸುವುದಾಗಿ ತಿಳಿಸಿದರು.

## ಜಿಎಂಐಟಿ : ಆನ್‌ಲೈನ್ ಅಣಕು ಪರೀಕ್ಷೆ



ದಾವಣಗೆರೆ, ಆ.19- ಕೋವಿಡ್ ಸಂಕಷ್ಟ ಪರಿಸ್ಥಿತಿಯಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಸಿಇಟಿ ಪರೀಕ್ಷೆಗೆ ನೆರವಾಗುವ ನಿಟ್ಟಿನಲ್ಲಿ ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯವು ಐದು ಹಂತದಲ್ಲಿ ಆನ್‌ಲೈನ್ ಅಣಕು ಪರೀಕ್ಷೆಯನ್ನು ಆರಂಭಿಸಿದ್ದು, ಇತ್ತೀಚೆಗೆ ನಡೆಸಿದ ಕಿರು ಸಮಾರಂಭದಲ್ಲಿ ಬಹುಮಾನ ಮತ್ತು ಪ್ರಶಂಸಾ ಪತ್ರವನ್ನು ವಿತರಿಸಲಾಯಿತು.

5 ಹಂತದ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಮೊದಲ 10 ವಿದ್ಯಾರ್ಥಿಗಳಿಗೆ ಹಾಗೂ 5 ಹಂತಗಳಲ್ಲಿ ಹೆಚ್ಚು ಅಂಕ ಗಳಿಸಿದ ಮೊದಲ ಮೂವರು ವಿದ್ಯಾರ್ಥಿಗಳಿಗೆ ಬಹುಮಾನ, ಪ್ರಶಂಸನಾ ಪತ್ರ ವಿತರಿಸಲಾಯಿತು. ಕಾಲೇಜು ಆಡಳಿತ ಮಂಡಳಿ ಪ್ರತಿನಿಧಿ ವೈ.ಯು. ಸುಭಾಷ್‌ಚಂದ್ರ, ಕಾಲೇಜು ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್ ಮತ್ತು ಕಾಲೇಜು ಶೈಕ್ಷಣಿಕ ಡೀನ್ ಡಾ. ಬಿ.ಎಸ್. ಸುನೀಲ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಸರ್ಕಾರಿ, ಖಾಸಗಿ ಬ್ಯಾಂಕುಗಳಿಗಿಂತ 'ಸಹಕಾರಿ'ಗಳೇ ಸುರಕ್ಷಿತ

**(3ನೇ ಪುಟದಿಂದ)** ಪಂಜಾಬ್ ಮತ್ತು ಮಹಾರಾಷ್ಟ್ರ ಸಹಕಾರಿ ಬ್ಯಾಂಕ್ (ಪಿಎಂಸಿ) ಯಲ್ಲಿ ನಡೆದಿದ್ದು ವಂಚನೆಯೇ ವಿನಹ ಸಹಕಾರಿ ಬ್ಯಾಂಕುಗಳ ಉದ್ಯಮ ವೈಫಲ್ಯವಲ್ಲ. ಹೀಗಾಗಿ ಈ ವಿಷಯವನ್ನು ವೈಯಕ್ತಿಕವಾಗಿ ಪರಿಶೀಲಿಸಿ ಸಹಕಾರಿ ಬ್ಯಾಂಕಿಂಗ್ ವಲಯಕ್ಕೆ ನ್ಯಾಯ ಒದಗಿಸಬೇಕು ಎಂದವರು ಒತ್ತಾಯಿಸಿದ್ದಾರೆ.

ಸಹಕಾರಿ ಬ್ಯಾಂಕಿಂಗ್ ವಲಯ ಗ್ರಾಮೀಣ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬಾಗಿದೆ. ಇವುಗಳ ವ್ಯಾಪಕ ಶಾಖಾ ಜಾಲದ ಕಾರಣದಿಂದಾಗಿ ರಿಸರ್ವ್ ಬ್ಯಾಂಕ್ ಎಲ್ಲಾ ನಗರ ಸಹಕಾರಿ ಬ್ಯಾಂಕುಗಳ ಪರಿಶೀಲನೆ ಪ್ರತಿ ವರ್ಷ ನಡೆಸುವುದು ಅಸಾಧ್ಯ ಎಂದು ಪವಾರ್ ತಿಳಿಸಿದ್ದಾರೆ.

ಹೀಗಾಗಿ ರಿಸರ್ವ್ ಬ್ಯಾಂಕ್ ಸಹಕಾರಿ ಬ್ಯಾಂಕುಗಳನ್ನು ಖಾಸಗಿ ಬ್ಯಾಂಕುಗಳಾಗಿ ಮಾಡಲು 1993ರಿಂದ ಪ್ರಯತ್ನ ನಡೆಸುತ್ತಿದೆಯಾದರೂ ಅದು ಸಾಧ್ಯವಾಗಿಲ್ಲ ಎಂದವರು ಹೇಳಿದ್ದಾರೆ.

## ಚಂದ್ರನಹಳ್ಳಿಯಲ್ಲಿ ಭತ್ತದ ಸಮಗ್ರ ಬೆಳೆ ನಿರ್ವಹಣೆ ತರಬೇತಿ



ದಾವಣಗೆರೆ,ಆ.19- ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ ಚಂದ್ರನಹಳ್ಳಿ ಗ್ರಾಮದಲ್ಲಿ ಭತ್ತದಲ್ಲಿ ಸಮಗ್ರ ಬೆಳೆ ನಿರ್ವಹಣೆ ತರಬೇತಿ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಹಾಗೂ ಭತ್ತದಲ್ಲಿ ಯಾಂತ್ರಿಕೃತ ನಾಟಿ ಮಾಡಿದ ರೈತರ ತಾಕುಗಳಿಗೆ ಭೇಟಿ ನೀಡಿ, ಭತ್ತದಲ್ಲಿ ಬರುವ ಕಾಂಡ ಕೊರಕ ಕೀಟದ ಬಾಧೆಯನ್ನು ತಡೆಯಲು ಸಮಗ್ರ ಪೀಡೆ ನಿರ್ವಹಣೆ ಕ್ರಮಗಳನ್ನು ಅನುಸರಿಸಬೇಕು ಹಾಗೂ ಒಂದು ಎಕರೆಗೆ 4 ಮೋಕ ಬಲೆಗಳನ್ನು ಅಳವಡಿಸುವುದರಿಂದ ಕೀಟನಾಶಕದ ಬಳಕೆಯನ್ನು ಕಡಿಮೆ ಮಾಡಬಹುದು ಎಂದು ಕೇಂದ್ರದ ಬೇಸಾಯ ತಜ್ಞ ಮಲ್ಲಿಕಾರ್ಜುನ್ ತಿಳಿಸಿದರು.

ಎಚ್ ಎಂ ಸಣ್ಣ ಗೌಡರು ಭತ್ತದಲ್ಲಿ ಸಮಗ್ರ ಪೋಷಕಾಂಶ ನಿರ್ವಹಣಾ ಕ್ರಮಗಳನ್ನು ತಿಳಿಸಿಕೊಟ್ಟರು. ಕಾರ್ಯಕ್ರಮದಲ್ಲಿ ಯಾಂತ್ರೀಕೃತ ನಾಟಿ ಮಾಡಿದ ಆಯ್ದ 20 ರೈತರಿಗೆ ಮೋಹಕ ಬಲೆಗಳನ್ನು ಮುಂಚೂಣಿ ಪ್ರಾತ್ಯಕ್ಷಿಕೆಯ ಅಂಗವಾಗಿ ನೀಡಲಾಯಿತು. ಮೋಕ ಬಲೆಗಳನ್ನು ಅಳವಡಿಸುವ ವಿಧಾನವನ್ನು ಪದ್ಧತಿ ಪ್ರಾತ್ಯಕ್ಷಿಕೆ ಮೂಲಕ ತೋರಿಸಿ ಕೊಡಲಾಯಿತು.

ಕಾರ್ಯಕ್ರಮದಲ್ಲಿ ವಿಜಯಕುಮಾರ್, ಪ್ರಗತಿಪರ ರೈತರಾದ ಚಂದ್ರಕಾಂತ, ಗುರುಮೂರ್ತಿ ಮತ್ತಿತರರು ಪಾಲ್ಗೊಂಡಿದ್ದರು.

## ನಗರದಲ್ಲಿಂದು ದೇವರಾಜ ಅರಸು ಜನ್ಮದಿನಾಚರಣೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಮಾಜಿ ಮುಖ್ಯ ಮಂತ್ರಿ ಡಿ.ದೇವರಾಜ ಅರಸು ಅವರ 105 ನೇ ಜನ್ಮ ದಿನಾಚರಣೆಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಕೋವಿಡ್ ಹಿನ್ನೆಲೆಯಲ್ಲಿ ಸರಳವಾಗಿ ಮತ್ತು ಸಾಂಕೇತಿಕವಾಗಿ ಆಚರಿಸಲಾಗುವುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿಲ್ಲೆಯಲ್ಲಿ 6 ಸಾವಿರದ ಗಡಿ ದಾಟಿದ ಕೊರೊನಾ

**(3ನೇ ಪುಟದಿಂದ)** 37 ಹಾಗೂ ಹೊರ ಜಿಲ್ಲೆಯ 6 ಸೋಂಕಿತರು ಪತ್ತೆಯಾಗಿದ್ದಾರೆ.

ಇದೇ ದಿನ ದಾವಣಗೆರೆ ತಾಲ್ಲೂಕಿನ 57 ಸೋಂಕಿತರು ಗುಣಮುಖರಾಗಿದ್ದಾರೆ. ಹರಿಹರದ 5, ಜಗಳೂರು ಹಾಗೂ ಚನ್ನಗಿರಿಯ ತಲಾ ಇಬ್ಬರು ಗುಣಮುಖರಾಗಿದ್ದಾರೆ.

ದಾವಣಗೆರೆಯ ಸಿದ್ದವೀರಪ್ಪ ಬಡಾವಣೆಯ 64ರ ಪುರುಷ, ನಿಟುವಳ್ಳಿಯ 42ರ ಪುರುಷ, ಆವರಗೆರೆಯ 58ರ ಪುರುಷ, ಕೆ.ಬಿ. ಬಡಾವಣೆಯ 64ರ ಪುರುಷ, ಪಿ.ಬಿ. ರಸ್ತೆಯ 56ರ ಪುರುಷ, ಜಗಳೂರಿನ ಕಮಂಡಲಗೊಂದಿಯ 60ರ ಮಹಿಳೆ ಹಾಗೂ ಹಾವೇರಿ ಜಿಲ್ಲೆ ರಾಣೇಬೆನ್ನೂರಿನ 89ರ ವೃದ್ಧ ಸಾವನ್ನಪ್ಪಿದ್ದಾರೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಾವಣಗೆರೆಯ ನಿಜಲಿಂಗಪ್ಪ ಬಡಾವಣೆಯ 78 ವರ್ಷದ ವೃದ್ಧ, ಶಿವಕುಮಾರಸ್ವಾಮಿ ಬಡಾವಣೆಯ 19ರ ಯುವತಿ, 46ರ ಮಹಿಳೆ, ದೇವರಾಜ ಅರಸು ಬಡಾವಣೆಯ 23ರ ಪುರುಷ, ಮೌನೇಶ್ವರ ಬಡಾವಣೆಯ 58ರ ಪುರುಷ, ಎಂ.ಸಿ.ಸಿ. ಎ ಬ್ಲಾಕ್‌ನ 65ರ ಮಹಿಳೆ, ಬಸವೇಶ್ವರ ನಗರದ 56ರ ಮಹಿಳೆಯಲ್ಲಿ ಸೋಂಕು ಕಂಡು ಬಂದಿದೆ.

ಕೊಂಡಜ್ಜಿ ರಸ್ತೆಯ ವಿನಾಯಕ ನಗರದ 56ರ ಮಹಿಳೆ, ವಿದ್ಯಾನಗರದ 67ರ ಪುರುಷ ಎಂ.ಸಿ.ಸಿ. ಬಿ ಬ್ಲಾಕ್‌ನ 62ರ ಪುರುಷ, ಕೆ.ಬಿ. ಬಡಾವಣೆಯ 57ರ ಪುರುಷ, ಸಾಂಸ್ಥಿಕ ಕ್ವಾರಂಟೈನ್‌ನಲ್ಲಿರುವ 34ರ ಪುರುಷ, ವಿಜಯ ನಗರದ 67ರ ಪುರುಷನಲ್ಲಿ ಸೋಂಕು ಕಂಡು ಬಂದಿದೆ.

ನಿಟುವಳ್ಳಿಯ 42, 58 ಹಾಗೂ 65ರ ಪುರುಷರು ಹಾಗೂ 24ರ ಮಹಿಳೆ, ಎಸ್.ಪಿ.ಎಸ್. ನಗರದ 59ರ ಪುರುಷ, ವಿನೋಬನಗರದ 39 ಹಾಗೂ 53ರ ಪುರುಷರು, ವಿಜಯ ನಗರ ಬಡಾವಣೆಯ 51ರ ಮಹಿಳೆ, ರಾಂ ಅಂಡ್ ಕೋ ಸರ್ಕಲ್ ಬಳಿಯ 43ರ ಪುರುಷ, ತರಳಬಾಳು ಬಡಾವಣೆಯ 33ರ ಮಹಿಳೆ, ಎಂ.ಸಿ.ಸಿ. ಬಿ ಬ್ಲಾಕ್‌ನ 34ರ ಮಹಿಳೆ, ಆಜಾದ್ ನಗರದ 23ರ ಪುರುಷನಲ್ಲಿ ಸೋಂಕು ಪತ್ತೆಯಾಗಿದೆ.

ಪಿ.ಜೆ. ಬಡಾವಣೆಯ 40ರ ಪುರುಷ ದೇವರಾಜ ಅರಸು ಬಡಾವಣೆಯ 76ರ ವೃದ್ಧ, ವಿನೋಬನಗರದ 24ರ ಮಹಿಳೆ, ಶಿವಕುಮಾರ ಸ್ವಾಮಿ ಬಡಾವಣೆಯ 49ರ ಪುರುಷ, ರಂಗನಾಥ ಬಡಾವಣೆಯ 65ರ ಪುರುಷ, ಎಂ.ಸಿ.ಸಿ. ಎ ಬ್ಲಾಕ್‌ನ 59ರ ಪುರುಷ, ತರಳಬಾಳು ಬಡಾವಣೆಯ 56ರ ಪುರುಷ, ಹೆಚ್.ಕೆ.ಆರ್. ನಗರದ 40ರ ಪುರುಷ, ಹೊಂಡದ ರಸ್ತೆಯ 65ರ ಪುರುಷ, ಜಯನಗರದ 17ರ ಯುವತಿ, 45ರ ಮಹಿಳೆ, ಕರಿಯಮ್ಮ ಲೇಔಟ್‌ನ 14ರ ಯುವತಿ, ರಾಜೇಶ್ವರಿ ಬಡಾವಣೆಯ 37ರ ಮಹಿಳೆ, ಕಾಯಿಪೇಟೆಯ 56ರ ಪುರುಷ, ಡಿಸಿಎಂ ಬಡಾವಣೆಯ 32ರ ಪುರುಷ ಹಾಗೂ 20ರ ಯುವಕ, ಇಮಾಮ್ ನಗರದ 23ರ ಪುರುಷ, ಶಿವಕುಮಾರ ಸ್ವಾಮಿ ಬಡಾವಣೆಯ 56ರ ಮಹಿಳೆ, ಕುಕ್ಕವಾಡದ 35ರ ಪುರುಷ, 40 ಹಾಗೂ 26ರ ಮಹಿಳೆಯರು ಹಾಗೂ 2 ವರ್ಷದ ಗಂಡು ಮಗು, ಒಕ್ಕಲಿಗ ಪೇಟೆಯ 22ರ ಮಹಿಳೆ, ಎಸ್.ಎನ್. ಬಡಾವಣೆಯ 28ರ ಮಹಿಳೆ, ಆಜಾದ್ ನಗರ ಪೊಲೀಸ್ ಠಾಣೆಯ 29ರ ಮಹಿಳೆಯರಲ್ಲಿ ಸೋಂಕು ಕಾಣಿಸಿಕೊಂಡಿದೆ.

ಆಂಜನೇಯ ಬಡಾವಣೆಯ 56ರ ಪುರುಷ, ರಂಗನಾಥ ನಗರದ 51ರ ಪುರುಷ, ಖಾಸಗಿ ಆಸ್ಪತ್ರೆಯ ಪಿ.ಜಿ.ಯಲ್ಲಿರುವ 27ರ ಮಹಿಳೆ ಹಾಗೂ 22ರ ಪುರುಷ, ಆಂಜನೇಯ ಬಡಾವಣೆಯ 45ರ ಮಹಿಳೆ, ಶ್ರೀರಾಮ ಬಡಾವಣೆಯ 50ರ ಪುರುಷ ಹಾಗೂ 45ರ ಮಹಿಳೆ, ನಿಟುವಳ್ಳಿಯ 37ರ ಪುರುಷ, ಶಿವಾಜಿ ನಗರದ 41ರ ಪುರುಷ, ಒಕ್ಕಲಿಗರ ಪೇಟೆಯ 45ರ ಮಹಿಳೆ, ಶ್ರೀರಾಮ ನಗರದ 22ರ ಮಹಿಳೆ, ಶ್ರೀರಾಮ ನಗರದ 46 ಹಾಗೂ 61ರ ಪುರುಷರು, 30ರ ಮಹಿಳೆ ಹಾಗೂ 16ರ ಯುವಕ, ಪಿ.ಜೆ. ಬಡಾವಣೆಯ 78ರ ವೃದ್ಧೆ, ತರಳಬಾಳು ಬಡಾವಣೆಯ 45ರ ಮಹಿಳೆ, ನಿಟುವಳ್ಳಿಯ 57ರ ಪುರುಷ, ರಾಜೇಂದ್ರ ಬಡಾವಣೆಯ 42ರ ಮಹಿಳೆ, ಪಿ.ಜೆ. ಬಡಾವಣೆಯ 63ರ ಮಹಿಳೆ, ವಿದ್ಯಾನಗರದ 52ಹಾಗೂ 68ರ ಪುರುಷರು, ಗಡಿಯಾರ ಕಂಬದ 31ರ ಮಹಿಳೆ, ಖಾಸಗಿ ಆಸ್ಪತ್ರೆಯ 37ರ ಮಹಿಳೆ, ಬೆಳ್ಳೂಡಿ ಗಲ್ಲಿಯ 49ರ ಮಹಿಳೆ, ಕೆ.ಟಿ.ಜೆ. ನಗರದ 56ರ ಮಹಿಳೆ, ರಂಗನಾಥ ಬಡಾವಣೆಯ 91ರ ವೃದ್ಧ ಹಾಗೂ 82ರ ವೃದ್ಧೆ, ಎಸ್.ಕೆ.ಎಸ್. ನಗರದ 30ರ ಮಹಿಳೆಯರಲ್ಲಿ ಸೋಂಕು ಪತ್ತೆಯಾಗಿದೆ.

ತಾಲ್ಲೂಕಿನ ತುರ್ಚಘಟ್ಟದ 60ರ ಮಹಿಳೆ, ಶ್ಯಾಗಲೆಯ 44ರ ಮಹಿಳೆ, ದೊಡ್ಡಬಾತಿಯ 14ರ ಯುವಕ, 67ರ ಮಹಿಳೆ, 43ರ ಪುರುಷ ಹಾಗೂ 77ರ ವೃದ್ಧ, ಎಲೇಬೇತೂರಿನ 36ರ ಪುರುಷ, ಹುಲಿಕಟ್ಟೆಯ 27ರ ಮಹಿಳೆಯರಲ್ಲಿ ಸೋಂಕು ಕಂಡು ಬಂದಿದೆ.

ಯಂಕನಹಳ್ಳಿ ಕ್ಯಾಂಪ್‌ನ 43ರ ಪುರುಷ, ನರಗನಹಳ್ಳಿಯ 2 ವರ್ಷದ ಬಾಲಕಿ, ಎಂ.ಬಿ. ಕೆರೆಯ 47ರ ಪುರುಷ, ಹಳೇಬಾತಿಯ 48ರ ಮಹಿಳೆ, ಆನಗೋಡಿನ 52ರ ಪುರುಷ, ಹೊನ್ನೂರು ಗೊಲ್ಲರಹಟ್ಟಿಯ 75ರ ವೃದ್ಧೆ, ಕನಗೊಂಡನಹಳ್ಳಿಯ 13ರ ಬಾಲಕಿ, ಶಿರಮಗೊಂಡನಹಳ್ಳಿಯ 28ರ ಪುರುಷ ಹಾಗೂ 21ರ ಮಹಿಳೆ, ಪಾಲವ್ವನಹಳ್ಳಿಯ 48ರ ಪುರುಷ, ಎಲೆಬೇತೂರಿನ 35ರ ಮಹಿಳೆ ಹಾಗೂ 65ರ ಪುರುಷ, ಕೋಡಿಹಳ್ಳಿಯ 70ರ ವೃದ್ಧೆ ಹಾಗೂ 40 ಮತ್ತು 42ರ ಮಹಿಳೆಯರು, ಎಲೇಬೇತೂರಿನ 58ರ ಮಹಿಳೆ ಸೋಂಕು ಪತ್ತೆಯಾಗಿದೆ.


**ಮನೆ ಬಾಡಿಗೆಗೆ/ಲೀಜ್‌ಗೆ**
1 BHK, 2 BHK, 3 BHK
ರುದ್ರೇಶ್, ಏಜೆಂಟರು
87226 08529

**ನಿವೇಶನ ಮಾರಾಟಕ್ಕಿದೆ**
ಪಿ.ಬಿ. ರಸ್ತೆ ಹತ್ತಿರ ಉತ್ತಮ್ ಬಡಾವಣೆಯಲ್ಲಿ 30X55 ಅಡಿ ಉತ್ತರ ಮತ್ತು ಪಶ್ಚಿಮ ದಿಕ್ಕಿನ ಕಾರ್ನರ್ ನಿವೇಶನ.
Good location & Ready for construction
ಸಂಪರ್ಕಿಸಿ: ಜಗದೀಶ್
93439 70512

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ದಾಟಿ**
ಹೊಸ ಬನಶಂಕರಿ ಲೇಔಟ್ ನಲ್ಲಿ 30x50 East 40 ಅಡಿ ರೋಡಿಗೆ 30x50 West, 30x36 West, 80x76 East ಸೈಟುಗಳು ಮಾರಾಟಕ್ಕಿವೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110, 93410 14130

**ನೇರ ಪರೀಕ್ಷೆಗಳು**
PUC, ARTS, COMMERCE, SCIENCE ಮತ್ತು SSLC
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.
ಮಾನಸ ಎಜುಕೇಷನ್ ಟ್ರಸ್ಟ್,
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಹೊಸ ಮನೆ ಮಾರಾಟಕ್ಕಿದೆ**
30x 35, ದಕ್ಷಿಣ ದಿಕ್ಕು ಎಸ್.ಎಸ್. ಆಸ್ಪತ್ರೆ ಹಿಂಭಾಗ, ಗಣಪತಿ ನಗರ. ಸಂಪರ್ಕಿಸಿರಿ:
ಜಿ. ಭಾಸ್ಕರ್ ರೆಡ್ಡಿ
94489 23785
95359 67499

**WANTED**
PUC, Any Degree with Basic computer Knowledge is Must and Tele caller, For Male & Female, Service Engineers - 4
SAMSUNG SERVICE CENTER
# 2137/1, 4th Main, 3rd cross MCC 'A' Block, Davanagere.
98865 15100

**WORK FROM HOME**
ಆಸಕ್ತಿಯುಳ್ಳವರಿಗೆ ಸದಾವಕಾಶ
74118 89988

**ಪ್ರವೇಶ ಪ್ರಕಟಣೆ**
SSLC, PUC, ITI - Pass/Fail
ಡಿಪ್ಲೋಮಾ ಇನ್ ಪೇಷಂಟ್ ಕೇರ್ ನರ್ಸಿಂಗ್ - 2 ವರ್ಷ
6 ತಿಂಗಳ ತರಬೇತಿ ನಂತರ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಶಿವಪಾರ್ವತಿ ಬಡಾವಣೆಯಲ್ಲಿ**
30x50 ಪೂರ್ವ, 30x40 ಪಶ್ಚಿಮ
ಮಹಾಲಕ್ಷ್ಮಿ ಬಡಾವಣೆಯಲ್ಲಿ
50x80 ಕಾರ್ನರ್
ರುದ್ರೇಶ್, ಏಜೆಂಟ್
87226 08529

**ಬೇಕಾಗಿದ್ದಾರೆ**
ಬೆಂಗಳೂರಿನ ಪ್ರತಿಷ್ಠಿತ ಕಂಪನಿಗೆ ದಾವಣಗೆರೆ ಜಿಲ್ಲೆಯಾದ್ಯಂತ ಮಹಿಳೆಯರು ಬೇಕಾಗಿದ್ದಾರೆ, ಬಂಡವಾಳವಿಲ್ಲದೆ ತಿಂಗಳಿಗೆ 10 ರಿಂದ 30 ಸಾವಿರದವರೆಗೆ ದುಡಿಯುವ ಅವಕಾಶ.
99867 53343

**Best Quality Car Covers & Bike Covers**
Available @ Affordable Price
Diamond Tarpalin Co
No.17 R.M.C Link Road
76763 88918
www.diamondtarpalin.com

**ನೀರಾವರಿ ಜಮೀನು ಮಾರಾಟಕ್ಕಿದೆ**
25 ಲಕ್ಷ ಎಕರೆಗೆ
ಶರ್ಮ:
94484 82561

**ಕೆಲಸಕ್ಕೆ ಬೇಕಾಗಿದ್ದಾರೆ**
ರೆಡಿ ಆಟೋಮೊಬೈಲ್ಸ್‌ಗೆ ಅನುಭವವುಳ್ಳ ಟ್ಯಾಲಿ ಆಪರೇಟರ್ಸ್ ಬೇಕಾಗಿದ್ದಾರೆ.
(FeMale only)
90352 20050

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಆಂಜನೇಯ ಬಡಾವಣೆ, 12ನೇ ಕ್ರಾಸ್‌ನಲ್ಲಿ 2 BHK ಮನೆ ಬಾಡಿಗೆಗೆ ಇದೆ. ಬೋರ್ ಮತ್ತು ನಲ್ಲಿ ನೀರಿನ ಸೌಲಭ್ಯವಿದೆ.
ಸಂಪರ್ಕಿಸಿರಿ:
94489 80090

**ಖಾಲಿ ಸೈಟ್ ಮಾರಾಟಕ್ಕಿದೆ**
ಹರಿಹರ ನಗರದ ಹರಪನಹಳ್ಳಿ. ರಸ್ತೆಯ ಇಂಡಸ್ಟ್ರಿಯಲ್ ಎಸ್ಟೇಟ್‌ನ ಎನ್.ಟಿ.ಭೂತೆ ಲೇಔಟ್ ನಲ್ಲಿರುವ ಉತ್ತರ ಮುಖವಾಗಿರುವ 40x75 ಅಳತೆವುಳ್ಳ ಸೈಟ್ ನಂಬರ್ 27 ಇರುವ ಖಾಲಿ ನಿವೇಶನ ಮಾರಾಟಕ್ಕಿದೆ.
ಆಸಕ್ತರು ಸಂಪರ್ಕಿಸಿರಿ :
99868 82386, 99019 92315

**ಬಾಡಿಗೆಗೆ/ಭೋಗ್ಯಕ್ಕೆ ಇದೆ**
ದಾವಣಗೆರೆಯಲ್ಲಿ ಬೆಂಗಳೂರು - ಮುಂಬಯಿ ರಸ್ತೆ 4 ಸರ್ಕ್ಯೂಟ್ ಹೌಸ್ ಹತ್ತಿರ ಪ್ರವಾಸಿ, ಲಾಜಿಸ್ಟಿಕ್ ಟ್ರಾನ್ಸ್ ಪೋರ್ಟ್, ಕೋರಿಯರ್ ಬುಕಿಂಗ್ ಆಫೀಸ್‌ಗೆ ಯೋಗ್ಯವಾದ ಸೋಲಾರ್ ಮತ್ತು ಪಾರ್ಕಿಂಗ್ ಕಾಂಪೌಂಡ್ ಸೌಲಭ್ಯದ ಎರಡು ಮಳಿಗೆಗಳು ಹೊಸಮನೆ ಇದೆ.
94800 00417 / 94801 11416

**ನಮ್ಮಲ್ಲಿ ಎಲ್ಲಾ ಕಂಪನಿಯ RO WATER Purifiers**
Sales and Service ಮತ್ತು ಎಲ್ಲಾ ಬಿಡಿ ಭಾಗಗಳು ಹೋಲ್‌ಸೇಲ್ ದರದಲ್ಲಿ ಲಭ್ಯವಿರುತ್ತವೆ.
BHUSHAN ENTERPRISES
99807 27767

**House For Rent**
1) Frist floor - 2 BHK
2) Second Floor - 2BHK
with attached Toilets at Banashenkari Badavane Near By Pass
99027 00345

**ಬೇಕಾಗಿದ್ದಾರೆ**
ಕಂಪ್ಯೂಟರ್ ಟ್ಯಾಲಿ ಆಗಿರುವವರು ಕೆಲಸಕ್ಕೆ ಬೇಕಾಗಿದ್ದಾರೆ.
ಕಿಸಾನ್ ವರ್ಲ್ಡ್
ಹದಡಿ ರೋಡ್, ದಾವಣಗೆರೆ.
94807 67064
99642 12379

**ಮನೆ /ಸೈಟ್ ಮಾರಾಟಕ್ಕಿದೆ**
ಸಿದ್ದವೀರಪ್ಪ ಬಡಾವಣೆಯಲ್ಲಿ 30X50 ಪೂರ್ವ ಸೈಟ್, ವಿನೋಬ ನಗರ 3ನೇ ಮೇನ್, 9ನೇ ಕ್ರಾಸ್‌ನಲ್ಲಿ, ಮನೆ ಜೊತೆಗೆ ಮಳಿಗೆ ಮಾರಾಟಕ್ಕಿದೆ.
ಅವಿನಾಶ್, ಏಜೆಂಟ್
96328 59468

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟ, ಪಪ್ಪಾಯಿ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ರಕ್ತಚಂದನ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ವಿಳಾಸ: ಸುಬ್ರಮಣ್ಯ ಅಗ್ರೋ ಟೆಕ್ ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
ಮೊ: 94484 39639
63665 96479

**House For Rent**
Ground floor 2BHK, East Facing
S.S. Layout 'B' Block
4th Main, 7th cross.
90084 18081

**ಬೇಕಾಗಿದ್ದಾರೆ**
ಪಾಂಪ್ಲೆಟ್ಸ್ ಹಂಚಲು ಯುವಕರು ಬೇಕಾಗಿದ್ದಾರೆ
ಸಂಪರ್ಕಿಸಿ :
86602 35013

**ತಕ್ಷಣ ಬೇಕಾಗಿದ್ದಾರೆ**
ಅಡುಗೆ ಭಟ್ಟರು -1- 8000/-
ಸಹಾಯಕರು -1- 5000/-
ಸಮಯ ಬೆಳಿಗ್ಗೆ 8 ರಿಂದ ಸಂಜೆ 5 ರವರೆಗೆ
ಸಂಪರ್ಕಿಸಿ :
97312 03956

**ಅಡಿಕೆ ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ 3 ವರ್ಷದ ಮತ್ತು 2 ವರ್ಷದ 2 ಕೆ.ಜಿ ಪ್ಯಾಕೆಟ್‌ನ ಅಡಿಕೆ ಸಸಿಗಳು ಹಾಗೂ ತೆಂಗಿನ ಸಸಿಗಳು ದೊರೆಯುತ್ತವೆ
ದೇವರಬೆಳಕೆರೆ ನಿಂಗರಾಜ್
96114 46331

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**FOR LEASE**
Fully Furnished 2 BHK flat in S.S.Layout, Ring road circle, Davnagere.
Contact
91645-46459

**ಸೈಟು ಮಾರಾಟಕ್ಕಿದೆ**
ಹಾರ್ಟ್ ಹಾಸ್ಪಿಟಲ್ ರೋಡ್, ಎಂ.ಸಿ.ಸಿ 'ಬಿ' ಬ್ಲಾಕ್, 47×60 ಅಡಿ (ಪೂರ್ವ)
ಮೋಹನ್ಸ್ ರಿಯಲ್ ಎಸ್ಟೇಟ್ ಏಜೆನ್ಸೀಸ್
ಮೊ.: 97424 34049

**ರೂಂ ಬಾಡಿಗೆಗೆ ಇದೆ**
ವಕ್ಕಲಿಗರ ಪೇಟೆ ಆನಂದ ಸಾಗರ್ ಹೋಟೆಲ್‌ನ ಮೇಲೆ 2ನೇ ಮಹಡಿಯಲ್ಲಿ ಎಲ್ಲಾ ವ್ಯವಸ್ಥೆಯುಳ್ಳ 7ರೂಂಗಳು ಬಾಡಿಗೆಗೆ ಇದೆ.
ಸಂಪರ್ಕಿಸಿ :-
94834 44683

**ಹುಡುಗರು ಬೇಕಾಗಿದ್ದಾರೆ**
10th or 12th Pass or Fail
ದುರ್ಗಾಶ್ರೀ ಟಿಂಬರ್ಸ್
ಆರ್.ಎಂ.ಸಿ ರೋಡ್ ದಾವಣಗೆರೆ
ಭೇಟಿಯ ಸಮಯ: ಬೆ.9 ರಿಂದ ಸಂಜೆ 6ರವರೆಗೆ
88844 45445
98442 10443

**WANTED NETWORKERS**
Highly result oriented health product formulated by allopathy Doctor with highest payout plan. Company approved by Ministry of Consumer Affairs (MCA).
Call :- 93414 24456
Time :- 10AM - 7PM

**ಜಾಗ ಮಾರಾಟಕ್ಕಿದೆ**
ದಾವಣಗೆರೆ ಮುದ್ದಳ್ಳಿ ತೋಟ, ಪೊಲೀಸ್ ಪೆರೇಡ್ ಗ್ರೌಂಡ್ ಎದುರು 6.4 ಗುಂಟೆ ಜಾಗ ಮಾರಾಟಕ್ಕಿದೆ. ಸಂಪರ್ಕಿಸಿ:
87109 64433

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಶ್ರೀ ಸಾಯಿಬಾಲಾಜಿ ಜ್ಯೋತಿಷ್ಯಾಲಯ**
ಪಂಡಿತ್ ಸಾಯಿನಾಥ್ ಕುಡ್ಲ
ಇವರು ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಹೇಳುತ್ತಾರೆ. ವಿದ್ಯೆ, ಉದ್ಯೋಗ, ಮಾಟ-ಮಂತ್ರ, ವಶೀಕರಣ, ಸಾಲಬಾಧೆ ಇನ್ನೂ ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ. ವಿಳಾಸ: ವಿದ್ಯಾನಗರ 1ನೇ ಬಸ್ ಸ್ಟಾಪ್ ಹತ್ತಿರ, ಕೆನರಾ ಬ್ಯಾಂಕ್ ಪಕ್ಕ, ದಾವಣಗೆರೆ.
ಮೊ: 95919 84627

**ಮಾಂತ್ರಿಕ ಮೋಡಿ ಬೆಟ್ಟಪ್ಪ ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
ಮೊ.: 8971699826

# ಹಾಯ್ ರಾಮ್!



ಬ್ರೋ ಏನಿದು!? ಮಾರ್ಚ್ ತಿಂಗಳಿನಿಂದ ನಮ್ಮ ಸುತ್ತ ಮುತ್ತ ಕೋವಿಡ್ ಸುರಿಮಳೆ ಈಗ ಎಲ್ಲೆಲ್ಲೂ ಮಳೆ.. ಮಳೆ... ಮಳೆ!

**ಹೌದು ಬ್ರದರ್, ಕೊರೊನಾವೃತ ಜೊತೆಗೆ ಜಲಾವೃತ. ಎಲ್ಲೆಲ್ಲೂ ನೀರು. ಈಗ ಗಣ್ಯರಲ್ಲೂ ಕೋವಿಡ್ ಜೋರು. ಮುಖ್ಯ ಮಂತ್ರಿ, ವಿರೋಧ ಪಕ್ಷದ ನಾಯಕ, ಹಾಲಿ ಮತ್ತು ಮಾಜಿ ಶಾಸಕ, ಪೋಲಿಸ್ ಅಧಿಕಾರಿಗಳು ಈಗ ಆರೋಗ್ಯ ಮಂತ್ರಿ ಕೂಡ ಯಾರನ್ನೂ ಬಿಡ್ತಾ ಇಲ್ಲ. ಈ ಟ್ವೆಂಟಿ ಟ್ವೆಂಟಿ ಮೇಲಿಂದ ಮೇಲೆ ತೊಂದರೆಗಳ ಸಿಕ್ಸರ್ ಸಿಡಿಸ್ತಾನೇ ಇದೆ.**

ಈ ಮಳೆ ಏನೋ ಹೊಡೆಯೋ ಅಷ್ಟು ಹೊಡೆದು ಆಮೇಲೆ ಕಡಿಮೆ ಆಗಬಹುದು. ಪ್ರವಾಹ ಸ್ವಲ್ಪ ದಿನಗಳಲ್ಲಿ ಸ್ಲೋ ಆಗಬಹುದು. ಆದರೆ, ಈ ಕೋವಿಡ್ ಫ್ಲೋ ಕಡಿಮೆ ಆಗೋದು ಡೌಟು. ಯಾವಾಗ ಆಗುತ್ತೋ ಇದು ಔಟು. ಆದಷ್ಟು ಬೇಗ ಕೋವಿಡ್ ಕೊನೇಗಾಣಿಸೋದಿಕ್ಕೆ ಒಂದು ರಾಮ ಬಾಣ ಕಂಡು ಹಿಡಿಯಲೇ ಬೇಕು.

**ರಾಮ ರಾಮಾ! ಶ್ರೀ ರಾಮನ ಜನ್ಮ ಸ್ಥಳಕ್ಕೇ ಕ್ಲೀಯರೆನ್ಸ್ ಸಿಗೋಕ್ಕೆ ಐದು ನೂರು ವರ್ಷ ಬೇಕಾಯ್ತು. ಇನ್ನೂ ಕೋವಿಡ್ ಕ್ಲಿಯರೆನ್ಸ್ ಸಿಗೋಕೆ ಎಷ್ಟು ವರ್ಷ ಬೇಕಾಗಬಹುದು?**

ನೋಡು ಬ್ರದರ್ ರಾಮ ಜನ್ಮ ಭೂಮಿ ವಿವಾದ ಮನುಷ್ಯರು ಸೃಷ್ಟಿ ಮಾಡಿಕೊಂಡಿದ್ದು. ಈ ಕೊರೊನಾ ಹಾವಳಿಯನ್ನು ತಡೆಯೋಕೆ ಭೂಮಿ ಮೇಲಿನ ಎಲ್ಲ ಮನುಷ್ಯರು ಪ್ರಯತ್ನ ಮಾಡ್ತಿದ್ದಾರೆ. ಇದು ಧರ್ಮದ ವಿಷಯ ಅಲ್ಲ ನಮಗೆ ಬಂದಿರೋ ಕರ್ಮದ ವಿಷಯ.

**ಅದು ನಿಜ. ಕೊರೊನಾ ನಿರ್ನಾಮ ಆಗಲಿ ಅಂತಾ ಎಲ್ಲಾ ಧರ್ಮದವರು ಅವರವರ ದೇವರುಗಳಿಗೆ ಪ್ರಾರ್ಥನೆ ಮಾಡಬೇಕು.**

ಎಲ್ಲರೂ ಪ್ರಾರ್ಥನೆ ಮಾಡಿದರೇ ಕೊರೊನಾ ನಿರ್ನಾಮ ಆಗುತ್ತೆ ಅಂತಿಯಾ?

**ಗುರೂ, ಕೇವಲ ಪ್ರಾರ್ಥನೆ ಮಾಡಿದರೆ ಆಗೋಲ್ಲ. ಪ್ರಯತ್ನದಿಂದ ಇದು ಆಗಬೇಕು.**



- ಆರ್.ಟಿ.

**ವಿಜ್ಞಾನಿಗಳು ಲಸಿಕೆ ಕಂಡು ಹಿಡಿಯುವ ಪ್ರಯತ್ನ .... ಅದು ಸಕ್ಸಸ್ ಆಗೋವರೆಗೂ ಕೋವಿಡ್ ಹರಡದಂತೆ ನಮ್ಮೆಲ್ಲರ ಪ್ರಯತ್ನ.. ಹೀಗೆ. ಇದೆಲ್ಲಾ ಯಶಸ್ವಿಯಾಗಲಿ ಅಂತಾ ನಾವೆಲ್ಲಾ ದೇವರಿಗೆ ಪ್ರಾರ್ಥನೆ ಮಾಡಬೇಕು.**

ಅಲ್ಲಾ ಬಾಸು, ದೇವರು ಅಂದರೆ ಸಿಕ್ಕಾ ಪಟ್ಟೆ ಅಸ್ತ್ರ ಇರುತ್ತೆ. ಜೊತೆಗೆ ಮಾಯಾವಿ, ಈ ಕೊರೊನಾಗೆ ದೇವರೇ ಯಾವುದಾದರೂ ಶಾಪ ಹಾಕಿ ನಿರ್ನಾಮ ಮಾಡಬಹುದಲ್ಲ.

**ನೋಡು ತಮ್ಮಾ, ಎಲ್ಲಾನೂ ದೇವರೇ ಮಾಡಿಬಿಟ್ಟರೆ ಮನುಷ್ಯ ಇನ್ನೂ ಸೋಮಾರಿ ಆಗಿ ಬಿಡ್ತಾನೆ. ಏನೇ ತೊಂದರೆ ಬಂದರೂ ತಾನು ಪ್ರಯತ್ನ ಮಾಡೋದು ಬಿಟ್ಟು ದೇವರೇ ಮಾಡಲಿ ಅಂತಾ ಓನ್ಲೀ ಪೂಜೆ, ಪ್ರಾರ್ಥನೆ ಮಾಡ್ತಾ ಕುಂತು ಬಿಡ್ತಾನೆ. ಅದಕ್ಕೆ ನಾವು ಪ್ರಯತ್ನ ಮಾಡೋಕೆ, ನಮ್ಮಲ್ಲಿ ವಿಶ್ವಾಸ, ಶಕ್ತಿ ತುಂಬೋಕೆ ದೇವರನ್ನು ಪಾರ್ಥಿಸಬೇಕು.**

ಸರಿ, ಕ್ರೈಸ್ತರು ಜೀಸಸ್ ಗೆ ಪ್ರೇ ಮಾಡ್ತಾರೆ. ಮುಸ್ಲೀಮರು ಅಲ್ಲಾಹುಗೆ ನಮಾಜ್ ಮಾಡ್ತಾರೆ. ಮತ್ತೆ ಹಿಂದೂಗಳು ಯಾರಿಗೆ?

**ಈಗ ರಾಮ ನಾಮ ಜಪ ಮಾಡಬೇಕು.**

ಹೇಗೆ?

**ನೋಡಪಾ, ಶ್ರೀ ರಾಮನಿಗೆ ಮೋಸ್ಟ್ ವ್ಯಾಲ್ಯುಯೇಬಲ್ ಭಕ್ತ ಅಂದರೇ ಮಹಾತ್ಮಗಾಂಧೀಜಿ. ಅವರು ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ರು. ಎಲ್ಲರೂ ಒಂದಾಗಿ ಬಾಳೋಣ ಎಂದು ಕರೆ ನೀಡಿ ಯೂನಿಟಿ ತರೋದಿಕ್ಕೆ ಪ್ರಯತ್ನ ಮಾಡಿದ್ರು. ಆದರೆ, ಜನ ಸೌಹಾರ್ದತೆಯಿಂದ ಇರದೇ ಗಲಭೆ ಎಬ್ಬಿಸಿದರು. ಕೊನೆಗೆ ಬಾಪೂಜಿ ಗುಂಡೇಟಿಗೆ ಬಲಿಯಾದರು. ಈ ಜನಕ್ಕೆ ಬುದ್ಧಿ ಕೊಡಪ್ಪಾ ಎಂದು ಪ್ರಾಣ ಬಿಟ್ಟ ಬಾಪು ಕೊನೆಗೆ ಉದ್ಗರಿಸಿದ್ದು 'ಹೇ ರಾಮ್'.**

ಹೌದು.

**ಈಗ ಅಯೋಧ್ಯೆಯಲ್ಲಿ ರಾಮನ ದೇವಸ್ಥಾನ ಹೊಸ ರೂಪ ಪಡಿತಾ ಇದೆ. ಶ್ರೀ ರಾಮನ ಹೊಸ ರೀತಿಯ ಎಂಟ್ರಿ ಆಗ್ತಾ ಇರೋದರಿಂದ ಕೋವಿಡ್ ಓಡಿಸಲು ನಾವು ಮಾಡರ್ನ್ ಆಗಿ ರಾಮನನ್ನು ಹೀಗೆ ಜಪಿಸಿದರೆ ಚೆನ್ನಾಗಿರುತ್ತೆ.**

ಏನಂತಾ?

**ಹಾಯ್ ರಾಮ್!**


# ಎಲೆಕ್ಟ್ರಾನಿಕ್ ಕೈಗಾರಿಕೆ : ಭೂಮಿಗೆ ಶೇ.25ರಷ್ಟು ಸಬ್ಸಿಡಿ

ಬೆಂಗಳೂರು, ಆ.19- ಕೊರೊನಾ ನಂತರ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ವಿನ್ಯಾಸ ಮತ್ತು ಉತ್ಪಾದನಾ (ಇಎಸ್‌ಡಿಎಂ) ಕ್ಷೇತ್ರಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಮಹತ್ವದ ಕ್ರಮಗಳನ್ನು ಕೈಗೊಂಡಿರುವ ರಾಜ್ಯ ಸರ್ಕಾರ, ಈ ಕ್ಷೇತ್ರದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಖರೀದಿಸಲಾಗುವ ಭೂಮಿಗೆ ಶೇ.25 ರಷ್ಟು ನೇರ ಸಬ್ಸಿಡಿ ನೀಡುವುದೂ ಸೇರಿದಂತೆ ಹಲವು ಪ್ರಮುಖ ನಿರ್ಧಾರಗಳನ್ನು ಕೈಗೊಂಡಿದೆ.

ಭಾರತೀಯ ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ ಸಂಘ (ಐಇಎಸ್‌ಎ) ಬುಧವಾರ ಹಮ್ಮಿಕೊಂಡಿದ್ದ ವಿಷನ್ ಶೃಂಗಸಭೆ- 2020 ಅನ್ನು ಉದ್ದೇಶಿಸಿ ಆನ್‌ಲೈನ್‌ನಲ್ಲಿ ಮುಖ್ಯ ಭಾಷಣ ಮಾಡಿದ ಎಲೆಕ್ಟ್ರಾನಿಕ್ಸ್, ಐಟಿ- ಬಿಟಿ ಸಚಿವರೂ ಆದ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ, ಇಡೀ ದೇಶದಲ್ಲಿ ಇಂಥ ಕ್ರಮ ಕೈಗೊಂಡಿರುವ ಏಕೈಕ ಹಾಗೂ ಮೊದಲ ರಾಜ್ಯ ಕರ್ನಾಟಕವಾಗಿದೆ. ಈ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆ ಹಾಗೂ ಹೆಚ್ಚೆಚ್ಚು ಉದ್ಯೋಗಾವಕಾಶ ಸೃಷ್ಟಿ ಮಾಡಲು ಇಂಥ ದಿಟ್ಟಹೆಜ್ಜೆ ಇಡಲಾಗಿದೆ ಎಂದರು.

ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಖರೀದಿಸುವ ಜಮೀನುಗಳಿಗೆ ಈ ರಿಯಾಯಿತಿ ಅನ್ವಯ ಆಗುವುದಿಲ್ಲ. ಉಳಿದ ಯಾವುದೇ ಜಿಲ್ಲೆಗಳಲ್ಲಿ 50 ಎಕರೆವರೆಗೆ ಭೂಮಿ ಖರೀದಿ ಮಾಡಿ ಕೈಗಾರಿಕೆ ಸ್ಥಾಪಿಸಿದರೂ ಈ ಸೌಲಭ್ಯ ದೊರೆಯಲಿದೆ. ಕೆಐಎಡಿಬಿ, ಕೆಎಸ್‌ಎಸ್‌ಐಡಿಸಿ ಯಿಂದ ಖರೀದಿಸಿದ ಭೂಮಿಯ ಮಾರ್ಗದರ್ಶಿ ದರ ಅಥವಾ ಭೂಮಿಯ ಖರೀದಿ ದರದ ಶೇ. 25ರಷ್ಟು ರಿಯಾಯಿತಿ ಸಿಗಲಿದೆ ಎಂದು ವಿವರಿಸಿದರು.

ಇದಲ್ಲದೆ, ಕೈಗಾರಿಕಾ ಘಟಕ ಸ್ಥಾಪನೆ ಮತ್ತು ಯಂತ್ರಗಳ ಖರೀದಿಗೆ ಹೂಡಿಕೆ ಮಾಡುವ ಒಟ್ಟು ಹಣದಲ್ಲಿ ಶೇ. 20ರಷ್ಟು ರಿಯಾಯಿತಿ ನೀಡುವುದಾಗಿಯೂ ಅವರು ಘೋಷಿಸಿದರು.



ಖರೀದಿ ಮಾಡಲಾದ ಭೂಮಿಯ ನೋಂದಣಿಗೆ ಖರ್ಚು ಮಾಡಿದ ಮುದ್ರಾಂಕ ಮತ್ತು ನೋಂದಣಿ ಶುಲ್ಕವನ್ನೂ ಸರ್ಕಾರವೇ ಪೂರ್ಣ ಮರುಪಾವತಿಸಲಿದೆ.

ಭೂ ಪರಿವರ್ತನೆಗೆ ಖರ್ಚು ಮಾಡಿದ ಶುಲ್ಕವನ್ನೂ ಮರುಪಾವತಿ ಮಾಡಲಾಗುವುದು. ಐದು ವರ್ಷಗಳ ಕಾಲ ಪ್ರತಿ ಯೂನಿ ಟ್‌ಗೆ ಒಂದು ರೂಪಾಯಿ ಸಬ್ಸಿಡಿ ನೀಡಲಾ ಗುವುದು. ಜತೆಗೆ ಬಳಕೆ ಮಾಡುವ ವಿದ್ಯುತ್ ಮೇಲಿನ ತೆರಿಗೆಯನ್ನು ಐದು ವರ್ಷಗಳವರೆಗೆ ಸಂಪೂರ್ಣ ರಿಯಾಯಿತಿ ಕೊಡಲಾಗುವುದು ಹಾಗೂ ಒಟ್ಟಾರೆ ವಹಿವಾಟಿನ ಮೇಲೆ ಶೇ.1 ರಷ್ಟು ರಿಯಾಯಿತಿ ನೀಡಲಾಗುವುದು ಎಂದು ಡಾ. ಅಶ್ವತ್ಥನಾರಾಯಣ ಹೇಳಿದರು.

ಹೀಗೆ ವಿನಾಯಿತಿಗಳನ್ನು ಉಪ ಮುಖ್ಯಮಂತ್ರಿ ಪ್ರಕಟಿಸುತ್ತಿದ್ದ ಹಾಗೆಯೇ ವೆಬಿನಾರ್‌ನಲ್ಲಿ ಭಾಗವಹಿಸಿದ್ದ ಉದ್ಯಮಿಗಳು ಸಂತಸ ವ್ಯಕ್ತಪಡಿಸಿದರು. ಕರ್ನಾಟಕದಲ್ಲಿ ಹೆಚ್ಚೆಚ್ಚು ಬಂಡವಾಳ ಹೂಡುವ ಭರವಸೆ ನೀಡಿದರು.

ಎಲೆಕ್ಟ್ರಾನಿಕ್ ಉತ್ಪನ್ನಗಳ ಉತ್ಪಾದನೆ ಮತ್ತು ವಿನ್ಯಾಸ, ಸೆಮಿಕಂಡಕ್ಟರ್‌ಗಳ ವಿನ್ಯಾಸ ಮತ್ತು ತಯಾರಿ, ಎಲೆಕ್ಟ್ರಾನಿಕ್ ಉತ್ಪಾದನಾ ಸೇವೆ, ಸೋಲಾರ್ ಸೆಲ್‌ಗಳ ಉತ್ಪಾದನೆ, ಎಲ್‌ಇಡಿಗಳ ತಯಾರಿ, ಜತೆಗೆ ರಾಷ್ಟ್ರೀಯ ಎಲೆಕ್ಟ್ರಾನಿಕ್ಸ್‌ನೀತಿಯಅಡಿಯಲ್ಲಿಯಾವುದೇ ಉತ್ಪನ್ನವನ್ನು ತಯಾರಿಸಿದರೆ ಅಥವಾ ವಿನ್ಯಾಸ ಮಾಡಿದರೆ ಮೇಲೆ ತಿಳಿಸಿದ ಎಲ್ಲ ಸೌಲಭ್ಯಗಳು ಸಿಗಲಿವೆ ಎಂದು ಉಪ ಮುಖ್ಯಮಂತ್ರಿ ಹೇಳಿದರು.

ಎಲೆಕ್ಟ್ರಾನಿಕ್ ಉತ್ಪನ್ನಗಳ ಉತ್ಪಾದನೆ ಮತ್ತು ವಿನ್ಯಾಸಕ್ಕೆ ಮೂರು ಜಿಲ್ಲೆಗಳಲ್ಲಿ ಕ್ಲಸ್ಟರ್‌ಗಳನ್ನು ಸ್ಥಾಪಿಸಲಾಗಿದೆ. ಅದರಲ್ಲಿ ಚಿಕ್ಕಬಳ್ಳಾಪುರದಲ್ಲಿ ಮೊಬೈಲ್ ಮತ್ತು ಎಲೆಕ್ಟ್ರಾನಿಕ್ಸ್, ಮೈಸೂರು ಜಿಲ್ಲೆಯಲ್ಲಿ ಪಿಸಿಬಿಎ ಮತ್ತು ಐಸಿಬಿ ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿ ಎಲ್‌ಇಡಿ ದೀಪಗಳನ್ನು ತಯಾರಿ ಮಾಡಲಾಗುತ್ತಿದೆ. ಪ್ರತಿ ಜಿಲ್ಲೆಯಲ್ಲೂ 10 ಸಾವಿರ ಉದ್ಯೋಗ ಸೃಷ್ಟಿ ಹಾಗೂ 725 ದಶಲಕ್ಷ ಡಾಲರ್‌ನಷ್ಟು ಬಂಡವಾಳ ಆಕರ್ಷಿಸಲಾಗುತ್ತಿದೆ. 20 ಸಾವಿರಕ್ಕೂ ಹೆಚ್ಚು ಯುವಕರಿಗೆ ಕೌಶಲ ತರಬೇತಿ ನೀಡಲಾಗಿದೆ ಎಂದು ಅವರು ಮಾಹಿತಿ ನೀಡಿದರು

ರಾಜ್ಯದಲ್ಲಿ ಡಿಜಿಟಲ್ ಆರ್ಥಿಕತೆಯನ್ನು ಉತ್ತೇಜಿಸಲು ಹಾಗೂ ಹೂಡಿಕೆಯನ್ನು ಆಕರ್ಷಿಸುವ ಉದ್ದೇಶದಿಂದ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಅನ್ನು ಸ್ಥಾಪನೆ ಮಾಡಲಾಗುತ್ತಿದೆ. ಈ ಕ್ಷೇತ್ರದಲ್ಲಿ ಹೊಸದಾಗಿ ಬರುವ ಕಂಪನಿಗಳಿಗೆ ಸೇವೆಯನ್ನು ಒದಗಿಸುವ ಹಾಗೂ ನೀತಿನಿರೂಪಣೆ ಮಾಡುವ ಕೆಲಸವನ್ನು ಈ ಸಂಸ್ಥೆ ಮಾಡಲಿದೆ ಎಂದು ಅವರು ತಿಳಿಸಿದರು.

# ವಕೀಲನ ಮೇಲೆ ಹಲ್ಲೆ : ಮೂವರಿಗೆ ಶಿಕ್ಷೆ

ದಾವಣಗೆರೆ, ಆ. 19 – ವಕೀಲರೊಬ್ಬರ ಮೇಲೆ ಹಲ್ಲೆ ಮಾಡಿದ ಆರೋಪದಲ್ಲಿ ಮೂವರಿಗೆ ಜಿಲ್ಲಾ ಪ್ರಧಾನ ಸತ್ರ ನ್ಯಾಯಾಲಯ 10 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಜಗಳೂರು ತಾಲ್ಲೂಕು ಜಮ್ಮಾಪುರದ ನಿಂಗಪ್ಪ, ಉಮೇಶ್ ಹಾಗೂ ರುದ್ರಮುನಿ ಶಿಕ್ಷೆಗೆ ಗುರಿಯಾದವರಾಗಿದ್ದಾರೆ. ಪ್ರಕರಣದ ವಿಚಾರಣೆ ನಡೆಸಿರುವ ನ್ಯಾಯಾಧೀಶರಾದ ಕೆ.ಬಿ. ಗೀತಾ ಅವರು ಜೈಲು ಶಿಕ್ಷೆಯ ಜೊತೆಗೆ ದೋಷಿಗಳಿಗೆ ತಲಾ 48 ಸಾವಿರ ರೂ.ಗಳ ದಂಡ ವಿಧಿಸಿದ್ದಾರೆ.

ಜಮ್ಮಾಪುರ ಗ್ರಾಮದ ಆಂಜನೇಯ ದೇವಸ್ಥಾನದ ವಿಚಾರದಲ್ಲಿ ಸಿವಿಲ್ ವ್ಯಾಜ್ಯ ಜಗಳೂರು ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇತ್ತು. ಈ ಪ್ರಕರಣದಲ್ಲಿ ಇದೇ ಗ್ರಾಮದ ವಕೀಲ ರಾಜ ರಮೇಶ್‌ಚಂದ್ರ ಭೂಪತಿ ಅವರು ಕಕ್ಷಿದಾರರೊಬ್ಬರ ಪರವಾಗಿ ಹಾಜರಿದ್ದರು. ಇದಕ್ಕೆ ಆಕ್ಷೇಪಿಸಿದ ಆರೋಪಿಗಳಾದ ನರಸಪ್ಪ, ನಿಂಗಪ್ಪ, ಉಮೇಶ್ ಹಾಗೂ ರುದ್ರಮುನಿ ಅವರು 12.02.2014ರಂದು ಕಣಗದಿಂದ ತಲೆಗೆ ಹೊಡೆದು ತೀವ್ರ ಸ್ವರೂಪವಾ ಗಾಯಗೊಳಿಸಿದ್ದರು ಎಂದು ಆರೋಪಿಸಲಾಗಿತ್ತು.

ಬಿಡಿಸಲು ಬಂದ ಪ್ರಹ್ಲಾದ, ನರಸಿಂಹಪ್ಪ ಎಂಬುವವರು ಹಾಗೂ ವಕೀಲರ ತಾಯಿ ಶಿವಲಿಂಗಮ್ಮ ಮೇಲೂ ಕಣಗ ಹಾಗೂ ಕಲ್ಲಿನಿಂದ ಗಾಯಗೊಳಿಸಿದ್ದರು. ಈ ಬಗ್ಗೆ ಗಾಯಗೊಂಡ ವಕೀಲ ಭೂಪತಿ ಜಗಳೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ನಾಲ್ವರ ವಿರುದ್ಧ ಪಿಎಸ್‌ಐ ಬಿ. ಮಲ್ಲಿಕಾರ್ಜುನ ಅವರು ತನಿಖೆ ಮಾಡಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ವಿಚಾರಣೆಯ ವೇಳೆ ಆರೋಪಿ ನರಸಪ್ಪ ಮೃತಪಟ್ಟಿದ್ದರು.

ಈ ಪ್ರಕರಣದಲ್ಲಿ ಸರ್ಕಾರಿ ಅಭಿಯೋಜಕರಾದ ಎಸ್.ವಿ. ಪಾಟೀಲ್ ಅವರು ವಾದ ಮಂಡಿಸಿದ್ದರು.

# ಸಂಗೊಳ್ಳಿ ರಾಯಣ್ಣ ಪುತ್ಥಳಿ ಮರುಸ್ಥಾಪಿಸಿ




ದಾವಣಗೆರೆ, ಆ.19- ಸ್ವಾತಂತ್ರ್ಯ ಹೋರಾಟಗಾರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪುತ್ಥಳಿಯನ್ನು ತೆರವುಗೊಳಿಸಿದ್ದ ಬೆಳಗಾವಿ ಜಿಲ್ಲಾಡಳಿತ ಹಾಗೂ ಹೆದ್ದಾರಿ ಪ್ರಾಧಿಕಾರದ ವಿರುದ್ಧ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ ಶೆಟ್ಟಿ ಬಣದ ಜಿಲ್ಲಾ ಘಟಕದಿಂದ ನಗರದಲ್ಲಿ ಇಂದು ಜಯದೇವ ವೃತ್ತದಲ್ಲಿ ಪ್ರತಿಭಟನೆ ಮಾಡಿ, ನಂತರ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ರಾಜ್ಯ ಸರ್ಕಾರ ಹಾಗೂ ಬೆಳಗಾವಿ ಜಿಲ್ಲಾಡಳಿತವು ಎಚ್ಚೆತ್ತುಕೊಂಡು, ಅದಷ್ಟು ಬೇಗನೇ ತೆರವುಗೊಳಿಸಿರುವ ಸ್ಥಳದಲ್ಲಿಯೇ ಪುತ್ಥಳಿಯನ್ನು ಮರು ಸ್ಥಾಪಿಸಲು ಆಗ್ರಹಿಸಲಾಯಿತು ಹಾಗೂ ಈ ಕಾರ್ಯ ವಿಳಂಬವಾದರೆ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡಲಾಗುವುದೆಂದು ಎಚ್ಚರಿಸಲಾಯಿತು.

ಈ ಪ್ರತಿಭಟನೆಯಲ್ಲಿ ವಸುಂಧರ, ನಾಗರಾಜ ಗೌಡ, ಶ್ರೇಯಸ್ ಎಸ್. ರಾಮಣ್ಣ ತೆಲಗಿ, ನಾಗರಾಜ ಆದಾಪುರ, ಗಿರೀಶ್, ರವಿನಾಯ್ಕ, ಶಿವಕುಮಾರ್, ಸೈಯದ್ ನಜೀರ್, ಸಂತೋಷ್ ಕುಮಾರ್ ಅಂಗಡಿ, ದಯಾನಂದ್ ಬಿ.ಜಿ., ವಿನಾಯಕ್, ಶಿವಣ್ಣ, ನಿಂಗರಾಜು, ಅಮರ್ ಮತ್ತಿತರರು ಹಾಜರಿದ್ದರು.

# ನ್ಯಾಮತಿಯ ರಾಂಪುರ ಹಾಲಸ್ವಾಮೀಜಿ ಮಠದಲ್ಲಿ ಶ್ರಾವಣ ಮಾಸದ ಪೂಜೆ

ನ್ಯಾಮತಿ, ಆ.19- ಶ್ರಾವಣ ಮಾಸದಲ್ಲಿ ಲೋಕ ಕಲ್ಯಾಣಾರ್ಥವಾಗಿ ರಾಂಪುರ ಶ್ರೀ ಹಾಲಸ್ವಾಮೀಜಿ ಮಠ, ಗುಂಡೇರಿ, ಬಸವಾಪಟ್ಟಣ ಗವಿಮಠದಲ್ಲಿ ಒಂದು ತಿಂಗಳ ಪರ್ಯಂತ ಹಮ್ಮಿಕೊಂಡಿದ್ದ ಶ್ರಾವಣ ಮಾಸದ ಪೂಜಾ ಅನುಷ್ಠಾನವನ್ನು ಶ್ರೀ ಸದ್ಗುರು ಶಿವಯೋಗಿ ಹಾಲಸ್ವಾಮೀಜಿ ಸಂಸ್ಥಾನದ ಮಠಾಧೀಶ ಸದ್ಗುರು ಶ್ರೀ ಶಿವಯೋಗಿ ಶಿವಕುಮಾರ ಹಾಲಸ್ವಾಮೀಜಿ ಸಂಪನ್ನಗೊಳಿಸಿದರು.

ಕಳೆದ ತಿಂಗಳ 15 ರಂದು ಶ್ರೀ ಸದ್ಗುರು ಶಿವಯೋಗಿ ಹಾಲಸ್ವಾಮೀಜಿ ಸಂಸ್ಥಾನದ ಮಠಾಧೀಶರಾಗಿದ್ದ ಶ್ರೀ ವಿಶ್ವೇಶ್ವರ ಶಿವಾಚಾರ್ಯ ಹಾಲಸ್ವಾಮೀಜಿ ಕೋವಿಡ್‌ನಿಂದ ಲಿಂಗೈಕ್ಯರಾಗಿದ್ದರು. ಅದರೂ ಶ್ರೀ ಮಠಗಳಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ಶ್ರೀಮಠದ ಉಸ್ತುವಾರಿ ವಹಿಸಿದ್ದ ಶ್ರೀ ಸದ್ಗುರು ಶಿವಯೋಗಿ ಹಾಲಸ್ವಾಮೀಜಿ ಸಂಸ್ಥಾನದ ಮಠಾಧೀಶ ಸದ್ಗುರು ಶಿವಯೋಗಿ ಶಿವಕುಮಾರ ಹಾಲಸ್ವಾಮೀಜಿ ನಡೆಸುತ್ತಾ ಬಂದಿದ್ದರು.


ನಾಡಿನಲ್ಲಿ ಶ್ರಾವಣ ಮಾಸವು ತನ್ನದೇ ಆದ ವಿಶೇಷ ಪರಂಪರೆ ಮತ್ತು ವೈಶಿಷ್ಟ್ಯವನ್ನು ಹೊಂದಿದೆ. ಹಬ್ಬಗಳ ನಾಡಾದ ಇಲ್ಲಿ ಈ ತಿಂಗಳಿನಿಂದ ಹಬ್ಬಗಳು ಪ್ರಾರಂಭವಾಗುತ್ತವೆ. ಶ್ರಾವಣದಲ್ಲಿ ಉತ್ತಮವಾದ



ಆಧ್ಯಾತ್ಮಿಕ ವಿಚಾರಗಳನ್ನು ಶ್ರವಣ ಮಾಡುವುದರಿಂದ ಜೀವನದಲ್ಲಿ ಶಾಂತಿ - ನೆಮ್ಮದಿ ಸಿಗುತ್ತದೆ ಎಂದು ಶ್ರೀ ಶಿವಯೋಗಿ ಶಿವಕುಮಾರ ಹಾಲಸ್ವಾಮೀಜಿ ಹೇಳಿದರು.

ಜಗತ್ತು ಇಂದು ಕೊರೊನಾದಿಂದ ನಲುಗಿದ್ದು, ಇತ್ತೀಚಿಗೆ ಕರ್ನಾಟಕದಲ್ಲಿ ನೆರೆ ಹಾವಳಿ, ಕೋವಿಡ್‌ನಿಂದ ಸೇರಿದಂತೆ ಹಲವಾರು ವೈಪರೀತ್ಯಗಳು ಆಗುತ್ತಿವೆ. ಈ ಎಲ್ಲಾ ಸಮಸ್ಯೆಗಳಿಂದ ಜಗತ್ತು ಮುಕ್ತವಾಗಿ, ಶಾಂತಿ ನೆಮ್ಮದಿ ದೊರೆಯುವಂತೆ ಮಾಡುವ ಸಂಕಲ್ಪದಿಂದ ಪೂಜಾ ಕಾರ್ಯವನ್ನು ಕೈಗೊಳ್ಳಲಾಯಿತು ಎಂದು ಹಾಲಸ್ವಾಮೀಜಿ ಹೇಳಿದರು.

# ಹೊನ್ನಾಳಿ : ಎಲ್‌ಐಸಿ ಶಾಖೆಯಲ್ಲಿ ಸಾಂಕೇತಿಕ ಧರಣಿ




ಹೊನ್ನಾಳಿ, ಆ.19- ಭಾರತೀಯ ಜೀವ ವಿಮಾ ನಿಗಮದ ಎಐಐಇಎ ಸಂಘಟನೆಯು ಕಲ್ಲಿದ್ದಲು ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ನಡೆಸಿರುವುದಕ್ಕೆ ಬೆಂಬಲ ವ್ಯಕ್ತಪಡಿಸಿ ನಿಗಮದ ಎದುರು ಸಾಂಕೇತಿಕ ಧರಣಿ ನಡೆಸಿದರು. ಸಂಘಟನೆಯು ಐಪಿಓ ವಿರುದ್ಧ ಘೋಷಣೆ ಕೂಗಿದರು. ಸಂಘದ ಅಧ್ಯಕ್ಷ ಉಮೇಶ ಮಾಕಾಳ್, ಕಾರ್ಯದರ್ಶಿ ರಾಘವೇಂದ್ರ, ಶಿವಕುಮಾರ ಸೇರಿದಂತೆ ಮಹಿಳಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಕುಂಬಳೂರು ಎಕ್ಕೆಗೊಂದಿ ಶಾಲೆಗಳಿಗೆ ಸ್ಯಾನಿಟೈಸ್, ಥರ್ಮಲ್ ಕೊಡುಗೆ



ಮಲೇಬೆನ್ನೂರು, ಆ. 19- ಹೆಲ್ಪಿಂಗ್ ಹ್ಯಾಂಡ್ಸ್ ಚಾರಿಟೇಬಲ್ ಟ್ರಸ್ಟ್ ಬೆಂಗಳೂರು ಇವರ ವತಿಯಿಂದ ಟ್ರಸ್ಟ್ ಅಧ್ಯಕ್ಷರಾದ ಮೂರ್ತಿ, ಕಾರ್ಯದರ್ಶಿ ಮಂಜುನಾಥ್, ಸದಸ್ಯರಾದ ರವಿಕುಮಾರ್ ಅವರು ಎಕ್ಕೆಗೊಂದಿ ಮತ್ತು ಕುಂಬಳೂರು ಗ್ರಾಮಗಳ ಸರ್ಕಾರಿ ಶಾಲೆಗಳಿಗೆ ಸ್ಯಾನಿಟೈಸ್ ಹಾಗೂ ಥರ್ಮಲ್ ಸ್ಕ್ರೀನಿಂಗ್ ಮತ್ತು ಸ್ಪೀಕರ್ ಗಳನ್ನು ಉಚಿತವಾಗಿ ವಿತರಿಸಿದರು. ಈ ಸಂದರ್ಭದಲ್ಲಿ ಕುಂಬಳೂರು ಶಾಲೆ ಎಸ್ ಡಿ ಎಂ ಸಿ ಅಧ್ಯಕ್ಷ ಎಂ. ಎಚ್. ಶರಣ್, ಧೂಳೆಹೊಳೆ ಶಾಲೆಯ ಶಿಕ್ಷಕ ಶರಣ್ ಕುಮಾರ್ ಹೆಗಡೆ ಈ ವೇಳೆ ಹಾಜರಿದ್ದರು,

# ಕೋವಿಡ್ ಆಸ್ಪತ್ರೆ ರೋಗಿಗಳ ಮನರಂಜನೆಗಾಗಿ ಒಳಾಂಗಣ ಆಟದ ಸಾಮಗ್ರಿಗಳ ಹಸ್ತಾಂತರ

ರಾಣೇಬೆನ್ನೂರು, ಆ.19 - ನಗರದ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿಯಲ್ಲಿ ಬುಧವಾರ ಸ್ಥಳೀಯ ರೋಟರಿ ಕ್ಲಬ್ ವತಿಯಿಂದ ನಗರದ ಕೋವಿಡ್ ಆಸ್ಪತ್ರೆಯ ರೋಗಿಗಳು ಸಮಯ ಕಳೆಯುವ ಸಲುವಾಗಿ ಒಳಾಂಗಣ ಆಟದ ಸಾಮಗ್ರಿಗಳನ್ನು ನೀಡಲಾಯಿತು.

ಈ ಸಮಯದಲ್ಲಿ ರೋಟರಿ ಕ್ಲಬ್ ಅಧ್ಯಕ್ಷ ಜಗದೀಶ್ ಕಲ್ಯಾಣಿ ಮಾತನಾಡಿ, ಕೋವಿಡ್ ಸೋಂಕಿತರ ಬಗ್ಗೆ ಅಸ್ಪೃಶ್ಯ ಭಾವನೆ ಹೊಂದದೆ ಅವರನ್ನು ಗೌರವದಿಂದ ಕಾಣಬೇಕು. ಚಿಕಿತ್ಸಾ ಸಮಯದಲ್ಲಿ ಕೋವಿಡ್ ರೋಗಿಗಳಿಗೆ ಮನರಂಜನೆ ಒದಗಿಸಿ ಆತ್ಮಸ್ಥೈರ್ಯ ತುಂಬುವಂತೆ ಮಾಡುವುದು ತಮ್ಮ ಸಂಸ್ಥೆಯ ಉದ್ದೇಶವಾಗಿದೆ. ಆದ್ದರಿಂದ ಒಳಾಂಗಣ ಆಟದ ಸಾಮಗ್ರಿಗಳನ್ನು ಕೋವಿಡ್ ಸೋಂಕಿತರ ಅನುಕೂಲಕ್ಕೆ




ನೀಡಲಾಗಿದೆ ಎಂದರು. ಆಟದ ಪರಿಕರಗಳನ್ನು ಟಿಎಚ್‌ಓ ಡಾ.ಸಂತೋಷಕುಮಾರ ಅವರಿಗೆ ಹಸ್ತಾಂತರಿಸಲಾಯಿತು. ಡಾ.ಬಿ.ಎಸ್. ಕೇಲಗಾರ, ವೀರೇಶ ಹನಗೋಡಿಮಠ, ಜಿ.ಜಿ. ಹೊಟ್ಟಿಗೌಡ್ರ, ವೀರೇಶ ಮೋಟಗಿ, ಸುಧೀರ ಕುರವತ್ತಿ ಸೇರಿದಂತೆ ಮತ್ತಿತರು ಇದ್ದರು.

## ವಿರಕ್ತ ಮಠದ ಜಯದೇವ ಶ್ರೀಗಳ ನಿಧನಕ್ಕೆ ಸಂಸದ ಜಿ.ಎಂ. ಸಿದ್ದೇಶ್ವರ ಸಂತಾಪ

ದಾವಣಗೆರೆ, ಆ.19- ಚನ್ನಗಿರಿಯ ಶ್ರೀ ಹಾಲಸ್ವಾಮಿ ವಿರಕ್ತಮಠದ ಶ್ರೀ ಜಯದೇವ ಮಹಾಸ್ವಾಮೀಜಿ ಲಿಂಗೈಕ್ಯರಾಗಿದ್ದು, ಪೂಜ್ಯರ ಅಗಲಿಕೆ ಜಿಲ್ಲೆಗೆ ಮತ್ತು ಅಪಾರ ಭಕ್ತರಿಗೆ ತುಂಬಲಾರದ ನಷ್ಟ. ಜಿಲ್ಲೆಯಲ್ಲಿ ಅಪಾರ ಭಕ್ತರನ್ನು ಹೊಂದಿದ್ದ ಶ್ರೀಗಳ ಅಗಲಿಕೆ ಅಪಾರ ನೋವನ್ನುಂಟು ಮಾಡಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಶೋಕ ವ್ಯಕ್ತಪಡಿಸಿದ್ದಾರೆ.

## ಶ್ರೀ ಲಿಂಗೇಶ್ವರ ರಥೋತ್ಸವ ರದ್ದು



ದಿನಾಂಕ 20.08.2020ರ ಗುರುವಾರ ನಡೆಯಬೇಕಿದ್ದ ರಥೋತ್ಸವ ಮತ್ತು ಅನ್ನ ಸಂತರ್ಪಣೆಯನ್ನು ಕೊರೊನಾ ವೈರಸ್ ಹಿನ್ನಲೆಯಲ್ಲಿ ಜಿಲ್ಲಾಡಳಿತದ ಆದೇಶದ ಮೇರೆಗೆ ರದ್ದುಪಡಿಸಲಾಗಿದೆ. ದೇವಸ್ಥಾನದಲ್ಲಿ ದೇವರ ದರ್ಶನ ಎಂದಿನಂತೆ ಇರುತ್ತದೆ.

**ಶ್ರೀ ಲಿಂಗೇಶ್ವರ ದೇವಸ್ಥಾನ ಸಂಘ ದಾವಣಗೆರೆ.**

# ಚಿಕ್ಕಬೂದಿಹಾಳ್‌ನಲ್ಲಿ ಅಂಚೆ ಕಚೇರಿ ಆರಂಭ



ದಾವಣಗೆರೆ, ಆ. 19 - ಗ್ರಾಮದ ಪ್ರತಿಯೊಬ್ಬರು ಉಳಿತಾಯ ಖಾತೆ ಹಾಗೂ ಗ್ರಾಮೀಣ ಅಂಚೆ ಜೀವ ವಿಮೆಯನ್ನು ಮಾಡಿಸಲು ಮುಂದಾಗಬೇಕು ಎಂದು ಚಿತ್ರದುರ್ಗ ಅಂಚೆ ವಿಭಾಗದ ಅಂಚೆ ಅಧೀಕ್ಷಕ ವಿರೂಪಾಕ್ಷಪ್ಪ ಹೇಳಿದರು.

ಮಂಗಳವಾರ ಚಿಕ್ಕಬೂದಿಹಾಳ್ ಗ್ರಾಮದಲ್ಲಿ ನೂತನ ಶಾಖಾ ಅಂಚೆ ಕಚೇರಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರು ಇಲಾಖೆಯ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಹಾಯಕ ಅಂಚೆ ಅಧೀಕ್ಷಕ ಜೆ.ಎಸ್. ಗುರುಪ್ರಸಾದ ಪ್ರಾಸ್ತಾವಿಕವಾಗಿ ಮಾತನಾಡಿ, ಅಂಚೆ ಕಚೇರಿಯ ಸೌಲಭ್ಯಗಳ ಕುರಿತು ವಿವರಿಸಿದರು. ಜೊತೆಗೆ ಅಂಚೆ ಕಚೇರಿಯನ್ನು ಉಳಿಸಿಕೊಳ್ಳುವ ಬಗ್ಗೆ ಗ್ರಾಮಸ್ಥರ ಪಾತ್ರವನ್ನು ಮನವರಿಕೆ ಮಾಡಿಕೊಟ್ಟರು.

ತಾಲ್ಲೂಕು ಪಂಚಾಯತ್ ಉಪಾಧ್ಯಕ್ಷ ಸಂಗನಗೌಡ ಹಾಗೂ ಗ್ರಾಮ ಪಂಚಾಯತ್ ಉಪಾಧ್ಯಕ್ಷ ಭಗತ್‌ಸಿಂಹ ಮಾತನಾಡಿದರು.

ಮಾರುಕಟ್ಟೆ ಅಧಿಕಾರಿ ಮಹೇಶ್ ಕಾರ್ಯಕ್ರಮ ನಿರೂಪಿಸಿದರು.

**ಹೃತ್ಪೂರ್ವಕ ಕೃತಜ್ಞತೆಗಳು**

ನನ್ನನ್ನು ದಾವಣಗೆರೆ ತಾಲ್ಲೂಕು ಪಂಚಾಯಿತಿ ಉಪಾಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆಮಾಡಲು ಸಹಕರಿಸಿದ
ಮಾಜಿ ಸಚಿವರೂ, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಹಾಲಿ ಶಾಸಕರಾದ **ಶ್ರೀ ಎಸ್.ಎ. ರವೀಂದ್ರನಾಥ್** ಅವರಿಗೂ,
ದಾವಣಗೆರೆ ಲೋಕಸಭಾ ಕ್ಷೇತ್ರದ ಸದಸ್ಯರಾದ **ಶ್ರೀ ಜಿ.ಎಂ. ಸಿದ್ದೇಶ್ವರ** ಅವರಿಗೂ,
ಮಾಯಕೊಂಡ ಕ್ಷೇತ್ರದ ಶಾಸಕರಾದ **ಪ್ರೊ|| ಎನ್. ಲಿಂಗಣ್ಣ** ಅವರಿಗೂ,
ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷರಾದ **ಶ್ರೀ ಯಶವಂತರಾವ್ ಜಾಧವ್** ಅವರಿಗೂ,
ಬಿಜೆಪಿ ಜಿಲ್ಲಾಧ್ಯಕ್ಷರಾದ **ಶ್ರೀ ವೀರೇಶ್ ಹನಗವಾಡಿ** ಅವರಿಗೂ,
**ದಾವಣಗೆರೆ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಮತ್ತು ಎಲ್ಲಾ ಸದಸ್ಯರುಗಳಿಗೂ,** ತುರ್ಚಘಟ್ಟ
ಕ್ಷೇತ್ರದ ಎಲ್ಲಾ ಗ್ರಾಮಸ್ಥರುಗಳಿಗೂ, ಬಿಜೆಪಿ ಮುಖಂಡರೂಗಳಿಗೂ,
ಕಾರ್ಯಕರ್ತರುಗಳಿಗೂ, ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದವರೆಲ್ಲರಿಗೂ
**ಹೃತ್ಪೂರ್ವಕ ಕೃತಜ್ಞತೆಗಳು.**

**ಶ್ರೀಮತಿ ಎಂ. ಮೀನಾ ಶ್ರೀನಿವಾಸ್**
ತುರ್ಚಘಟ್ಟ
ತಾಲ್ಲೂಕು ಪಂಚಾಯಿತಿ ಉಪಾಧ್ಯಕ್ಷರು, ದಾವಣಗೆರೆ.

**ಎಸ್.ಟಿ. ಶ್ರೀನಿವಾಸ್,**
ಬಿಜೆಪಿ ಮುಖಂಡರು, ತುರ್ಚಘಟ್ಟ

**Vijay para Medical College**
ವಿಜಯ್ ಪ್ಯಾರಾ ಮೆಡಿಕಲ್ ಕಾಲೇಜು
Davangere
ಪ್ರವೇಶ ಪ್ರಕಟಣೆ-2020-21

| Courses | Duration | Qualification |
|---|---|---|
| DMLT-[Lab Technician] | 3 Years | SSLC Pass |
| DHT-[Health Inspector] | 3 Years | SSLC Pass |
| DMIT-[X-ray Technician] | 3 Years | SSLC Pass |
| D.O.T-[Operation Theatre] | 3 Years | SSLC Pass |

SC. ST.ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸೌಲಭ್ಯ
ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ
ಪ್ರವೇಶಕ್ಕಾಗಿ ಸಂಪರ್ಕಿಸಿ
ಗೋಲ್ಡನ್ ಪಬ್ಲಿಕ್ ಸ್ಕೂಲ್ ಹತ್ತಿರ, D.C.M.ಟೌನ್‌ಶಿಪ್ ದಾವಣಗೆರೆ Mob:7760155550

**ಧರ್ಮಪ್ರವರ್ತ ರಾಜನಹಳ್ಳಿ ಹನುಮಂತಪ್ಪನವರ ಧರ್ಮಶಾಲಾ ಅಸೋಸಿಯೇಷನ್**
ಪೂನಾ-ಬೆಂಗಳೂರು ರಸ್ತೆ, ದಾವಣಗೆರೆ-577 002.

**ಮಳಿಗೆಗಳು ಬಾಡಿಗೆಗೆ**
ಹದಡಿ ರಸ್ತೆಯ ನಮ್ಮ ಧರ್ಮಶಾಲೆಯ ಆವರಣದಲ್ಲಿ ಹೊಸದಾಗಿ ನಿರ್ಮಿಸಿರುವ ಮಳಿಗೆಗಳಲ್ಲಿ 4 (ನಾಲ್ಕು) ಮಳಿಗೆಗಳು (ಮಳಿಗೆ ನಂ. 9,10,14 ಮತ್ತು 15) ಬಾಡಿಗೆಗೆ ದೊರೆಯುತ್ತದೆ. ಆಸಕ್ತರು ಧರ್ಮಶಾಲೆಯ "ಹನುಮಂತಪ್ಪನವರ ಕಟ್ಟಡ" ದಲ್ಲಿರುವ ಆಡಳಿತ ಕಚೇರಿಯನ್ನು ಸಂಪರ್ಕಿಸಿ ರೂ. 100/-ಶುಲ್ಕ ಸಲ್ಲಿಸಿ ಟೆಂಡರ್ ಫಾರ್ಮ್ ಪಡೆದು ಭರ್ತಿ ಮಾಡಿದ ಫಾರ್ಮ್‌ಗಳನ್ನು ದಿ. : 31.08.2020 ರೊಳಗಾಗಿ ಕಚೇರಿಗೆ ತಲುಪಿಸಬೇಕು.
**ಫೋ.: (08192) 258834/258836**

# ಸೋಂಕು ತಗುಲಿದ ವೇಳೆ ಪೊಲೀಸ್ ಸಿಬ್ಬಂದಿ ಧೃತಿಗೆಡದಿರಿ

ಹರಿಹರ, ಆ.19 - ಕೋವಿಡ್ 19 ಸೋಂಕು ತಗುಲಿದ ಸಂದರ್ಭದಲ್ಲಿ ಸಿಬ್ಬಂದಿಗಳು ಧೃತಿಗೆಡಬೇಡಿ ಧೈರ್ಯವಾಗಿರಿ, ಇಲಾಖೆಯು ಸದಾ ನಿಮ್ಮೊಂದಿಗಿರುತ್ತದೆ ಎಂದು ದಾವಣಗೆರೆ ಜಿಲ್ಲಾ ಗ್ರಾಮಾಂತರ ಡಿವೈಎಸ್ಪಿ ನರಸಿಂಹ ತಾಮ್ರಧ್ವಜ ಭರವಸೆ ನೀಡಿದರು.

ನಗರ ಪೋಲಿಸ್ ಠಾಣಾ ಆವರಣದಲ್ಲಿ ಕೋವಿಡ್ 19 ಪಾಸಿಟಿವ್ ಬಂದಿದ್ದ ಗುತ್ತೂರು ಗ್ರಾಮಾಂತರ ಠಾಣೆಯ ಪಿಎಸ್ಐ ಇಬ್ಬರು ಪೊಲೀಸ್ ಸಿಬ್ಬಂದಿಗಳು ಹೋಂ ಕ್ವಾರಂಟೈನ್ ಅವಧಿ ಪೂರೈಸಿ ಸಂಪೂರ್ಣ ಗುಣಮುಖರಾಗಿ ಆಗಮಿಸಿದಾಗ ಅವರಿಗೆ ಇಲಾಖೆಯ ವತಿಯಿಂದ ಪುಷ್ಪವೃಷ್ಟಿ ಗೈದು ಅವರನ್ನು ಸ್ವಾಗತಿಸಿದ ಸಂದರ್ಭದಲ್ಲಿ ಅವರು ಮಾತನಾಡಿದರು.

ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಅನೇಕರು ಹಗಲಿರುಳೆನ್ನದೆ ತಮ್ಮ ಜೀವದ ಹಂಗು ಮತ್ತು ಕುಟುಂಬವನ್ನು ತೊರೆದು ಕೊರೊನಾ ವಿರುದ್ಧ ಸೇವೆ ಮಾಡುತ್ತಿದ್ದಾರೆ ಇಂತಹ ಸೇವೆಯನ್ನು ಇಲಾಖೆಯು ಎಂದೆಂದಿಗೂ ಸ್ಮರಿಸುತ್ತದೆ. ಈ ಸಂದರ್ಭದಲ್ಲಿ ಸಿಬ್ಬಂದಿಗೆ ಪಾಸಿಟಿವ್ ಅಥವಾ ಯಾವುದೇ ರೀತಿಯ ತೊಂದರೆಗಳಾದಾಗ ಇಲಾಖೆಯು ಅವರೊಂದಿಗೆ ಸದಾ ಸ್ಪಂದನೆಯಲ್ಲಿರುತ್ತದೆ ಎಂದು ಹೇಳಿದರು.



## ಇಲಾಖೆ ಸದಾ ನಿಮ್ಮೊಂದಿಗಿರುತ್ತದೆ : ಡಿವೈಎಸ್ಪಿ ನರಸಿಂಹ ತಾಮ್ರಧ್ವಜ

ಈ ವೇಳೆ ಸೋಂಕಿನಿಂದ ಯಶಸ್ವಿಯಾಗಿ ಹೊರ ಬಂದ ಗ್ರಾಮಾಂತರ ಪಿಎಸ್ಐ ರವಿಕುಮಾರ್ ಮಾತನಾಡಿ, ನನಗೆ ಕೊರೊನಾ ಪಾಸಿಟಿವ್ ಇದೆ ಎಂಬ ವರದಿ ತಿಳಿದಾಗ ತುಂಬಾ ಹೆದರಿ ಕೊಂಡಿದ್ದೇನು, ಆದರೆ ಆ ಸಂದರ್ಭದಲ್ಲಿ ನಮ್ಮ ಇಲಾಖೆಯ ಎಲ್ಲಾ ಮೇಲಾಧಿಕಾರಿಗಳು ನನಗೆ ದೂರವಾಣಿ ಕರೆ ಮಾಡಿ ನೀವು ಯಾವುದೇ ಕಾರಣಕ್ಕೂ ಹೆದರಬೇಕಾಗಿಲ್ಲ, ನಿಮ್ಮೊಂದಿಗೆ ಯಾವಾಗಲೂ ಇಲಾಖೆ ಮತ್ತು ನಾವುಗಳೆಲ್ಲರೂ ಇದ್ದೇವೆ. ಧೈರ್ಯವಾಗಿ ಚಿಕಿತ್ಸೆಯನ್ನು ಪಡೆಯಿರಿ ಎಂದು ನನಗೆ ಧೈರ್ಯ ತುಂಬಿದ್ದರು ಎಂದು ಭಾವುಕರಾಗಿ ಹೇಳಿದರು.

ಕೊರೊನಾ ವೈರಸ್ ಬಗ್ಗೆ ಮಾತನಾಡಿದ ಅವರು, ಇದೇನೂ ಅಂತಹ ದೊಡ್ಡ ಕಾಯಿಲೆಯೇನಲ್ಲ. ಇದಕ್ಕೆ ಹೆದರುವ ಕಾರಣವೂ ಇಲ್ಲ, ಇದೊಂದು ಸಾಮಾನ್ಯ ಕಾಯಿಲೆಯಾಗಿದೆ, ಎಲ್ಲರಿಗೂ ಮಳೆಗಾಲದಲ್ಲಿ ಬರುವ ಶೀತ - ಕೆಮ್ಮು - ನೆಗಡಿಯ ಮಾದರಿಯ ಕಾಯಿಲೆಯಾಗಿದೆ. ಯಾರೂ ಇದಕ್ಕೆ ಅಂಜಬೇಕಾಗಿಲ್ಲ. ಸರಿಯಾದ ಸಮಯಕ್ಕೆ ಚಿಕಿತ್ಸೆ ಪಡೆದರೆ ಗುಣರಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.

ಗ್ರಾಮಾಂತರ ಪಿಎಸ್ಐ ಡಿ. ರವಿ ಕುಮಾರ್, ಗ್ರಾಮಾಂತರ ಎಎಸ್ಐ ರಮೇಶ್, ಮಲೆಬೆನ್ನೂರಿನ ಹೆಡ್ ಕಾನ್ಸ್‌ಟೆಬಲ್ ಬೀರಪ್ಪ ಈ ಮೂವರನ್ನು ಪುಷ್ಪವೃಷ್ಟಿ ಗೈದು ಸ್ವಾಗತಿಸಲಾಯಿತು. ಈ ಸಮಯದಲ್ಲಿ ಸಿಪಿಐ ಎಂ. ಶಿವಪ್ರಸಾದ್ ಮಠದ್, ನಗರಠಾಣೆ ಪಿಎಸ್ಐ ಎಸ್. ಶೈಲಶ್ರೀ, ಕ್ರೈಂ ಬ್ರಾಂಚ್ ಪಿಎಸ್ಐ ಮುಕ್ತಿಯಾರ್ ಪಾಷಾ ಹಾಗೂ ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಬೆಳ್ಳೂಡಿಯಲ್ಲಿ ವನಮಹೋತ್ಸವ



ಮಲೇಬೆನ್ನೂರು, ಆ.19- ಬೆಳ್ಳೂಡಿ ಗ್ರಾಮದಲ್ಲಿ ಗ್ರಾಮ ಪಂಚಾಯ್ತಿ ವತಿಯಿಂದ ಹಮ್ಮಿಕೊಂಡಿದ್ದ ವನಮಹೋತ್ಸವ ಕಾರ್ಯಕ್ರಮದಲ್ಲಿ ಶಾಸಕ ಎಸ್. ರಾಮಪ್ಪ ಸಸಿ ನೆಟ್ಟು ನೀರೆರೆದರು. ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ಎಂ. ನರೇಂದ್ರ, ಮುಖಂಡರಾದ ಪೂಜಾರ್ ತಿಪ್ಪಣ್ಣ, ಮಾಳ್ಗಿ ಕೆಂಚಪ್ಪ, ಹರಿಹರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ. ಹನುಮಂತಪ್ಪ, ರಾಮಚಂದ್ರಪ್ಪ, ಸಂತೋಷ್, ಕೃಷ್ಣಮೂರ್ತಿ, ರೇವಣಸಿದ್ದಪ್ಪ ಮತ್ತು ಪಿಡಿಓ ಬಿರಾದಾರ್ ಮತ್ತಿತರರು ಭಾಗವಹಿಸಿದ್ದರು.

## ಆನ್‌ಲೈನ್ ಮೂಲಕ ಟೆಸ್ಟ್ ವರದಿ

**(3ನೇ ಪುಟದಿಂದ)** ಸೋಂಕಿತರನ್ನು ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆ ಮಾಡಿದರೆ ಸೋಂಕು ಹರಡುವಿಕೆಯನ್ನು ಕಡಿಮೆ ಮಾಡಬಹುದು. ಆದ್ದರಿಂದ ಪ್ರತಿ ಪ್ರಯೋಗಾಲಯಗಳಲ್ಲಿ ನಿಗದಿ ಮಾಡಿದಷ್ಟು ಸಂಖ್ಯೆಯಲ್ಲಿ ಪರೀಕ್ಷೆ ನಡೆಸಬೇಕು ಎಂದು ತಿಳಿಸಿದ್ದಾರೆ.

## ಪಂಚಮಸಾಲಿ ಸಮಾಜದ ಮಹಿಳಾ ಘಟಕದಿಂದ ತುಂಗಭದ್ರೆಗೆ ಬಾಗಿನ




ದಾವಣಗೆರೆ, ಆ.19- ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಮಹಿಳಾ ಘಟಕ ವತಿಯಿಂದ ಹರಿಹರದ ತುಂಗಭದ್ರಾ ನದಿಗೆ ಬಾಗಿನ ಸಮರ್ಪಣೆಯನ್ನು ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮಿಗಳ ದಿವ್ಯಸಾನ್ನಿಧ್ಯದಲ್ಲಿ ನೆರವೇರಿಸಲಾಯಿತು.

ಸಮಾಜದ ಹಿರಿಯರಾದ ಬಾದಾಮಿ ಕರಿಬಸಪ್ಪ, ಶ್ರೀಪೀಠದ ಧರ್ಮದರ್ಶಿ ಚಂದ್ರಶೇಖರ್ ಪೂಜಾರ್, ಜಿಲ್ಲಾ ಘಟಕ ಅಧ್ಯಕ್ಷ ರಶ್ಮಿನಾಗರಾಜ್ ಕುಂಕೂದ್, ರಾಜ್ಯ ಮಹಿಳಾ ಘಟಕ ಪ್ರಧಾನ ಕಾರ್ಯದರ್ಶಿ ವಸಂತ ಹುಲ್ಲತ್ತಿ, ವೀಣಾ ಕೊಟ್ರೇಶ್, ನಗರ ಘಟಕ ಅಧ್ಯಕ್ಷೆ ವಾಣಿ ಗುರು, ಹರಿಹರ ತಾಲ್ಲೂಕು ಮಹಿಳಾ ಅಧ್ಯಕ್ಷೆ ಸಂಗೀತ ಗಣೇಶ್ ಉಪಸ್ಥಿತರಿದ್ದರು.

ನಗರ ಘಟಕ ಕಾರ್ಯದರ್ಶಿ ಶಶಿಕಲಾ ಶಿವಲಿಂಗಪ್ಪ, ಕೊಟ್ರಮ್ಮ ಮುರುಗೇಶ್, ಶೈಲಾ, ಇಟ್ಟಿಗುಡಿ, ನಾಗವೇಣಿ ಪ್ರಕಾಶ್, ಶಾಂಭವಿ, ಕರಿಬಸಪ್ಪ ಗುತ್ತೂರು, ಕಾಶಿನಾಥ್, ಜಿ. ಷಣ್ಮುಖಪ್ಪ, ಬಂಕಾಪುರ ಶಿವಣ್ಣ ಉಪಸ್ಥಿತರಿದ್ದು, ಬಾಗಿನ ಕೊಡುಗೆಯನ್ನು ವಸಂತ ಅಂದನೂರು ಹಾಗೂ ಉಮಾ ಸೋಮಶೇಖರ್ ನೀಡಿದರು. ಚಿತ್ರದುರ್ಗ ಯುವ ಘಟಕದ ಬಿ.ಎಂ. ಮಂಜುನಾಥ್, ಬಣವಿಕಲ್ಲು ಆರ್.ಆರ್. ಅಭಿಷೇಕ್, ಎನ್.ಹೆಚ್. ಲಿಂಗರಾಜು ದೇವರಬೆಳಕೆರೆ ಮತ್ತಿತರರು ಭಾಗವಹಿಸಿದ್ದರು.

## ಹೊನ್ನಾಳಿ : ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್.ಎಸ್. ನಿತ್ಯಶ್ರೀಗೆ ಶೇ. 99.52



ಹೊನ್ನಾಳಿ, ಆ.14- ಪಟ್ಟಣದ ಸ್ಟೆಲ್ಲಾ ಮೇರೀಸ್ ಆಂಗ್ಲಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿನಿ ಹೆಚ್.ಎಸ್. ನಿತ್ಯಶ್ರೀ 625ಕ್ಕೆ 622 ಅಂಕ (ಶೇ.99.52) ಅಂಕಗಳನ್ನು ಗಳಿಸಿದ್ದಾಳೆ. ಶಾಲೆಯ ಒಟ್ಟು ವಿದ್ಯಾರ್ಥಿಗಳಲ್ಲಿ 19 ಡಿಸ್ಟಿಂಕ್ಷನ್, 27 ಪ್ರಥಮ ಹಾಗೂ ಇಬ್ಬರು ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದು, ಶಾಲೆಗೆ ಶೇ. 85.71 ಫಲಿತಾಂಶ ಲಭಿಸಿದೆ.

ನಿತ್ಯಶ್ರೀ ಕನ್ನಡದಲ್ಲಿ 124, ಇಂಗ್ಲೀಷ್ 100 ಕ್ಕೆ 100, ಹಿಂದಿ 99, ಗಣಿತ 100, ವಿಜ್ಞಾನ 99, ಸಮಾಜ ವಿಜ್ಞಾನದಲ್ಲಿ 100 ಅಂಕಗಳನ್ನು ಪಡೆದಿದ್ದಾರೆ. ಬಿ. ನಂದೀಶ್ 615 (ಶೇ.98.40, ಕನ್ನಡ 118, ಇಂಗ್ಲೀಷ್ 99, ಹಿಂದಿ 100, ಗಣಿತ 100, ವಿಜ್ಞಾನ 99, ಸಮಾಜ ವಿಜ್ಞಾನದಲ್ಲಿ 99 ಅಂಕಗಳನ್ನುಗಳಿಸಿದ್ದಾನೆ. ಸೂರ್ಯವರ್ಧನ ಹೆಚ್. ಪಾಟೀಲ್ 609 (ಶೇ.97.44), ಕನ್ನಡ 124, ಇಂಗ್ಲೀಷ್ 95, ಹಿಂದಿ 100, ಗಣಿತ 100. ವಿಜ್ಞಾನ 91, ಸಮಾಜ ವಿಜ್ಞಾನದಲ್ಲಿ 99 ಅಂಕ ಗಳಿಸಿದ್ದಾನೆ.

## ವರ್ಷದಲ್ಲೆರಡು ಪರೀಕ್ಷೆ

**(3ನೇ ಪುಟದಿಂದ)** ಪರೀಕ್ಷೆ ಬರೆಯಬಹುದು. ಈ ಪರೀಕ್ಷೆಯ ಅಂಕಗಳು ಮೂರು ವರ್ಷದವರೆಗೆ ಸಿಂಧುವಾಗಿರುತ್ತವೆ ಎಂದವರು ಹೇಳಿದ್ದಾರೆ.

ಹಿಂದಿ ಹಾಗೂ ಇಂಗ್ಲಿಷ್ ಅಷ್ಟೇ ಅಲ್ಲದೇ, 12 ಭಾಷೆಗಳಲ್ಲಿ ಪರೀಕ್ಷೆಗಳನ್ನು ನಡೆಸಲಾಗುವುದು. ಸಂವಿಧಾನದ ಎಂಟನೇ ಪರಿಚ್ಛೆದದಲ್ಲಿರುವ ಎಲ್ಲ ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ಇರಲಿದೆ ಎಂದವರು ಹೇಳಿದ್ದಾರೆ. ಕೇಂದ್ರ ಸರ್ಕಾರದ ನಿರ್ಧಾರದಿಂದಾಗಿ, ಕೇಂದ್ರದ ಹುದ್ದೆಗಳಿಗೆ ಕನ್ನಡದಲ್ಲೂ ಸಹ ಪರೀಕ್ಷೆ ಬರೆಯಲು ಅವಕಾಶ ಸಿಗಲಿದೆ. ಮುಂದಿನ ವರ್ಷದಿಂದ ಎನ್.ಆರ್.ಎ. ಜಾರಿಗೆ ಬರಲಿದೆ ಹಾಗೂ ಇದರ ಕೇಂದ್ರ ಕಚೇರಿ ದೆಹಲಿಯಲ್ಲಿರಲಿದೆ ಎಂದು ಸಚಿವ ಸಿಂಗ್ ಹೇಳಿದ್ದಾರೆ.

## ಶ್ರೀ ಜಯದೇವ ಸ್ವಾಮೀಜಿ ಲಿಂಗೈಕ್ಯ

**(3ನೇ ಪುಟದಿಂದ)** ನಾಳೆ ದಿನಾಂಕ 20ರ ಗುರುವಾರ ಅಪರಾಹ್ನ 12 ಗಂಟೆಗೆ ಚನ್ನಗಿರಿ ಶಿವಲಿಂಗ ಸ್ವಾಮಿ ಮಠದ ಆವರಣದಲ್ಲಿ ಬಸವತತ್ವದ ವಿಧಿ-ವಿಧಾನಗಳಂತೆ ಡಾ. ಶಿವಮೂರ್ತಿ ಮುರುಘಾ ಶರಣರ ನೇತೃತ್ವದಲ್ಲಿ ಶ್ರೀಗಳ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು ಎಂದು ಶ್ರೀ ಮಠದ ಪ್ರಕಟಣೆ ತಿಳಿಸಿದೆ.

**ಸಚಿವ ಭೈರತಿ ಬಸವರಾಜ್ ಸಂತಾಪ :** ಲಿಂಗೈಕ್ಯರಾದ ಶ್ರೀ ಜಯದೇವ ಸ್ವಾಮೀಜಿಗೆ ನಗರಾಭಿವೃದ್ಧಿ ಖಾತೆ ಸಚಿವರೂ ಆಗಿರುವ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

## ನಟ ಸುಶಾಂತ್ ಸಾವಿನ ಸಿಬಿಐ ತನಿಖೆಗೆ ಸುಪ್ರೀಂ ಸಮ್ಮತಿ

ನವದೆಹಲಿ, ಆ. 19 – ಬಾಲಿವುಡ್ ನಟ ಸುಶಾಂತ್ ಸಿಂಗ್ ರಾಜಪೂತ್ ಅಸಹಜ ಸಾವಿನಲ್ಲಿ ನಟಿ ರಿಯಾ ಚಕ್ರವರ್ತಿ ಪಾತ್ರ ಇರುವ ಬಗ್ಗೆ ಸಿಬಿಐ ತನಿಖೆ ನಡೆಸುವುದಕ್ಕೆ ಒಪ್ಪಿಗೆ ನೀಡಿರುವ ಸುಪ್ರೀಂ ಕೋರ್ಟ್, ಈ ವಿಷಯಕ್ಕೆ ಸಂಬಂಧಿಸಿದಂತೆ ಉದ್ಭವಿಸುವ ಯಾವುದೇ ಪ್ರಕರಣದ ವಿಚಾರಣೆಯನ್ನು ಸಿಬಿಐ ನಡೆಸಲಿದೆ ಎಂದು ಹೇಳಿದೆ.

ನ್ಯಾಯೋಚಿತ, ಸಮರ್ಥ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸುವುದು ಈಗಿನ ಅಗತ್ಯವಾಗಿದೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಸಿಬಿಐ ತನಿಖೆ ನಡೆಸುವುದು ಕಾನೂನು ಬದ್ಧವಾಗಿದೆ. ಈ ಪ್ರಕರಣದ ವಿಚಾರಣೆಯನ್ನು ಸಿಬಿಐಗೆ ವಹಿಸಲು ಬಿಹಾರ ಸರ್ಕಾರಕ್ಕೆ ಅಧಿಕಾರವಿದೆ ಎಂದು ತಿಳಿಸಿದೆ.

ರಾಜಪೂತ್ ತಂದೆ ನೀಡಿದ ದೂರನ್ನು ಆಧರಿಸಿ ಚಕ್ರವರ್ತಿ ಹಾಗೂ ಇತರ ಆರು ಜನರ ವಿರುದ್ಧ ಪಾಟ್ನಾ ಪೊಲೀಸರು ಎಫ್.ಐ.ಆರ್. ದಾಖಲಿಸಿ ರುವುದು ಅಕ್ರಮವಲ್ಲ ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

ರಾಜಪೂತ್ ಸಾವಿನ ನಿಗೂಢತೆ ಬಯಲು ಮಾಡಲು ಸಿಬಿಐ ತನಿಖೆ ನಡೆಸಬೇಕೆಂಬ ಒತ್ತಡ ಹೆಚ್ಚಾಗಿತ್ತು. ಜೂನ್



14ರಂದು ಮುಂಬೈನ ಬಾಂದ್ರಾದಲ್ಲಿರುವ ತಮ್ಮ ಅಪಾರ್ಟ್‌ಮೆಂಟ್‌ನಲ್ಲಿ ರಾಜಪೂತ್ ನೇಣು ಹಾಕಿಕೊಂಡಿದ್ದು ಕಂಡು ಬಂದಿತ್ತು. ನಂತರ ಮುಂಬೈ ಪೊಲೀಸರು ಹಲವಾರು ದೃಷ್ಟಿಕೋನಗಳಿಂದ ತನಿಖೆ ನಡೆಸುತ್ತಿದ್ದಾರೆ.

ವಿಚಾರಣೆ ನಡೆಸಿ 35 ಪುಟಗಳ ತೀರ್ಪು ನೀಡಿರುವ ನ್ಯಾಯಮೂರ್ತಿ ಹೃಷಿಕೇಷ್ ರಾಯ್ ಅವರನ್ನು ಒಳಗೊಂಡ ಪೀಠ, ಬಿಹಾರ ಹಾಗೂ ಮಹಾರಾಷ್ಟ್ರ ಪೊಲೀಸರಿಬ್ಬರೂ ರಾಕೀಯ ಮಧ್ಯ ಪ್ರವೇಶದ ಬಗ್ಗೆ ಪರಸ್ಪರರ ವಿರುದ್ಧ ಆರೋಪ – ಪ್ರತ್ಯಾರೋಪ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸತ್ಯ ಹಾಗೂ ನ್ಯಾಯ ಗಳೇ ಬಲಿಪಶುಗಳಾಗಬಹುದು ಎಂಬ ಸಕಾರಣವಾದ ಕಳವಳಗಳಿವೆ ಎಂದು ತಿಳಿಸಿದೆ.

ತಮ್ಮ ವಿರುದ್ಧ ಪಾಟ್ನಾದಲ್ಲಿ ದಾಖಲಿಸಿರುವ ಎಫ್.ಐ.ಆರ್. ಅನ್ನು ಪಾಟ್ನಾದಿಂದ ಮುಂಬೈಗೆ ವರ್ಗಾಯಿಸಬೇಕೆಂದು ರಿಯಾ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

ರಿಯಾ ಚಕ್ರವರ್ತಿ ಸಹ ಪ್ರಕರಣದ ಸಿಬಿಐ ತನಿಖೆ ನಡೆಯಬೇಕೆಂದು ಬಯಸಿದ್ದರು ಎಂದೂ ಪೀಠ ಉಲ್ಲೇಖಿಸಿದೆ.

ತನ್ನ ಎದುರು ಸಲ್ಲಿಸಲಾಗಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಮುಂಬೈ ಪೊಲೀಸರು ಯಾವುದೇ ತಪ್ಪು ಮಾಡಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತಿಲ್ಲ ಎಂದಿರುವ ನ್ಯಾಯಾಲಯ, ಬಿಹಾರ ಪೊಲೀಸ್ ತಂಡ ಮುಂಬೈಗೆ ತನಿಖೆಗೆ ಬಂದಾಗ ಅಡ್ಡಿಪಡಿಸಬಾರದಿತ್ತು. ಇದರಿಂದಾಗಿ ತನಿಖೆಯ ಸದುದ್ದೇಶ ಶಂಕೆಗೆ ಸಿಲುಕಿದೆ ಎಂದು ಹೇಳಿದೆ.

## ರಾಮ ಮಂದಿರದ ಲಡ್ಡೂಗೆ ಕೆ.ಎಂ.ಎಫ್. ತುಪ್ಪ




ಬೆಂಗಳೂರು, ಆ. 19 – ಕಳೆದ ಆಗಸ್ಟ್ 5ರಂದು ಅಯೋಧ್ಯೆ ರಾಮ ಮಂದಿರ ದೇವಾಲಯಕ್ಕೆ ಶಿಲಾನ್ಯಾಸ ನೆರವೇರಿಸುವ ಸಂದರ್ಭಕ್ಕೆ ರೂಪಿಸಲಾದ ಸಿಹಿಗೆ ಕೆ.ಎಂ.ಎಫ್.ನ ತುಪ್ಪವನ್ನು ಬಳಸಲಾಗಿತ್ತು. ಈ ವಿಷಯ ತಿಳಿಸಿರುವ ಕೆ.ಎಂ.ಎಫ್. ಅಧಿಕಾರಿಯೊಬ್ಬರು, ಅಂದು 1.5 ಲಕ್ಷ ಲಡ್ಡುಗಳನ್ನು ವಿತರಿಸಲಾಗಿತ್ತು ಹಾಗೂ ಅಖಂಡ ಜ್ಯೋತಿಯನ್ನು ಬೆಳಗಲಾಗಿತ್ತು. ಇದಕ್ಕಾಗಿ ಕೆ.ಎಂ.ಎಫ್. ಮೂಲಕ ತುಪ್ಪ ಪಡೆಯಲಾಗಿತ್ತು ಎಂದು ತಿಳಿಸಿದ್ದಾರೆ.

ಸಮಾರಂಭವನ್ನು ಆಯೋಜಿಸಿದ್ದ ಮಹಾವೀರ ಮಂದಿರ ಟ್ರಸ್ಟ್ ಮೂಲಕ 8,000 ಲೀಟರ್ ತುಪ್ಪವನ್ನು ಕೆ.ಎಂ.ಎಫ್. ಪೂರೈಸಿತ್ತು ಎಂದವರು ಹೇಳಿದ್ದಾರೆ.

## ಎಸ್ಸಿ-ಎಸ್ಟಿ ದೌರ್ಜನ್ಯ ಕಾಯ್ದೆಯಡಿ ಆರೋಪಿಗಳ ಬಂಧನಕ್ಕೆ ಆಗ್ರಹ

ದಾವಣಗೆರೆ, ಆ.19- ಪರಿಶಿಷ್ಟ ಜಾತಿ, ಪಂಗಡಗಳ ದೌರ್ಜನ್ಯ ತಡೆ ಕಾಯ್ದೆ ಯಡಿಯಲ್ಲಿ ಪ್ರಕರಣ ದಾಖಲಾಗಿರುವ ಆರೋಪಿಗಳನ್ನು ಬಂಧಿಸುವಂತೆ ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದಿ) ವತಿಯಿಂದ ಪ್ರಗತಿಪರ ಸಂಘಟನೆಗಳು ಚಿಂತಕರ ಸಹಯೋಗದೊಂದಿಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಅನಿರ್ದಿಷ್ಟಾವಧಿಯ ನಿರಂತರ ಸತ್ಯಾಗ್ರಹವನ್ನು ಆರಂಭಿಸಲಾಗಿದೆ.

ಕಾಯ್ದೆ ಅಡಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿಯ ಸಹಾಯಕ ಆಡಳಿತಾಧಿಕಾರಿ ಜಿ. ನಿಜಲಿಂಗಪ್ಪ ಅವರು ತಮಗೆ ಆಗುತ್ತಿದ್ದ ಅನ್ಯಾಯ, ಅವಮಾನ, ದೌರ್ಜನ್ಯ, ಜಾತಿ ನಿಂದನೆ ಹಾಗೂ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿರುವ ಕುರಿತಂತೆ ಡಾ. ರಾಘವೇಂದ್ರ ಸ್ವಾಮಿ ಮತ್ತು ಸತ್ಯನಾರಾಯಣರಾವ್ ಅವರ ವಿರುದ್ಧ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸಿ ತಿಂಗಳು ಕಳೆದರೂ ಪೊಲೀಸರು ಕ್ರಮ ಕೈಗೊಂಡಿಲ್ಲ ಎಂದು ಪ್ರತಿಭಟನಕಾರರು ಆರೋಪಿಸಿದರು.

ಪ್ರತಿಭಟನೆಯಲ್ಲಿ ಸಮಿತಿ ರಾಜ್ಯ ಸಂಚಾಲಕ ಹೆಚ್. ಮಲ್ಲೇಶ್, ಸಂಘಟನಾ ಸಂಚಾಲಕರಾದ ಡಿ. ಹನುಮಂ ತಪ್ಪ, ಎಸ್.ಜಿ. ವೆಂಕಟೇಶ ಬಾಬು, ಜಿಲ್ಲಾ ಸಂಚಾಲಕ ಜಿ.ಎನ್. ಮಲ್ಲಿಕಾರ್ಜುನ, ಗುಮ್ಮನೂರು ಮಲ್ಲಿಕಾರ್ಜುನ, ತಿಮ್ಮಣ್ಣ, ಎಚ್.ಸಿ. ಮಲ್ಲಪ್ಪ, ಜಿ. ನಿಜಲಿಂಗಪ್ಪ, ಡಿ.ಜಿ. ಆಸಿಫ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ವಿಶೇಷ ರೈಲುಗಳು ಶೇ.30ರಷ್ಟು ಮಾತ್ರ ಭರ್ತಿ

**(3ನೇ ಪುಟದಿಂದ)** ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳ ಕುರಿತು ವಿವರ ನೀಡಿದ ಅವರು, ಎಂಟು ರೈಲ್ವೆ ನಿಲ್ದಾಣಗಳಲ್ಲಿ ವಿಮಾನ ನಿಲ್ದಾಣ ಮಾದರಿಯ ಬೆಳಕಿನ ವ್ಯವಸ್ಥೆ ಮಾಡಲಾಗಿದೆ. ಇನ್ನೂ 15ರಲ್ಲಿ ಇದೇ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದವರು ಹೇಳಿದ್ದಾರೆ.

ರೈಲ್ವೆಯು ಸರಕು ಸಾಗಣೆಯ ಕಡೆ ಹೆಚ್ಚು ಒತ್ತು ನೀಡುತ್ತಿದೆ. ಗ್ರಾಹಕರ ಜೊತೆ ನಿಯಮಿತವಾಗಿ ವೆಬ್ - ಲಿಂಕ್ ಮೂಲಕ ಸಂಪರ್ಕಿಸಲಾಗುತ್ತಿದೆ. ಸಿಐಐ, ಎಪಿಎಂಸಿ ಮುಂತಾದ ಸಂಸ್ಥೆಗಳನ್ನು ಸಂಪರ್ಕಿಸಿ ಕೈಗಾರಿಕೆ ಹಾಗೂ ಕೃಷಿ ಸರಕುಗಳ ಸಾಗಣೆಗೆ ಕ್ರಮ ವಹಿಸಲಾಗುತ್ತಿದೆ.

2019-20ರಲ್ಲಿ 8.13 ಮೆಟ್ರಿಕ್ ಟನ್ ಸರಕು ಸಾಗಣೆ ಮಾಡಲಾಗಿದೆ. ಇದನ್ನು 2020-21ರಲ್ಲಿ 8.20 ಮೆಟ್ರಿಕ್ ಟನ್‌ಗೆ ಹೆಚ್ಚಿಸಲಾಗುವುದು ಎಂದವರು ತಿಳಿಸಿದ್ದಾರೆ.

ಮಿಷನ್ ರಫ್ತಾರ್ ಮೂಲಕ ಸರಕು ಸಾಗಣೆ ರೈಲಿನ ಸರಾಸರಿ ವೇಗವನ್ನು 50 ಕಿ.ಮೀ.ಗಳವರೆಗೆ ಹೆಚ್ಚಿಸಲಾಗಿದೆ. ಸರಕು ಸಾಗಣೆಗಾಗಿ ವಿನಾಯಿತಿಗಳು ಹಾಗೂ ಯೋಜನೆಗಳನ್ನೂ ಹೊಂದಲಾಗಿದೆ ಎಂದು ಗಾರ್ಗ್ ಇದೇ ಸಂದರ್ಭದಲ್ಲಿ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ರೈಲ್ವೆ ಅಧಿಕಾರಿಗಳಾದ ನಾರಾಯಣ ರಾವ್, ಶ್ರೀರಾಮನ್, ವಿಜಯ, ಪಾರ್ಥಸಾರಥಿ ಮತ್ತಿತರರು ಉಪಸ್ಥಿತರಿದ್ದರು.


## ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ವಿ. ಲಿಂಗರಾಜು**

ಸನ್ನದು ಲೆಕ್ಕಪರಿಶೋಧಕರು, ದಾವಣಗೆರೆ.

ನಮ್ಮ ಸಂಘದ ಸದಸ್ಯರಾದ ಶ್ರೀಯುತರು ದಿನಾಂಕ : 18.08.2020 ರಂದು ದೈವಾದೀನರಾಗಿದ್ದು, ಮೃತರ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಹಾಗೂ ಅವರ ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸುವ.


**ಅಧ್ಯಕ್ಷರು, ಗೌರವಾಧ್ಯಕ್ಷರು**

**ಪದಾಧಿಕಾರಿಗಳು ಹಾಗೂ ಸರ್ವಸದಸ್ಯರು**

**ದಾವಣಗೆರೆ ಚಾರ್ಟರ್ಡ್ ಅಕೌಂಟೆಂಟ್ ಅಸೋಸಿಯೇಷನ್ (ರಿ.), ದಾವಣಗೆರೆ.**



## ಪ್ರಥಮ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಲಿಂದಮ್ಮ**

*(ನಿಧನ : 01.09.2019)*

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು, ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪತಿ : ಶ್ರೀ ಹೆಚ್. ರಾಮಚಂದ್ರಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು

ಮಗ : ಆರ್. ರಾಘವೇಂದ್ರ, ಆರೋಗ್ಯ ಇಲಾಖೆ

ಹೆಣ್ಣು ಮಕ್ಕಳು, ಸೊಸೆ, ಮೊಮ್ಮಕ್ಕಳು, ಹಾಗೂ ಬಂಧು-ಮಿತ್ರರು

ದಾವಣಗೆರೆ. ಫೋ. : 98445 72309


## ಹರಪನಹಳ್ಳಿ : ಕಿಡಿಗೇಡಿಗಳ ಕೃತ್ಯಕ್ಕೆ ಶಂಕರ ಸೇವಾ ಸಮಿತಿ ಖಂಡನೆ

ಹರಪನಹಳ್ಳಿ, ಆ.19- ಶೃಂಗೇರಿ ಪಟ್ಟಣದಲ್ಲಿ ಶ್ರೀ ಆದಿಶಂಕರಾಚಾರ್ಯ ಪ್ರತಿಮೆಯ ಇರುವ ಮಂಟಪದ ಮೇಲೆ ಅನ್ಯ ಧರ್ಮದ ಧ್ವಜವನ್ನು ಕಿಡಿಗೇಡಿಗಳು ಹಾಕಿರುವುದನ್ನು ಪಟ್ಟಣದ ಶಂಕರ ಸೇವಾ ಸಮಿತಿ ಖಂಡಿಸಿದೆ. ಪಟ್ಟಣದ ಜೋಯಿಸರಕೇರಿಯಲ್ಲಿರುವ ಶಂಕರ ಮಠದಲ್ಲಿ ಪದಾಧಿಕಾರಿಗಳು ಸಭೆ ನಡೆಸಿ ಕಿಡಿಗೇಡಿಗಳು ಮಾಡಿರುವ ದುಸ್ಸಾಹಸಕ್ಕೆ ಕಡಿವಾಣ ಹಾಕಬೇಕು. ಪ್ರತಿಮೆಯ ಬಳಿ ಮುಸ್ಲಿಂ ಸಂಘಟನೆ ಧ್ವಜ ಹಾಕಿದವರನ್ನು ಹಾಗೂ ಪ್ರತಿಮೆಗೆ ಧಕ್ಕೆ ಮಾಡಿದವರನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಬೇಕು. ಕೋಮು ಸೌಹಾರ್ದಕ್ಕೆ ಧಕ್ಕೆ ತರುವ ಸಂಘಟನೆಗಳ ಬಗ್ಗೆ ಎಚ್ಚೆತ್ತುಕೊಂಡು ಸರ್ಕಾರ ಸೂಕ್ತ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದ್ದಾರೆ.

ಶಂಕರ ಸೇವಾ ಸಮಿತಿ ಅಧ್ಯಕ್ಷ ರಾಘವೇಂದ್ರ ಪ್ರಸಾದ್, ಕಾರ್ಯದರ್ಶಿ ಹೆಚ್.ಶಿವಶಂಕರಭಟ್, ಮುಖಂಡರಾದ ಸಿ. ಚಂದ್ರಶೇಖರ ಭಟ್, ಎಸ್.ಶ್ಯಾಮಸುಂದರ ಭಟ್, ಸಿ.ಲಕ್ಷ್ಮೀನಾರಾಯಣ ಭಟ್, ಎಸ್.ಚಂದ್ರಧರ ಭಟ್, ಹೆಚ್.ಲಿಂಗಮಾಲಿರಿ ಭಟ್, ಜೆ.ಲಕ್ಷಣ ಭಟ್ ಇನ್ನಿತರರು ಭಾಗವಹಿಸಿದ್ದರು.

## ಕಿಡ್ನಿ ವೈಫಲ್ಯಕ್ಕೊಳಗಾದ ಸರ್ಕಾರಿ ನೌಕರರಿಗೆ ಸಾಂದರ್ಭಿಕ ರಜೆ

ದಾವಣಗೆರೆ, ಆ.19- ಕಿಡ್ನಿ ವೈಫಲ್ಯಕ್ಕೆ ತುತ್ತಾಗುವ ರಾಜ್ಯ ಸರ್ಕಾರಿ ನೌಕರರು ಡಯಾಲಿಸಿಸ್‌ಗೆ ಒಳಪಡುವ ದಿನದಂದು ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡುವಂತೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ಮನವಿ ಸಲ್ಲಿಸಲಾಗಿ ಸ್ಪಂದನೆ ನೀಡಿದ ಮುಖ್ಯಮಂತ್ರಿಗಳನ್ನು ಸರ್ಕಾರಿ ನೌಕರರ ಸಂಘವು ಅಭಿನಂದಿಸಿದೆ.

ನೌಕರರು ಅಧಿಕೃತ ವೈದ್ಯಕೀಯ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಸಲ್ಲಿಸುವ ಷರತ್ತಿನೊಂದಿಗೆ ಡಯಾಲಿಸಿಸ್‌ಗೆ ಒಳಪಡುವ ದಿನದಂದು ವಿಶೇಷ ಸಾಂದರ್ಭಿಕ ರಜೆಯನ್ನು ಪಡೆಯಬಹುದಾಗಿರುತ್ತದೆ ಎಂದು ಸಂಘದ ಜಿಲ್ಲಾಧ್ಯಕ್ಷ ಬಿ. ಪಾಲಾಕ್ಷಿ ತಿಳಿಸಿದ್ದಾರೆ.

# ಷರತ್ತುಗಳಡಿ ಗಣೇಶ ಹಬ್ಬದ ಆಚರಣೆ

ದಾವಣಗೆರೆ ಆ.19- ಜಿಲ್ಲೆಯಾದ್ಯಂತ ಗಣೇಶ ಹಬ್ಬದ ಆಚರಣೆಗೆ ಕೆಲವು ಷರತ್ತುಗಳನ್ನು ವಿಧಿಸಲಾಗಿದೆ.

ಗಣೇಶ ಚತುರ್ಥಿ ಹಬ್ಬದಲ್ಲಿ ಸರಳ ರೀತಿಯಲ್ಲಿ ದೇವಸ್ಥಾನದೊಳಗೆ, ತಮ್ಮ ಮನೆಗಳಲ್ಲಿ ಅಥವಾ ಸರ್ಕಾರಿ, ಖಾಸಗಿ, ಸಾರ್ವಜನಿಕ ಬಯಲು ಪ್ರದೇಶಗಳಲ್ಲಿ ಕನಿಷ್ಟ ಸಂಖ್ಯೆಯೊಂದಿಗೆ ಆಚರಿಸಬಹುದು. ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸುವವರು ಗಣೇಶ ಮೂರ್ತಿಯನ್ನು ನಾಲ್ಕು ಅಡಿ ಎತ್ತರ ಮೀರದಂತೆ ಹಾಗೂ ಮನೆಯೊಳಗೆ ಎರಡು ಅಡಿ ಮೀರದಂತೆ ಪ್ರತಿಷ್ಠಾಪಿಸುವುದು. ಪಾರಂಪರಿಕ ಗಣೇಶೋತ್ಸವಕ್ಕಾಗಿ ಗಣೇಶೋತ್ಸವ ಸಮಿತಿಗಳು, ಮಂಡಳಿಗಳು, ಗಣೇಶ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲು ಮುನ್ಸಿಪಲ್ ಕಾರ್ಪೋರೇಷನ್, ಸ್ಥಳೀಯ ಆಡಳಿತದಿಂದ ಪೂರ್ವಾನುಮತಿಯನ್ನು ಪಡೆಯತಕ್ಕದು.

ಒಂದು ವಾರ್ಡಿಗೆ, ಗ್ರಾಮಕ್ಕೆ ಒಂದು ಸಾರ್ವಜನಿಕ ಗಣೇಶೋತ್ಸವವನ್ನು ಮಾತ್ರ ಆಚರಿಸಲು ಪ್ರೋತ್ಸಾಹಿಸುವುದು. ಇಂತಹ ಸ್ಥಳಗಳಲ್ಲಿ 20 ಜನಕ್ಕೆ ಸೀಮಿತವಾದ ಆವರಣವನ್ನು ನಿರ್ಮಿಸುವುದು, ಒಮ್ಮೆಲೆ 20ಕ್ಕಿಂತ ಹೆಚ್ಚಿನ ಜನ ಸೇರದಂತೆ ಭಕ್ತಾಧಿಗಳಿಗೆ ಅನುವು ಮಾಡುವುದು. ಗಣೇಶ ಮೂರ್ತಿ ಪ್ರತಿಷ್ಠಾಪನೆ ಸ್ಥಳದಲ್ಲಿ ಯಾವುದೇ ರೀತಿಯ ಸಾಂಸ್ಕೃತಿಕ ಸಂಗೀತ, ನೃತ್ಯ, ಇನ್ನಿತರೆ ಯಾವುದೇ ಮನರಂಜನಾ ಕಾರ್ಯಕ್ರಮಗಳಿಗೆ ಅವಕಾಶವಿಲ್ಲ. ಗಣೇಶ ಮೂರ್ತಿಯನ್ನು ತರುವಾಗ ಹಾಗೂ ವಿಸರ್ಜಿಸುವಾಗ ಯಾವುದೇ ಮೆರವಣಿಗೆ ನಡೆಸದಂತೆ ಜಿಲ್ಲಾಡಳಿತ ಹಾಗೂ ಜಿಲ್ಲಾ ಪೊಲೀಸ್ ಇಲಾಖೆ ಷರತ್ತುಗಳ ವಿಧಿಸಿದೆ.

# ಕೋವಿಡ್ : ಶವ ಸಂಸ್ಕಾರ ಸ್ವಯಂ ಸೇವಕರ ನೇಮಕ

ದಾವಣಗೆರೆ, ಆ.19- ಕೋವಿಡ್ -19 ಸಾಂಕ್ರಾಮಿಕ ರೋಗದಿಂದ ಮೃತಪಟ್ಟ ಮುಸ್ಲಿಂ ಧರ್ಮದವರನ್ನು ನಿಯಮಾನುಸಾರ ಶವಸಂಸ್ಕಾರ ಮಾಡಲು ಜಿಲ್ಲಾ ವಕ್ಫ್ ಅಧಿಕಾರಿಯನ್ನು ನೋಡೆಲ್ ಅಧಿಕಾರಿಯನ್ನಾಗಿ ಹಾಗೂ ಆರು ಜನ ಸ್ವಯಂ ಸೇವಕರನ್ನು ನೇಮಿಸಲಾಗಿದೆ.

ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಮುಸ್ಲಿಂ ಧರ್ಮದವರು ಸಾಂಕ್ರಮಿಕ ರೋಗದಿಂದ ಮೃತಪಟ್ಟಲ್ಲಿ, ಶವ ಸಂಸ್ಕಾರವನ್ನು ಪ್ರಮಾಣಿತ ಕಾರ್ಯಾಚರಣೆ ವಿಧಾನ ಅನುಸರಿಸಿ, ಅವರ ಸಾಂಪ್ರದಾಯದಂತೆ ನೆರವೇರಿಸಲು ರಾಜ್ಯ ವಕ್ಫ್ ಇಲಾಖೆ ಸುತ್ತೋಲೆ ನೀಡಿದ್ದು, ಸಾಮಾಜಿಕ ಅಂತರ ಕಾಪಾಡಿಕೊಳ್ಳಲು ನಿರ್ದೇಶಿಸಲಾಗಿದೆ ಎಂದು ಜಿಲ್ಲಾ ವಕ್ಫ್ ಅಧಿಕಾರಿ ಸೈಯದ್ ಮೌಜಮ್ ಪಾಷ ತಿಳಿಸಿದ್ದಾರೆ.

**ಸ್ವಯಂ ಸೇವಕರು ಹೆಸರು :** ಸಾಜಿದ್ ಡಿ.ಸೈಯದ್ ರಿಯಾಜ್, ಮೊಹಮ್ಮದ್ ಆಸೀಫ್, ಸಾಧಿಕ್ ವುಲ್ಲಾ, ಸೈಯದ್ ಖಲಂದರ್, ಚಮನ್ ಸಾಬ್ ಶವ ಸಂಸ್ಕಾರಕ್ಕೆ ತೆರಳುವ ಪೂರ್ವದಲ್ಲಿ ಅಗತ್ಯವಾಗಿ ಪಿಪಿಇ ಕಿಟ್, ಮಾಸ್ಕ್ ಹಾಗೂ ಇತರೆ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಶವ ಸಂಸ್ಕಾರ (ತದಫೀನ್) ಪ್ರಮಾಣಿತ ಕಾರ್ಯಾಚರಣೆ ವಿಧಾನದಂತೆ ನೆರವೇರಿಸಬೇಕು. ಶವಸಂಸ್ಕಾರದ ನಂತರ ವರದಿಯನ್ನು ಜಿಲ್ಲಾ ವಕ್ಫ್ ಅಧಿಕಾರಿಗಳಿಗೆ ನೀಡಬೇಕು.

**ಅಧ್ಯಕ್ಷರ ನಿಧನ ತೆರವಾದ ಸ್ಥಾನ :** ಇತ್ತೀಚೆಗೆ ದೈವಾಧೀನರಾಗಿರುವ ರಾಜ್ಯ ವಕ್ಫ್ ಬೋರ್ಡ್ ಅಧ್ಯಕ್ಷ ಮಹಮ್ಮದ್ ಯುಸೂಫ್ (ಬ್ಯಾರೆಲ್ ಯುಸೂಫ್) ಅವರ ಸ್ಥಾನಕ್ಕೆ ಮರು ಚುನಾವಣೆ ನಡೆಯಲಿದ್ದು, ಇಷ್ಟರಲ್ಲೇ ಆಡಳಿತಾಧಿಕಾರಿಗಳನ್ನು ನೇಮಿಸಲಾಗುವುದು ಎಂದು ಜಿಲ್ಲಾ ಮೂಲಗಳಿಂದ ತಿಳಿದುಬಂದಿದೆ.

# ಕಾನೂನು ಪರೀಕ್ಷೆಯನ್ನು ರದ್ದುಗೊಳಿಸಲು ಆಗ್ರಹ

## ನಗರದಲ್ಲಿ ಎಸ್‌ಎಫ್‌ಐ ಹಾಗೂ ಎಐಎಸ್‌ಎಫ್ ಪ್ರತಿಭಟನೆ

ದಾವಣಗೆರೆ, ಆ.19- ಪ್ರಥಮ ಹಾಗೂ ದ್ವಿತೀಯ ವರ್ಷದ ಕಾನೂನು ಪರೀಕ್ಷೆಗಳನ್ನು ರದ್ದುಪಡಿಸಿ ಮುಂದಿನ ತರಗತಿಗೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸಿ ಎಸ್ ಎಫ್ ಐ ಹಾಗೂ ಎಐಎಸ್ ಎಫ್ ಜಿಲ್ಲಾ ಸಮಿತಿ ಕಾರ್ಯಕರ್ತರು ನಗರದಲ್ಲಿ ಇಂದು ಪ್ರತಿಭಟನೆ ನಡೆಸಿದರು.

ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು, ಪ್ರತಿಭಟನಾ ಮೆರವಣಿಗೆ ಮುಖೇನ ಉಪ ವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ ಉಪವಿಭಾಗಾಧಿಕಾರಿಗಳ ಮೂಲಕ ರಾಜ್ಯ ಕಾನೂನು ವಿವಿ ಕುಲಪತಿಗಳಿಗೆ ಮನವಿ ಸಲ್ಲಿಸಿದರು.

ಈಗಾಗಲೇ ದೇಶಾದ್ಯಂತ ಕೊರೋನ ಮಹಾಮಾರಿ ತನ್ನ ಅಟ್ಟಹಾಸವನ್ನು ಮೆರೆದಿದ್ದು, ದೇಶದ ಪ್ರತಿಯೊಂದು ಶಾಲಾ-ಕಾಲೇಜುಗಳು ಹಾಗೂ ರಂಗಗಳು ಸ್ಥಗಿತಗೊಂಡಿದೆ. ಇದನ್ನು ಮನಗಂಡು ಕೇರಳ ಹಾಗೂ ತಮಿಳುನಾಡು ಸರ್ಕಾರಗಳು ಹಾಗೂ ಕರ್ನಾಟಕ ಸರ್ಕಾರ ಹಾಗೂ ಯುಜಿಸಿ ತನ್ನ ವ್ಯಾಪ್ತಿಯಲ್ಲಿ ಬರುವ ಪ್ರಥಮ ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿಗಳ ಪರೀಕ್ಷೆಯನ್ನು ರದ್ದುಗೊಳಿಸಿ ಅವರನ್ನು ಈ ಹಿಂದೆ ಕಾಲೇಜಿನಲ್ಲಿ ನಡೆದ ಕಿರುಪರಿಕ್ಷೆಗಳ ಆಧಾರದ ಮೇಲೆ ಗ್ರೇಡ್ ಕೊಟ್ಟು ಉತ್ತೀರ್ಣ ಮಾಡಲು ಆದೇಶ ಮಾಡಿದೆ.

ಈಗಾಗಲೇ ಪ್ರತಿಯೊಂದು ಕಾಲೇಜುಗಳಲ್ಲಿ ತರಗತಿಗಳನ್ನು ಆನ್ ಲೈನ್ ಮೂಲಕ ನಡೆಸಿದ್ದು, ಗ್ರಾಮೀಣ ಭಾಗದ ಬಹುತೇಕ ವಿದ್ಯಾರ್ಥಿಗಳನ್ನು ಆನ್ ಲೈನ್ ತರಗತಿಗಳಿಂದ ವಂಚಿತರಾಗಿದ್ದಾರೆ. ಆದ್ದರಿಂದ ವಿದ್ಯಾರ್ಥಿಗಳ ದೃಷ್ಟಿಯಿಂದ ಕರ್ನಾಟಕ ಕಾನೂನು ವಿಶ್ವವಿದ್ಯಾಲಯದ ವತಿಯಿಂದ ಪರೀಕ್ಷೆ ನಡೆಸಲು ಮುಂದಾಗಿರುವ ಕ್ರಮವನ್ನು ಈ ಕೂಡಲೇ ಹಿಂಪಡೆಯಬೇಕೆಂದು ಎಸ್ ಎಫ್ ಐ ಜಿಲ್ಲಾ ಸಂಚಾಲಕ ಲಕ್ಷ್ಮಣ್ ರಾಮಾವತ್ ಒತ್ತಾಯಿಸಿದರು.

ಒಂದು ವೇಳೆ ಪರೀಕ್ಷೆಗಳನ್ನು ನಡೆಸಿದರೆ ಪರೀಕ್ಷಾ ಶುಲ್ಕವನ್ನು ಪಾವತಿಸದೆ ಪರೀಕ್ಷೆಯನ್ನು ಬಹಿಷ್ಕರಿಸುವ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಎಐಎಸ್‌ಎಫ್ ರಾಜ್ಯ ಕಾರ್ಯದರ್ಶಿ ರಮೇಶ್, ಎಸ್‌ಎಫ್‌ಐ ಜಿಲ್ಲಾ ಸಂಚಾಲಕ ರಾಕೇಶ್, ಕಾನೂನು ವಿದ್ಯಾರ್ಥಿಗಳಾದ ಮಂಜುನಾಥ, ರಘುರಾಜ್, ವೆಂಕಟೇಶ್, ಸುನಿಲ್, ಶಶಾಂಕ್, ಮಿರ್ಜಾ ಆಸಾದ್, ಕಿರಣ್, ಹರೀಶ್,ಅಂಜಲಿ, ಸಿಂಚನಾ ಸೇರಿದಂತೆ ಇತರರು ಭಾಗವಹಿಸಿದ್ದರು.

# ಜಿಎಂಐಟಿಯಲ್ಲಿ ವರ್ಚ್ಯೂಯಲ್ ಆಸೀಲೊಸ್ಕೋಪ್ ತಯಾರಿಕೆ

ದಾವಣಗೆರೆ, ಆ.19- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇತ್ತೀಚೆಗೆ ನಡೆದ ಪ್ರಾಡಕ್ಟ್ ಎಕ್ಸಿಬಿಷನ್‌ನಲ್ಲಿ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗದ ಮುಖ್ಯಸ್ಥ ಡಾ. ಹೆಚ್.ಸಿ. ಹಾದಿಮನಿ ನೇತೃತ್ವದಲ್ಲಿ ವರ್ಚ್ಯೂಯಲ್ ಆಸಿಲೋಸ್ಕೋಪ್ ಅನ್ನು ಪ್ರದರ್ಶಿಸಲಾಯಿತು.

ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್ ಹಾಗೂ ಆಡಳಿತಾಧಿಕಾರಿ ವೈ.ಯು. ಸುಭಾಶ್‌ಚಂದ್ರ ಅವರ ಪ್ರೋತ್ಸಾಹದಿಂದ ರಾಜಶೇಖರ್ ಎಲಿಗಾರ್, ಟಿ.ಎಸ್. ಶ್ರೀನಿವಾಸ್ ಮತ್ತು ಎಸ್.ಎನ್. ಕಲ್ಲೇಶಿ ಅವರು ಇದನ್ನು ತಯಾರಿಸಿದ್ದು, ಸಿಗ್ನಲ್‌ಗಳನ್ನು ಅಳೆಯಲು ಉಪಯೋಗಿಸಬಹುದು. ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಂಶೋಧಕರು ಇದರ ಉಪಯೋಗವನ್ನು ಅತಿ ಕಡಿಮೆ ಬೆಲೆಯಲ್ಲಿ ಪಡೆಯಬಹುದಾಗಿದೆ.

# ನಗರದಲ್ಲಿ ಇಂದು ಕೊರೊನಾ ವಾರಿಯರ್ಸ್ ಗೆ ಗೌರವ

ಕೊರೊನಾ ವಾರಿಯರ್ಸ್ ಗೆ ಗೌರವ ಸಮರ್ಪಿಸುವ ಕಾರ್ಯಕ್ರಮವು ಕುವೆಂಪು ಕನ್ನಡ ಭವನದಲ್ಲಿ ಇಂದು ಸಂಜೆ 5 ಗಂಟೆಗೆ ನಡೆಯಲಿದೆ.

ಲೋಕಿಕೆರೆ ನಾಗರಾಜ್ ಅಭಿಮಾನಿಗಳ ಬಳಗ, ಜಿಲ್ಲಾ ಶೋಷಿತ ವರ್ಗಗಳ ಒಕ್ಕೂಟ, ಟಾಸ್ಕ್ ಫೋರ್ಸ್ ಸಮಿತಿ ಇವರುಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಸಹಯೋಗದಲ್ಲಿ ಈ ಕಾರ್ಯಕ್ರಮ ಏರ್ಪಾಡಾಗಿದೆ.

ದಾನಿಗಳೂ, ವರ್ತಕರೂ ಆಗಿರುವ ಲೋಕಿಕೆರೆ ನಾಗರಾಜ್ ಅವರ ಹುಟ್ಟುಹಬ್ಬದ ಅಂಗವಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಶೋಷಿತ ವರ್ಗಗಳ ಒಕ್ಕೂಟದ ಬಾಡಾದ ಆನಂದರಾಜ್ ತಿಳಿಸಿದ್ದಾರೆ.

ಶ್ರೀ ಬಸವ ಪ್ರಭು ಸ್ವಾಮೀಜಿ ಸಾನ್ನಿಧ್ಯ ಮತ್ತು ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ ಅವರ ಅಧ್ಯಕ್ಷತೆಯಲ್ಲಿ ಶಾಸಕ ಎಸ್.ಎ. ರವೀಂದ್ರನಾಥ್ ಅವರು ಈ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳು : ಬಿ.ಜಿ. ಅಜಯ್ ಕುಮಾರ್, ಮಹಾಂತೇಶ್ ಬೀಳಗಿ, ಶ್ರೀಮತಿ ಸೌಮ್ಯ ನರೇಂದ್ರ ಕುಮಾರ್, ಹನುಮಂತರಾಯ, ವಿಶ್ವನಾಥ ಮುದಜ್ಜಿ, ಶ್ರೀಮತಿ ಗೀತಾ ದಿಳ್ಳೆಪ್ಪ, ವೀರೇಶ್ ಹನಗವಾಡಿ, ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್, ಬೇತೂರು ಸಂಗನಗೌಡ್ರು.

# ಯೂರಿಯಾ ರಸಗೊಬ್ಬರ ಮಿತ ಬಳಕೆಗೆ ಕೃಷಿ ಇಲಾಖೆ ಕರೆ

ದಾವಣಗೆರೆ, ಆ.19- ಜಿಲ್ಲೆಯಾದ್ಯಂತ ಇತ್ತೀಚಿನ ದಿನಗಳಲ್ಲಿ ಉತ್ತಮ ಮಳೆಯಾಗುತ್ತಿದ್ದು, ಯೂರಿಯಾ ರಸಗೊಬ್ಬರ ಹಾಗೂ ಇನ್ನಿತರ ರಸಗೊಬ್ಬರಗಳಿಗೆ ಹೆಚ್ಚಿನ ಬೇಡಿಕೆ ಕಂಡು ಬಂದಿದೆ.

ಜಿಲ್ಲೆಯಲ್ಲಿ ಪ್ರಮುಖವಾಗಿ ಖುಷ್ಕಿಯಲ್ಲಿ ಬೆಳೆಯಲಾಗುತ್ತಿರುವ ಮುಸುಕಿನ ಜೋಳ ಬೆಳೆಯಲ್ಲಿ ಪ್ರತಿ ಎಕರೆಗೆ 25 ಕೆಜಿ ಯೂರಿಯಾವನ್ನು ಮಾತ್ರವೇ ಮೇಲುಗೊಬ್ಬರವಾಗಿ ಬಳಕೆ ಮಾಡುವುದು ಸೂಕ್ತ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ರಸಗೊಬ್ಬರಗಳನ್ನು ಖರೀದಿಸುವಾಗ ಗರಿಷ್ಠ ಚಿಲ್ಲರೆ ಮಾರಾಟ ಬೆಲೆಗಿಂತ ಹೆಚ್ಚಿನ ಬೆಲೆಗೆ ಯಾರಾದರೂ ಮಾರಾಟ ಮಾಡುತ್ತಿದ್ದರೆ ಅಥವಾ ಬೇಕಾಗಿರುವ ರಸಗೊಬ್ಬರದ ಜೊತೆ ಬೇರೆ ಪರಿಕರಗಳನ್ನು ಕಡ್ಡಾಯವಾಗಿ ಖರೀದಿ ಮಾಡಲೇಬೇಕೆಂದು ಒತ್ತಾಯಿಸಿದರೆ ಕೃಷಿ ಇಲಾಖೆ ವಿಚಕ್ಷಣಾ ದಳದ ಅಧಿಕಾರಿಗಳಿಗೆ (8277931207) ಮಾಹಿತಿ ನೀಡಲು ಕೋರಿದೆ. ಹಾಗೂ ಸಂಬಂಧಿಸಿದ ತಾಲ್ಲೂಕುಗಳ ಸಹಾಯಕ ಕೃಷಿ ನಿರ್ದೇಶಕರುಗಳನ್ನು ಸಂಪರ್ಕಿಸಲು ಕೋರಿದ್ದಾರೆ.



# ಹಗಲೊತ್ತು ಸಹ ಉರಿಯುವ ಬೀದಿ ದೀಪಗಳು

ದಾವಾಣಗೆರೆ, ಆ. 19 - ನಗರದ ವಿನಾಯಕ ಬಡಾವಣೆ ಹತ್ತನೇ ಕ್ರಾಸಿನಲ್ಲಿ ಅನೇಕ ಬೀದಿಯಲ್ಲಿ ಬೀದಿ ದೀಪಗಳು ಹಗಲೊತ್ತು ಸಹ ಉರಿಯುತ್ತಿವೆ. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದ್ದರೂ ಸುಮ್ಮನಿದ್ದಾರೆ. ಇದು ದೇಶದ ಆಸ್ತಿ ನಷ್ಟವಲ್ಲವೇ ಈಗ ಮೂರು ದಿವಸವಾದರೂ ಈ ಈ ದೀಪಗಳು ಸದಾ ಉರಿಯುತ್ತಿವೆ. ಇದನ್ನು ನಿರ್ವಹಣೆ ಮಾಡುವವರು ಸರಿಯಾಗಿ ಮಾಡುತ್ತಿಲ್ಲ ಎಂದು ಆರೋಪಿಸಿದ್ದಾರೆ. ಇದನ್ನು ಸರಿಪಡಿಸ ಬೇಕು ಎಂದು ಸ್ಥಳೀಯ ನಿವಾಸಿಗಳು ಆಗ್ರಹಿಸಿದ್ದಾರೆ.

# ಪ್ರಜಾಪ್ರಭುತ್ವದಲ್ಲಿ ಸ್ವಾತಂತ್ರ್ಯ - ಸಮಾನತೆ ಕಾರ್ಯರೂಪಕ್ಕೆ ಬರಬೇಕು



ದಾವಣಗೆರೆ, ಆ.19- ಪ್ರಜಾಪ್ರಭುತ್ವದಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆ ಪದಗಳು ದಿನಾಚರಣೆಗೆ ಸೀಮತವಾಗದೆ, ಕಾರ್ಯರೂಪಕ್ಕೆ ಬರಬೇಕೆಂದು ಹಿರಿಯ ವಕೀಲರೂ ಆಗಿರುವ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಎಲ್. ಹೆಚ್.ಅರುಣ್‌ಕುಮಾರ್ ಅಭಿಪ್ರಾಯಪಟ್ಟರು.

ನಗರದ ಡಿ.ಆರ್.ಆರ್ ವಿದ್ಯಾಸಂಸ್ಥೆಗಳ ಶಾಲೆಗಳ ಆಶ್ರಯದಲ್ಲಿ ನಡೆದ 74ನೇ ಸ್ವಾತಂತ್ರ್ಯ ದಿನೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ದೇಶ ಸ್ವತಂತ್ರವಾಗಿದೆ. ಆದರೆ, ಜನರು ಬಡತನ, ಭ್ರಷ್ಟಾಚಾರ, ಜಾತಿವಾದ ಮತ್ತು ಅಪರಾಧಗಳಿಂದ ಇನ್ನೂ ಮುಕ್ತರಾಗಿಲ್ಲ. ಅವುಗಳ ವಿರುದ್ಧ ಗಂಭೀರವಾದ ಹೋರಾಟದ ಅವಶ್ಯಕತೆ ಇದೆ. ಭ್ರಷ್ಟಾಚಾರ ಮತ್ತು ಉತ್ತಮ ಆಡಳಿತ ಒಟ್ಟಿಗೆ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಡಿ.ಆರ್.ಆರ್ ಶಾಲೆಗಳ ಆಡಳಿತಾಧಿಕಾರಿ ಎಂ.ಬಸವರಾಜಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕರಾದ ಹೇಮಾವತಿ ಜಿ.ಸಾವಳಗಿ, ಎಲ್.ತಿಪ್ಪೇಸ್ವಾಮಿ, ಸುವರ್ಣ ಸಿ.ಕಂಠಿ, ಆರ್.ಭೋಜರಾಜ್ ಯಾದವ್ ಮತ್ತು ಶಿಕ್ಷಕರಾದ ಕರಿಬಸಪ್ಪ, ಹಾಲೇಶ್ ಮತ್ತಿತರರು ಭಾಗವಹಿಸಿದ್ದರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೆಚ್.ಕೆ.ಆರ್. ಸರ್ಕಲ್, ಕೆ.ಇ.ಬಿ ಕಾಲೋನಿ, ನಿಟುವಳ್ಳಿ ಹಾಗು ನಿಟುವಳ್ಳಿ ಹೊಸಬಡಾವಣೆ, ಮೌನೇಶ್ವರ ಬಡಾವಣೆ, ಸೈಯದ್ ಪೀರ್ ಬಡಾವಣೆ, ಐ.ಟಿ.ಐ. ರಿಂಗ್‌ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ಜಯನಗರ ಫೀಡರ್‌ನ ಜಯನಗರ,ದುರ್ಗಾಂಬಿಕ ದೇವಸ್ಥಾನ ಸುತ್ತ ಮುತ್ತ, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಭಗೀರಥ ಸರ್ಕಲ್, ಕಾಳಿಕಾಂಬ ದೇವಸ್ಥಾನ, ಶಕ್ತಿನಗರ, ಹಾಗು ಸುತ್ತ ಮುತ್ತಲಿನ ಪ್ರದೇಶಗಳು, ಇ.ಎಸ್.ಐ ಆಸ್ಪತ್ರೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ ಹಾಗೂ ಜಿ.ಎಂ.ಐ.ಟಿ. ಕಾಲೇಜು, ದೇವರಾಜ ಅರಸು ಬಡಾವಣೆ, ಪೂಜಾ ಹೋಟಲ್, ಸಾಯಿ ಹೋಟಲ್, ಕೋರ್ಟ್ ಸುತ್ತ ಮುತ್ತ, ಗಿರಿಯಪ್ಪ ಲೇಔಟ್, ಪಿಬಿ. ರಸ್ತೆ, ಸಂಗೊಳ್ಳಿ ರಾಯಣ್ಣ ಸರ್ಕಲ್, ವಾಣಿಜ್ಯ ತೆರಿಗೆ ಕಛೇರಿ, ಡೂಡಾ ಕಛೇರಿಗಳು, ವಿನಾಯಕ ನಗರ, ಶಂಕರ ವಿಹಾರ್ ಬಡಾವಣೆ, ಮೋತಿ ಬೇಕರಿ ಮತ್ತು ಸುತ್ತಮುತ್ತ ಪ್ರದೇಶಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಜಾಲತಾಣದಲ್ಲಿ ಕೋವಿಡ್ ಫಲಿತಾಂಶ

ದಾವಣಗೆರೆ, ಆ. 19 - ಕೊರೊನಾ ಪರೀಕ್ಷೆಯನ್ನು (ಆರ್‌ಟಿಪಿಆರ್/ ಆಂಟಿಜೆನ್) ಮಾಡಿಸಿಕೊಂಡಿರುವ ನಾಗರಿಕರು davanagere.nic.in ಜಾಲತಾಣದಲ್ಲಿ ಕೋವಿಡ್ ಫಲಿತಾಂಶ ಶೀರ್ಷಿಕೆ ಅಡಿಯಲ್ಲಿ SR-FID ಸಂಖ್ಯೆಯನ್ನು ನಮೂದಿಸಿ ತಮ್ಮ ಫಲಿತಾಂಶದ ವರದಿಯನ್ನು ವೀಕ್ಷಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

# ಹಬ್ಬಗಳು ಮುಂಜಾಗ್ರತೆ ಸಹಿತ ಭಕ್ತಿ ಪೂರಕವಾಗಿರಲಿ




**(3ನೇ ಪುಟದಿಂದ)** ಕೊರೊನಾ ನಿಯಂತ್ರಣಕ್ಕೆ ಜನರು ಸಹಕರಿಸಬೇಕೆಂದರು.

ದೂಡಾ ಅಧ್ಯಕ್ಷ ರಾಜನಳ್ಳಿ ಶಿವಕುಮಾರ ಮಾತನಾಡಿ, ಕೊರೊನಾ ಮಹಾ ಸಂಕಷ್ಟದ ಸಂದರ್ಭದಲ್ಲಿ ಹಬ್ಬದ ಆಚರಣೆ ನಮ್ಮ ಆತ್ಮಸಾಕ್ಷಿಗೆ ಬಿಟ್ಟಿದ್ದು. ಎಲ್ಲರೂ ಸರ್ಕಾರದ ನಿಯಮಗಳನ್ನು ಪಾಲಿಸುವ ಮೂಲಕ ಹಬ್ಬವನ್ನು ಶಾಂತಿಯುತವಾಗಿ ಆಚರಿಸೋಣವೆಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಮಾತನಾಡಿ, ಶಾಂತಿ-ಸೌಹಾರ್ದದ ನೆಲೆಯಲ್ಲಿ ಸರ್ಕಾರದ ನಿಯಮಗಳನ್ನು ಪಾಲಿಸುವ ಮೂಲಕ ನಮಗಿರುವ ಕಾನೂನಿನ ಪರಿಮಿತಿಯಲ್ಲಿ ಹಬ್ಬಗಳನ್ನು ಆಚರಣೆ ಮಾಡಬೇಕು. ಬೇರೆಯವರ ಭಾವನೆಗಳಿಗೆ ಧಕ್ಕೆಯಾಗಬಾರದು ಎಂದು ಕಿವಿಮಾತು ಹೇಳಿದರು. ಜಿಲ್ಲೆಯಲ್ಲಿ 1442 ರೌಡಿ ಶೀಟರ್ಸ್ ಇದ್ದಾರೆ. ಎಲ್ಲವೂ ಪರ್ಮನೆಂಟ್ ರೆಕಾರ್ಡ್ಸ್ ಅಲ್ಲ. ಜಿಲ್ಲೆಗೆ ಸಂಬಂಧಪಟ್ಟ ಕೆಟ್ಟ ಘಟನೆಗಳ ಹಿನ್ನೆಲೆಯಲ್ಲಿ ಜನರಿಗೆ ಶಾಂತಿ ಒದಗಿಸುವ ದಿಸೆಯಲ್ಲೆ ನಿಗಾ ಇಡಲು ಮಾಡಲಾಗಿದೆ. ವಯಸ್ಸಾದವರು, ಕೇಸ್ ಖುಲಾಸೆಯಾದವರು, ಊರು ಬಿಟ್ಟು ಹೋಗಿ ಬೇರೆ ಕಡೆ ನೆಲೆಸಿದವರು ಹಾಗೂ ಜೀವನದಲ್ಲಿ ಬದಲಾಗಿ ಬದುಕು ನಡೆಸುತ್ತಿರುವವರನ್ನು ಸದ್ಯದಲ್ಲಿಯೇ ರೌಡಿ ಶೀಟರ್ಸ್‌ನಿಂದ ತೆಗೆದು ಹಾಕುತ್ತೇವೆಂದರು.

ಹಿಂದೂ ಸಮಾಜದ ಮುಂಖಡ ಕೆ.ಬಿ. ಶಂಕರನಾರಾಯಣ ಮಾತನಾಡಿ, ಕೊರೊನಾದಂತಹ ಸಂಕಷ್ಟ ಸಮಯದಲ್ಲಿ ಗಣೇಶ ಮತ್ತು ಮೊಹರಂ ಹಬ್ಬವನ್ನು ನಗರದ ಜನತೆ ಅದ್ದೂರಿಯಾಗಿ ಆಚರಿಸದೆ ಶಾಸ್ತ್ರೋಕ್ತವಾಗಿ ಸರಳವಾಗಿ ಆಚರಿಸುವ ಮೂಲಕ ಸರ್ಕಾರದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಿದೆ ಎಂದರು.

ಮುಸ್ಲಿಂ ಸಮಾಜದ ಮುಖಂಡ ಸಾಧಿಕ್ ಪೈಲ್ವಾನ್ ಮಾತನಾಡಿ, ಜಿಲ್ಲೆಯ ಶಾಂತಿ ತೋಟದಲ್ಲಿ ಮುಳ್ಳು ಅರಳಬಾರದು, ಹೂ ಅರಳಬೇಕು. ಜೊತೆ ಜೊತೆಗೆ ಎರಡು ಹಬ್ಬಗಳು ಬಂದಿರುವ ಹಿನ್ನೆಲೆಯಲ್ಲಿ ಪ್ರತಿಯೊಬ್ಬರೂ ಸಹಕರಿಸಿಕೊಂಡು ಹಬ್ಬ ಆಚರಿಸಬೇಕು ಎಂದರು.

ಕ್ರೈಸ್ತ ಧರ್ಮದ ಫಾದರ್ ಹೊನ್ನನಾಯರ ಮಾತನಾಡಿ, ಹಬ್ಬಗಳ ಆಚರಣೆಗಿಂತಲೂ ಅನುಕರಣೆ ಬಹಳ ಮುಖ್ಯ. ಇತ್ತೀಚೆಗೆ ಧರ್ಮ ಹಾಗೂ ದೇವರಗಳ ಹೆಸರಲ್ಲಿ ಶೋಷಣೆ, ದಂಗೆ ಹಾಗೂ ಅಸಮಾಧಾನಗಳು ಉಂಟಾಗುತ್ತಿವೆ. ಅದು ಆಗಬಾರದು. ಸರ್ಕಾರದ ನಿಯಮಗಳನ್ನು, ಕರ್ತವ್ಯವಾಗಿ ಪಾಲಿಸುತ್ತಾ ಎಲ್ಲರೂ ಒಟ್ಟಾಗಿ ಹಬ್ಬಗಳನ್ನು ಆಚರಿಸಬೇಕೆಂದರು.

ಹೆಚ್ಚುವರಿ ಜಿಲ್ಲಾ ಪೊಲೀಸ್ ಅಧಿಕಾರಿ ಎಂ.ರಾಜು ಪ್ರಾಸ್ತವಿಕವಾಗಿ ಮಾತನಾಡಿದರು. ಸಭೆಯಲ್ಲಿ ನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ದಿಎಚ್‌ಓ ಡಾ. ರಾಘವೇಂದ್ರಸ್ವಾಮಿ, ವಿವಿಧ ಸಮಾಜದ ಮುಖಂಡರುಗಳಾದ ಗೌಡ್ರು ಚನ್ನಬಸಪ್ಪ, ಸರ್ದಾರ್ ಚನ್ನಗಿರಿ, ಅಮಾನುಲ್ಲಾಖಾನ್, ಸತೀಶ್ ಪೂಜಾರ್, ಪೊಲೀಸ್ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು, ವಿವಿಧ ಇಲಾಖಾ ಅಧಿಕಾರಿಗಳು ಸೇರಿದಂತೆ ಇತರರು ಇದ್ದರು.

# ಕೊಡಗನೂರು ಐಟಿಐ ಆನ್‌ಲೈನ್ ಪ್ರವೇಶ ಆರಂಭ

ದಾವಣಗೆರೆ, ಆ.19 - ಐಟಿಐ ಆನ್‌ಲೈನ್ ಪ್ರವೇಶ ಕುರಿತು ಕೊಡಗನೂರಿನಲ್ಲಿ ಪ್ರಾರಂಭವಾಗಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ಎರಡು ವೃತ್ತಿಗಳಲ್ಲಿ (ವಿದ್ಯುತ್ ಕರ್ಮಿ ಮತ್ತು ಜೋಡಣೆ) ತರಬೇತಿಯನ್ನು ನೀಡಲಾಗುತ್ತಿದೆ.

ಪ್ರವೇಶ ಬಯಸುವ ಅಭ್ಯರ್ಥಿಗಳು ಇಂದಿನಿಂದ ಇದೇ ದಿನಾಂಕ 31 ರವರೆಗೆ ಆನ್‌ಲೈನ್ ಮೂಲಕ www.emptrg.kar.nic.in ಈ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ಸಮಯದಲ್ಲಿ ಪ್ರಾಚಾರ್ಯರನ್ನು ಅಥವಾ ಇಲಾಖೆಯ ಜಾಲತಾಣವನ್ನು ಸಂಪರ್ಕಿಸಿ ವಿವರಗಳನ್ನು ಪಡೆಯಬಹುದು ಎಂದು ಕೊಡಗನೂರು ಐಟಿಐ ಕಾಲೇಜಿನ ಪ್ರಾಚಾರ್ಯರು ತಿಳಿಸಿದ್ದಾರೆ.

# ವಿರಕ್ತ ಮಠದ ಜಯದೇವ ಶ್ರೀಗಳ ನಿಧನಕ್ಕೆ ಶ್ರೀ ಬಸವ ಪ್ರಭು ಸ್ವಾಮೀಜಿ ಶೋಕ

ದಾವಣಗೆರೆ, ಆ.19- ಇಂದು ಲಿಂಗೈಕ್ಯರಾಗಿರುವ ಚನ್ನಗಿರಿಯ ಶ್ರೀ ಹಾಲಸ್ವಾಮಿ ವಿರಕ್ತಮಠದ ಶ್ರೀ ಜಯದೇವ ಮಹಾಸ್ವಾಮೀಜಿಗೆ ನಗರದ ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ. ಜಯದೇವ ಸ್ವಾಮೀಜಿ ಅಗಲಿಕೆಯಿಂದ ಅಪಾರ ಭಕ್ತರಿಗೆ ತುಂಬಲಾರದ ನಷ್ಟವಾಗಿದೆ ಎಂದು ಬಸವ ಪ್ರಭು ಸ್ವಾಮೀಜಿ ಹೇಳಿದ್ದಾರೆ.

ಶ್ರೀ ಜಯದೇವ ಮಹಾಸ್ವಾಮೀಜಿಗೆ ಜಿಲ್ಲಾ ವೀರಶೈವ ಮಹಾಸಭಾದ ಅಧ್ಯಕ್ಷ ದೇವರಮನೆ ಶಿವಕುಮಾರ್, ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷ ಎಸ್. ಓಂಕಾರಪ್ಪ, ಸಾಮಾಜಿಕ ಸೇವಾ ಕಾರ್ಯಕರ್ತ ಜೆ. ಸೋಮನಾಥ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

# ಪರಿಹಾರ ಪಡೆಯಲು ರೈತರು ದಾಖಲಾತಿ ಸಲ್ಲಿಸಿ

ದಾವಣಗೆರೆ, ಆ. 19 - ಲಾಕ್‌ಡೌನ್ ವೇಳೆ ಹಣ್ಣು ಮತ್ತು ತರಕಾರಿ ಬೆಳೆದು ಸಂಕಷ್ಟಕ್ಕೆ ಒಳಗದ ರೈತರಿಗೆ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಸರ್ಕಾರ ಪರಿಹಾರ ಘೋಷಿಸಿದ್ದು, ರೈತರು ಅಗತ್ಯ ದಾಖಲಾತಿಗಳನ್ನು ಸಲ್ಲಿಸದೇ ಇರುವ ಕಾರಣ ಪರಿಹಾರ ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ಕೂಡಲೇ ಸಂಬಂಧಪಟ್ಟ ರೈತರು ಇದೇ ದಿನಾಂಕ 31 ರೊಳಗೆ ದಾವಣಗೆರೆ ತಾಲ್ಲೂಕು ತೋಟಗಾರಿಕೆ ದಾಖಲಾತಿ ಸಲ್ಲಿಸಲು ಸೂಚಿಸಲಾಗಿದೆ.

2019-20 ನೇ ಸಾಲಿನ ಬೆಳೆ ಸಮೀಕ್ಷೆಯಲ್ಲಿರುವ ದಾವಣಗೆರೆ ತಾಲ್ಲೂಕಿನ ರೈತ ಬಾಂಧವರು ಅಗತ್ಯ ದಾಖಲಾತಿಗಳಾದ ಪ್ರಸಕ್ತ ಸಾಲಿನ ಪಹಣಿ, ಆಧಾರ್‌ಕಾರ್ಡ್, ಚಾಲ್ತಿಯಲ್ಲಿರುವ ಬ್ಯಾಂಕ್ ಪಾಸ್‌ಪುಸ್ತಕದ ಜೆರಾಕ್ಸ್ ಪ್ರತಿ, ಫಲಾನುಭವಿ ಮರಣ ಹೊಂದಿದ್ದಲ್ಲಿ ಮರಣ ದೃಢೀಕರಣ ಪತ್ರ ಇತ್ಯಾದಿ ಸಲ್ಲಿಸದೇ ಇರುವ ಕಾರಣ ಪರಿಹಾರ ವಿತರಣೆ ವಿಳಂಬವಾಗುತ್ತಿದೆ. ಆದ ಕಾರಣ ರೈತರು ದಾಖಲಾತಿಗಳನ್ನು ಸಲ್ಲಿಸಬೇಕೆಂದು ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಟಿ.ಆರ್. ಶಶಿಕಲಾ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

# ನಗರದ ಶ್ರೀ ಲಿಂಗೇಶ್ವರ ಸ್ವಾಮಿ ರಥೋತ್ಸವ ರದ್ದು



ಕೊರೊನಾ ಹಿನ್ನೆಲೆಯಲ್ಲಿ ಜಿಲ್ಲಾಡಳಿತದ ಆದೇಶದ ಮೇರೆಗೆ ಇಂದು ನಡೆಯಬೇಕಾಗಿದ್ದ ನಗರದ ಶ್ರೀ ಲಿಂಗೇಶ್ವರ ಸ್ವಾಮಿ ರಥೋತ್ಸವವನ್ನು ರದ್ದುಪಡಿಸಲಾಗಿದೆ. ಅನ್ನಸಂತರ್ಪಣೆ ಇರುವುದಿಲ್ಲ. ದೇವಸ್ಥಾನದಲ್ಲಿ ದೇವರ ದರ್ಶನ ಇರುತ್ತದೆ ಎಂದು ಶ್ರೀ ಲಿಂಗೇಶ್ವರ ದೇವಸ್ಥಾನ ಸಂಘದವರು ಕೋರಿದ್ದಾರೆ.













JANATHAVANI - RNI No: 27369/75, KA/SK/CTA-275/2018-2020. O/P @ J.D. Circle P.O. Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte